KARNATAKA

Kabya Kalanidhi Series,

No. 2

# BHAVA CHINTA RATNAM.

BY

GUBBI MALLANARYA.

ಗುಬ್ಬಿ ಮಲ್ಲಣಾರ್ಯ ವಿರಚಿತಂ

# ಭಾವಚಿಂತಾರತ್ನಂ.

EDITED & PUBLISHED

BY

S. G NARASIMHACHAR

Librarian, Government Oriental Library, Mysore.

AND

M. A. RAMANUJA IYENGAR

Asst. Master, Wesleyan High School Mysore.

MYSORE.

THE STAR PRESS.

1900.

UNIVERSAL LIBRARY
OU_200598
UNIVERSAL LIBRARY

Registered according to Act XXV. of 1867.

(ALL RIGHTS RESERVED.)

# ಪೀಠಿಕೆ.

ಈ ಕವಿಯು ತಂದೆಗೆ ಗುರುಭಕ್ತನೆಂದು (ಸಂ ೧. ೧೫) ಹೆಸರು;
ಪಿತಾಮಹನಿಗೆ ಗುಬ್ಬಿಮಲ್ಲಣಾರ್ಯನೆಂದು ಹೆಸರು. ಆತನು "ವಾತೂಲ
ತಂತ್ರಕ್ಕೆ ಟೀಕು" ಬರೆದಂತೆಯೂ, "ಆಗಮಗ್ರಂಥವಚನದಿಂ ಗಣ
ಭಾಷ್ಯರತ್ನಮಾಲೆ" ಯನ್ನು ರಚಿಸಿದಂತೆಯೂ (ಸ. ೧. ೧೩)
ತಿಳಿಯಬರುತ್ತದೆ. ಈ ಕವಿಯ ನಿಜವಾದ ಹೆಸರು "ಬಸವಪಾ
ರಾಣದುರುಮಲ್ಲಣಾರ್ಯ" ಎಂಬುದು; ಆದರೂ ಪಿತಾಮಹನ ಹೆಸರಿನಿಂ
ದಲೆ ಕರೆಯಲ್ಪಡುತ್ತಿರುವನು. ಷಡಕ್ಷರಿದೇವನು ತನ್ನ "ರಾಜಶೇಖ
ರವಿಲಾಸ" ದಲ್ಲಿ- ' ಆ ಕಥೆಯುಂ ಕೃತಾರ್ಥಸುಮನೋಲತೆಯುಂ ಪರಮ
ಲ್ಲಣಾರ್ಯರು । ವೀರಕವಿರಾಜರಾಜಿನುತಮಾಗಿರೆ ವರ್ಣಕದಿಂದೆ ಭಾವರ॥
ತ್ನಾಕರವಾಗಿ ಪೇಳ್ದರ್" ಎಂದು ಸ್ತುತಿಸಿರುವುದರಿಂದ, ಈ ಕವಿಯು
ಷಡಕ್ಷರಿದೇವನಿಗಿಂತ ಹಿಂದಿನವನೆಂದು ವ್ಯಕ್ತವಾಗುತ್ತದೆ. ಮೇ॥ ರೈಸ
ಸಾಹೇಬರವರು ಸುಮಾರು ಕ್ರಿ. ಶ. ೧೩೬೯ ರಲ್ಲಿ ಇದ್ದವನೆಂದು
ಅಭಿಪ್ರಾಯಪಡುತ್ತಾರೆ.

ಕವಿಯು ತನ್ನ ಭಕ್ತನಾದ ಚೇರಮಾಂಕನ ಪ್ರಾರ್ಥನೆಯ
ಮೇರೆ ಈ ಗ್ರಂಥವನ್ನು ಬರೆದುದಾಗಿ ಹೇಳುತ್ತಾನೆ. ಈ ಗ್ರಂಥದ
ಕಥೆಯನ್ನು "ತಿರುಜ್ಞಾನಿಸಂಬಂಧಿಯು" "ಕುಲಚ್ಚರಿಯಗೆ" ಪ್ರಣವ
ಪಂಚಾಕ್ಷರೀಮಹಿಮೋಪದೇಶಾರ್ಥವಾಗಿ ದ್ರಾವಿಡಭಾಷೆಯಲ್ಲಿ ಹೇಳಿದಂ
ತೆಯೂ, ಅದನ್ನು ತಾನು ಕನ್ನಡಿಸಿದಂತೆಯೂ ಸಂಧಿ ೧. ೨೧ ನೆಯ
ಪದ್ಯದಲ್ಲಿ ಹೇಳುತ್ತಾನೆ. ಈಗ್ರಂಥಕ್ಕೆ "ಭಾವಚಿಂತಾರತ್ನ"ವೆಂದು ಹೆಸರು
ಬರುವುದಕ್ಕೆ "ಕೃತಿಯ ಪಲ್ಲವಿ ತೊಡಗಿ ಪೂರ್ಣಮಪ್ಪನ್ನಮೀ । ಕೃತಿ
ಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ । ಕೃತಿಗದುನಿಮಿತ್ತದಿಂ ಭಾವ
ಚಿಂತಾರತ್ನವೆಂಬಹೆಸರೀಕಾವ್ಯಕೆ॥" ಎಂದು ಕಾರಣವನ್ನು ತಿಳಿಸುತ್ತಾನೆ.
ಗ್ರಂಥಾದಿಯಲ್ಲಿ ಭೋಗಮಲ್ಲೇಶನನ್ನು ಸ್ತುತಿಸಿದ್ದಾನೆ. ಬಳಿಕ ಈಶ್ವ

ರನನ್ನೂ, ಸಿದ್ಧಮಲ್ಲಿಕಾರ್ಜುನಗುರುವನ್ನೂ, ನಂದೀಶಭೃಂಗೀಶವೀರೇಶರನ್ನೂ, ಅಲ್ಲಮಪ್ರಭು ಬಸವ ಚೆನ್ನಬಸವರನ್ನೂ, ಶಿವಲೆಂಕಮಂಚಣ್ಣಪಂಡಿತ ಶ್ರೀಪತಿಪಂಡಿತ ಮಲ್ಲಿಕಾರ್ಜುನಪಂಡಿತರೆಂಬ ಪಂಡಿತತ್ರಯನನ್ನೂ, ಸಿದ್ಧರಾಮ ಪಾಲ್ಕುರಿಕೆ ಸೋಮರನ್ನೂ, ಬಳಿಕ ಕಾಳಿದಾಸ ಬಾಣ ಮಯೂರರೆಂಬ ಸಂಸ್ಕೃತಕವಿಗಳನ್ನೂ, ಪದ್ಮರಸ ಹರಿಹರರೆಂಬ ಕರ್ಣಾಟಕಕವಿಗಳನ್ನೂ ಸ್ಮರಿಸುತ್ತಾನೆ. ಅನಂತರ ಗೂಳೂರಶಾಂತಿದೇವ, ಗುಮ್ಮಳಾಪುರದ ಶಾಂತೀಶಗುರು, ನಾಗವಲ್ಲಿಯ ಶಿವಪೂಜೆಯಾರ್ಯ, ಚಿಕ್ಕಬಸವರೆಂಬ ಗುರುಗಳನ್ನು ಸ್ಮರಿಸುತ್ತಾನೆ. ಈತನ ಗುರು ಸಿದ್ಧಮಲ್ಲೇಶ. ಈ ಗ್ರಂಥದ ಕಥಾಗರ್ಭವನ್ನು—

“ ತರುಣಿ ಪ್ರೇರಿದಣುಗನಶ್ವದ ಖುರದು ಹತಿಯಿಂದ ।ಹರಭಕ್ತನೆಳೆಯೆಲವ ಕೇಳ್ದು ಕೋಲೆಯಿಂದವಂ । ಪರಿಕಿಸಿ ನಿಜಾತ್ಮಜಂ ಮೊದಲಾಗಿಗೆಂದ ನುಡಿಗಾಮುದ್ದುಮಗನ ತಲೆಯ ॥ ಅಱಿಸುವೆತೆಯೊಳು ಮತ್ತೆ ಭಕ್ತವಧೆಯೆಂದು ನಿಜ । ಶಿರದೊಡನೆ ತಱಿದೆಂಟು ತಲೆಗಳಂ ಪಡೆದುಶಂ । ಕರನೂಗೆಸ ಪೋದ ಸತ್ಯೇಂದ್ರಚೋಳನ ಕಥೆಯನಿದ ಬೆಳಸಿ ಕೃತಿಮಾಪ್ಪೆನು ” (ಸಂ. ೧. ೨೨)ಎಂಬ ಪದ್ಯದಲ್ಲಿ ಹೇಳುತ್ತಾನೆ. ಮತ್ತು ಪ್ರತಿ ಆಶ್ವಾಸದ ಕೊನೆಯಲ್ಲಿ,

“ ಇದು ಸಕಲಭಕ್ತಪದಪಂಕೇಜರೇಣುವ । ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ । ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಲಕರ್ಣ ॥ ಹೃದಯಮಸ್ತಕವದನಸರ್ವಾಂಗಸಾಖ್ಯಕಾ । ಸ್ಪದನಖಿಳಸುಜನರ್ಗೆ ಪಂಚಾಕ್ಷರಿಯ ಮಹ । ತ್ವದ ಬೋಧೆಯೆಂದೋದಿದೊಡೆ ಕೇಳದರಿಗಿಷ್ಟಸಿದ್ಧಿ ಸರ್ವರಿಗಪ್ಪುದು ॥ ”

ಎಂಬ ಪದ್ಯವನ್ನು ಬರೆಯುತ್ತಾನೆ. ಈ ಗ್ರಂಥದಲ್ಲಿ ೩೬೦ ವಾರ್ಧಿಕಷಟ್ಪದಿಗಳಿವೆ. ಕವಿಯು ಪ್ರತಿ ದಿನವೂ ಒಂದೊಂದು ಪದ್ಯವನ್ನು ವಿರಚಿಸಿ ಶಿವಪೂಜಾಕಾಲದಲ್ಲಿ ಶಿವನಿಗೆ ಸಮರ್ಪಣೆ ಮಾಡುತ್ತ ಒಂದು ವರ್ಷಕಾಲ ನಡೆಸುತ್ತಬಂದುದರಿಂದ ಈ ಗ್ರಂಥದಲ್ಲಿ ೩೬೦ ಪದ್ಯಗಳಾದುವೆಂದು ಒಂದು ಪ್ರವಾದವುಂಟು.

ಗುಬ್ಬಿ ಮಲ್ಲಣಾರ್ಯ ವಿರಚಿತಂ

# ಭಾವಚಿಂತಾರತ್ನಂ.

( ವಾರ್ಧಿಕಷಟ್ಪದಿ )

ಶ್ರೀವಿಮಲಗುಹನಮರಗುಂಡಮಲ್ಲೇಶ್ವರನ |
ಸೇವಾನಿಮಿತ್ತದಿಂದಿಳೆಯೊಳೊಗೆದಾಪ್ರಣವ |
ಜೀವಪಂಚಾಕ್ಷರಿಯ ಬಿತ್ತರಿಸಿದಂ ಕುಲಚ್ಚರಿಯಗಾನಂದದಿಂದ ||
ಶ್ರೀಗುರುಸದಾನಂದ ವಾಗೀಶವರದ ತುಹಿ |
ನಾಗಜಾರ್ಧಾಂಗ ಮಹಿಮಾಗರಿಮಚರಣ ಸಕ |
ಲಾಗಮಸ್ತುತ್ಯ ಶಶಿಭಾಗಭೂಷಿತಮಕುಟ ಯೋಗಿಜನಹೃನ್ನಿವಾಸ ||
ರಾಗಾದಿರಹಿತ ಸುಖಸಾಗರನಲಾ ನೀನು |
ಭೋಗಮಲ್ಲೇಶ ಬಿಡದೀಗಳೆಮ್ಮಯ ಕೃತಿಯ |
ಭೂಗಗನದಿಗ್ಭರಿತವಾಗಿ ಪಸರಿಸುವಿನಂ ಸಾಗಿಸುವುದಕ್ಕಱಿಂದೆ || ||೧||
ತೊಡೆಯನೇಱಿದಳಂಬಿಕಾಮಾತೆ ವ್ಯಾಜದಿಂ |
ಜಡವನಿತೆ ಶಿರವನಡರಲ್ ಮೀಱ ತಡೆಯೆ ತಲೆ |
ಜಡೆಗಟ್ಟಲುರಿಯೆ ಪಣೆಗಣ್ಣೊಡದ ಕಣ್ ಕಂದೆ ಬಲಗಣ್ಣೊಳಡರೆ ಕೆಂಪು ||
ಬಿಡದೆ ಮೆಯ್ಯೆಲುದೋಱೆ ಮಲಿನ ಕಂಠದೊಳುಣ್ಮೆ |
ತಡೆಯದಂಗದ ಸಮ್ಮವೊಣಗಿತೆಮ್ಮಯ್ಯಂಗೆ |
ಯೊಡೆಯರಿಲ್ಲೆಂದು ಬಾಯೂರ್ವ ಗುಹನಂ ನೋಡಿ ನಗುವ ಶಿವ ರಕ್ಷಿಸೆಮ್ಮ || ||೨||
ಪರುಷಣಂಗೆಯ್ಯೆ ದೀಕ್ಷಾರ್ಥಿಗಳನಲ್ಲಿ ಚಿ |
ತ್ತರುಣಿ ವಿಸ್ಫುರಿಸೆ ಹಸ್ತಾಬ್ಜವಿಕಸನವಾಗೆ |
ಪರತರಬ್ರಹ್ಮಪುರುಷನ ಪೆತ್ತು ಸದ್ಭಕ್ತಿಭಾರತಿಯನಲ್ಲಿ ಪಡೆದು ||
ಕರುಣದಿಂದಿರ್ವರ್ಗೆ ಪರಿಣಯಂಗೆಯ್ದು ಭಾ |
ಸುರವರ್ಯನೇಲೇಶಕೇತಣಾರ್ಯನೊಲೆಸೆವ |
ವರಸಿದ್ಧಮಲ್ಲಿಕಾರ್ಜುನಗುರುವೆ ಜಯ ಪರಾತ್ಪರನೆ ಮತ್ಕಲ್ಪತರುವೆ || ||೩||

ನೆಟ್ಟನಾಧರ್ಮಾರ್ಥಕಾಮಮೋಕ್ಷಂಗಳಂ ।
ಮುಟ್ಟಿ ಹರ್ಯಜರಿಂದ್ರಪದವನೊದದಾವಗಂ ।
ನಿಟ್ಟವಧಿ ವಿಧಿಗಳ ಶಿರೋಮಧ್ಯದೊಳ್ ನಿಂದು ಬಿನದಿಸುತ್ತಿಲ್ಕಿಂದೆ ॥
ಪಟ್ಟಿರ್ಪ ನಾಲ್ಕು ಮೂಜಿರಡಡಿಗಳಿಂದಲಳ ।
ವಟ್ಟ ನಂದೀಶ ಭೃಂಗೀಶ ವೀರೇಶರೆ ।
ಬಿಟ್ಟಗೀ ಕೃತಿಯು ನವರಸದ ವಿಘ್ನವ ಮತಿಯು ಕೊಟ್ಟು ರಕ್ಷಿಪುದಬ್ಬಿಯಿಂ ॥ ।೪॥

ನಿರುಪಮನಿರಂಗನೆನಿಪಲ್ಲಮಪ್ರಭುರಾಯ ।
ಹರಭಕ್ತರೇ ಸಂಗಮೇಶರೆಂದೆಂಬ ಬಸ ।
ವರಸ ವಿಮಲಪ್ರಸಾದಾಂಗಿಯುಹ ಚೆನ್ನಬಸವೇಶರಿವರಂಘ್ರಿಕಮಲ ॥
ಪರಮಷಟ್ಸ್ಥಲಮಾದಮವ ನುತಿಸುವಂ ನುತಿಸಿ ।
ನಿರುತಷಟ್ಪದಿಯಾದುವಿವು ಕಮಲಜಾಂಡದೊಳ್ ।
ಪರಿಕಲಿಸಿ ಪಸರಿಸುಗೆ ಚರಗುರುಶಿವಾರ್ಕಾಕರ ಮನಕೂತ್ಸವಂಬೀಜುತೆ ॥ ॥೫॥

ಹರಿಯುನಭವಂಗೆ ವಂದನೆಗೆಯ್ಸಿ ಶಿವಿಯುನಂ ।
ಬರದಲ್ಲಿ ಕಟ್ಟಿಯೂರ್ಧ್ವಾಕ್ಷಿಗಳ ಪಡೆದು ನಿ ।
ಷ್ಠುರವಕ್ರಮುಂದತೀವ್ರದ ದುರ್ಗುಣಗಳ ವೈಷ್ಣವ ವಿಪ್ರ ಜೈನರೆಂಬ ॥
ವರವಾತಪಿತ್ತದುಶ್ಶ್ಲೇಷ್ಮನಂ ಕಿಡಿಸಿ ರಂ ।
ಕರಲಿಂಕಮುಂಚಣ್ಣ ಶ್ರೀಪತೀಶ್ವರದೇವ ।
ನುರುಮಲ್ಲಿಕಾರ್ಜುನಂ ಪಂಡಿತತ್ರಯುವಾದರೆಮ್ಮ ಭವರೋಗಗಳಿಗೆ ॥ ।೬॥

ಧರೆಯು ರಕ್ಷಿಸೆ ವೃಷ್ಪಸುಗ್ಗಲೆಯೊಳುದಿಸಿ ಸಿರಿ ।
ಗಿರಿಯು ಲಿಂಗಂಗಳಂ ಸೊನ್ನಲಗೆಯೊಳ್ ನಿಲಿಸಿ ।
ಕರುಣದಿಂ ಗಂಧರ್ವರಂ ಸಲಹಿ ವಿಷದಿವ್ಯಗಳ ಗೆಲಿದಧೋದೈತ್ಯೆಯಾ ॥
ಪೊರೆದು ಖರ್ಪರನ ಗೆಲಿದಿಕ್ಕಿದು ಸಿಡಿಲಂ ತಗೆದು ।
ನರಕಿಗಳನಿತ್ಯಾದಿಬಹುಮಹಿಮೆಯುಂ ತಳೆದ ।
ಗುರುಸಿದ್ಧರಾಮ ನವರಸಸಿದ್ಧ ಸೀನೆಮ್ಮ ಕೃತಿಗೆ ಕೊಡು ನಿರ್ವಿಘ್ನಮಂ ॥ ।೭॥

ಕಾಮಿತಾರ್ಥಾಮೃತರಸಾದಿಲಕ್ಷಣಸೌವ್ಯ ।
ರಾಮಣೀಯಕಪದಾಲಂಕಾರಗನ್ನ ನಿಜ ।
ಸೀಮೆಯೆನಿಸುವ ಸ್ಮೈಪನೀಕೃತಿಗ ಕಾಡುವ ಚಿಂತಾರತ್ನವೆನಿಪ ಪೆಸ್ರಾ ॥
ನಾಮನಂ ಸದ್ಗುಣಸ್ತೋಮನಂ ಬುಧಸಾರ್ವ ।
ಭೌಮನಂ ಸಜ್ಜನಪ್ರೇಮನಂ ಶೀಲನಿ ।
ಶ್ರಾಮನಂ ಪಾಲ್ಕುರಿಕೆಸೋಮನಂ ಕೃತ್ಕುಮುದಧಾಮದೊಳ್ ವಿಗ ಜಾನಿಪೆಂ ॥೮॥

ಪರಮಸುಖವಾಸನಂ ವರಕಾಳಿದಾಸನಂ ।
ಕರದಾನಿಜಾಣನಂ ಶರಣನ ಬಾಣನಂ ।
ನಿರುಪಮನಿಚಾರನಂ ಗರುವಮಾಯೂರನಂ ಪದ್ಮರಸನಂ ಸರಸನಂ ॥
ಹರಿಹರಕವೀಶನಂ ಗುರುಭಕ್ತಿಕೋಶನಂ ।
ಹರನ ಕಣ್ಕೈವೆಕ್ಕಗಳಾಗಿ ತನುವುಪವಿತ್ರ ।
ಪರಿಣತರ ನನಹು ಕೃತಿನೇಚಲಿನಗೈವೊಗಂ ನಿರ್ವಿಘ್ನತೆಯನೀಯುನೇ ॥ ॥೯॥
ನೀನಾರು ಗೂಳೂರ ಶಾಂತಿದೇವರ ಕೀರ್ತಿ ।
ಮಾನಿನಿಯುದೇಂ ಬಂದೆಯಾಸಧೋಧರೆಗಳಿಯು ।
ತಾನಾಲಗೆಗೆರಹನುಳ್ಳ ಜೀವರ ಹೃರ್ದಿ ಮಂಡಲಾಗ್ರದ ಗೋತ್ರದ ॥
ಸ್ಥಾನವುಂ ಸಾರ್ದಗ್ನಿಮುಖರ ಗೇಹಂಬೊಕ್ಕೊ ।
ಹಾನ್ಯೈಜವಚನಾಥಯುಪ್ರದಂ ಸ್ಮರಾಂಬು ।
ಜಾನನಂ ನೂಂಕೆ ಶಾಂತಿಮನುಳ್ಳ ಸಿನ್ನೆಡೆಗೆ ಬಂದೆ ಕೇಳಲಿ ಚಂದ್ರವಗ ॥ ॥೧೦॥
ಶರಣಸ್ಥತ್ವನುದಹಿಮಕಿರಣ ಕಾತ್ಯಾಯಿನೀ ।
ಹರಣ ಶುಭಕರಗನಾವರಣ ನಿರುಪಮಾಕೃಪಾ ।
ಭರಣ ಹಸ್ತ್ಯಜನವಿತಚರಣನಂ ಮನಭಾವಕರಣಪೊಳ್ ಪುದಿದಾವಗಂ ॥
ಕರವಚಿರ್ಸುತೆಯೊನೆರೆವ ನೋಟದ ಹಲಾ ।
ತ್ಪರವರ್ಧವರ್ಧಿಗಳ ಪೊರದ ವರಗುಪ್ಮಳಾ ।
ಪುರದ ಶಾಂತೇಶಗುರುವರಪದನಡಿವರ್ದು ನಾನೊಱೆದ ಕೃತಿ ಮೆಱೆವುವರಿದೆ ॥ ॥೧೧॥
ಲಾಲ್ಯಮುಲ ದೇವ ನಿಮ್ಮಯ ವಚನ ಭಕ್ತರ್ಗೆ ।
ಮೂಲ್ಯವನ್ನಯ್ಯ ನಿನ್ನುರುಭಕ್ತಿ ಭಾವು ನೈ ।
ರ್ಮಲ್ಯ ನಿನ್ನಯ ಕೀರ್ತಿಯುಖಿಳದಿಕ್ಕಿನೊಳು ಯತಿರಾಜ ನೀನಾದ ಕತದಿಂ ॥
ಕಲ್ಯಾಣದಾಬಸವೇಶ್ವರನುಹತ್ವವುಂ ।
ಕಲ್ಯಾಣವಾಗಿ ಶರಣರ್ಗಳ ಪುಷ್ಟ ಶಿವನ ।
ಕಲ್ಯಾಣದುತ್ಸವದ ನಾಗವಲ್ಲಿಯು ಮೆಱೆವ ಶಿವಪೂಜೆಯೂರ್ಧ್ವ ಶರಣಾ ॥ ॥೧೨॥
ಎಲೆ ಮಲ್ಲಣಾರ್ಯ ಕೇಳ್ ನಿನ್ನಯ ಪಿತಾಮಹಂ ।
ಲಲಿತವಾತೂಲತಂತ್ರಕ್ಕೆ ಟೀಕಂ ಮಾಡಿ ।
ನಲಿದಾಗಮಗ್ರಂಥವಚನದಿಂ ಗಣಭಾಷ್ಯರತ್ನಮಾಲೆಯ ರಚಿಸಿದ ॥
ಸುಲಭನನ್ವಯಭವನೆ ಮದ್ಭಕ್ತವಾತ್ಸಲ್ಯ ।
ದಲಘುವಾಗೋರ್ವ್ವರಣ ಸತ್ಯಂದ್ರಚೊಳಭೂ ।
ಲಲನಾಧಿಪನ ಕೃತಿಯನೊರೆಯೆಂದೊಡಾತನಾಣತಿಯಿಂದಲಾಂ ತೊಡಗಿದೆಂ ॥ ॥೧೩॥

ಭೂನುತವೃಷಾಧಿಪನ ಸದ್ಭಾಗ್ಯಮೀವರ್ತ |
ಮಾನದೊಳ್ ಷಟ್ಸ್ಥಲಾಂಗವ ತಳೆದು ದಶದಿಗ್ವಿ |
ತಾನದೊಳ್ ಸತ್ಕೀರ್ತಿಯಾಂತಿಂದ್ರಿಯಾದಿವಾಯುಪ್ರಾಣಿಯಲ್ಲದನಘ ||
ಧ್ಯಾನಮಂ ಸಂತತಾನೂನಮಂ ಶರಣಸಂ |
ತಾನಮಂ ಶಂಕರಸ್ಥಾನಮಂ ದಿವ್ಯಸ |
ನ್ಮಾನಮಂ ಚಿಕ್ಕಬಸವಾಂಕನ ಲಸತ್ಕ್ರಿಯಾಜ್ಞಾನಮಂ ಪೊಗಟಲಳವೇ || ||೧೪||

ಕರುಣಾಳುವಮರಗುಂಡದ ಮಲ್ಲಿಕಾರ್ಜುನಾ |
ರ್ಯರ ನಿರೂಪದಿ ನಿಶಿತಶೂಲವೇಱಿದ ಮಹಾ |
ಗುರುಭಕ್ತನನ್ವಯಾಂಬುರುಹದಿನನಾಥ ಗುಬ್ಬಿಯ ಮಲ್ಲಣಾಚಾರ್ಯರ ||
ತರುಣ ಗುರುಭಕ್ತಾಖ್ಯಗರ್ಭಾಬ್ಧಿಚಂದ್ರಮಂ |
ವರಬಸವಪುರಾಣದುರುಮಲ್ಲಣಾರ್ಯನಘ |
ಹರಸಿದ್ಧಮಲ್ಲೇಶಗುರುಚರಣಸುರಕುಜಂ ಹೃದ್ಭೂಮಿಯೊಳ್ ಮೆಱೆಯಲು|| ||೧೫||

ತನ್ನ ಮೋಹದ ಭಕ್ತ ಚಾರಮಾಂಕನ ನೋಡಿ |
ನಿನ್ನಿಷ್ಟವೇನೆನಲ್ ದೇವ ನಿಮ್ಮಡಿಗಳಿಂ |
ದೆನ್ನ ಜನ್ಮದ ಜಾಡ್ಯ ಪರಿದು ಲೇಸಂ ಪಡೆದೆನಯ್ಯ ಸತ್ಯೇಂದ್ರಚೋಳಂ||
ಮುನ್ನ ಕೈಲಾಸಕ್ಕೈದಿದ ಕಥೆಯನೆನಗೆ ಕೃಪೆ |
ಯಿನ್ನಿರೂಪಿಸೆ ಕಾವ್ಯವಿನಚಂದ್ರಧರೆಗಳು |
ಳ್ಳನ್ನೆಗಂ ಪರಿಕಲಿಸಿ ಮೆಱೆವುದೆನಲಾತಂಗೆ ಪೇಳ್ದೆನಾನಂದದಿಂದ || ||೧೬||

ಕೃತಿಯು ಪಲ್ಲವಿ ತೊಡಗಿ ಪೂರ್ಣಮಪ್ಪನ್ನಮೀ |
ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ |
ಕೃತಿಗದು ನಿಮಿತ್ತದಿಂ ಭಾವಚಿಂತಾರತ್ನವೆಂಬ ಪೆಸರೀಕಾವ್ಯಕೆ ||
ಪತಿಯಮರಗುಂಡಮಲ್ಲೇಶ್ವರಂ ಕಥೆಯಱಿವ |
ಯತಿ ನಾಗವಲ್ಲಿಯುರುಶಿವಪೂಜೆಯಾರ್ಯನನು |
ಮತದೊಳೊರೆದಂ ಮಲ್ಲಣಾರ್ಯನೆನಲಿದು ಸುಜನವದನಭೂಷಣವಾಗದೆ || ||೧೭||

ಅಮಮ ಚಂದ್ರನ ಕಂಡು ವಾರ್ಧಿ ಮೈಮೆಱೆರ್ಗುಂ |
ಹಿಮಕಾಂತ ಕರಗುಗುಮದೇಕೆ ಗಾಂಭೀರ್ಯಹೃ |
ದ್ವಿಮಲಂಗಳಪ್ಪುದಱಿನಂತೆನ್ನ ಕಬ್ಬದಿಂದಱ್ತಿ ಸಜ್ಜನರಿಗಕ್ಕುಂ ||
ಕುಮತಿದುರ್ಜನರು ಪರಿಣಮಿಸದಿರಲೇನಾಯ್ತು |
ಕಮಲಾರಿ ಪೂರ್ಣತೆಯೊಳೊಗೆಯೆ ಕಾಣುತವೆ ಕ |
ರ್ದಮುಜಲದ ಬೆಂಚೆ ಕಗ್ಗಲ್ಲುಗಳು ಪೆರ್ಚೆ ಕರಗಮೊಡೆ ಸಸಿಗದು ಹಾನಿಯೇ ||೧೮||

ಕ್ಷಳೆಱೆಕುಳಾಕ್ಷರ ಸಮಾಸ ತದ್ಧಿತ ಸಂಧಿ ।
ಗಳನಪಭ್ರಂಶಾಖ್ಯೆಯಾಖ್ಯಾತಭೇದಗಳ ।
ತಿಳಿದು ಯತಿಭಂಗಾರ್ಥಶೂನ್ಯ ಪುನರುಕ್ತ್ಯರ್ಥ ನೇಯ ನೀರಸಮುಖ್ಯಮಾ ॥
ಕಳೆದಲಂಕಾರ ಚಿತ್ರಾರ್ಥ ರಸ ಭಾವವೆ ।
ಗ್ಗಳಿಸೆ ತಿದ್ದುವುದು ಶಿವಭಕ್ತರೆಂದಿನಿಪ ಕವಿ ।
ಗಳು ದುರ್ಜನವ್ರಾತಘೂಕರವಿಗಳು ಶಿವನ ಕಿವಿವಾಯ್ಗೆ ನೆಱೆ ಸವಿಗಳು ॥ ॥೧೯॥

ರಸಜೀವಚಿತ್ರಾರ್ಥ ನಿರ್ದೋಷ ನೆಲೆಯಾದ ।
ಹೊಸರನ್ನಮಂ ವೇಗಡಂಗಳಂ ಕಳೆದು ಸೇ ।
ರಿಸೆ ಹಾರದಲ್ಲಿ ಛಿದ್ರಂಗಂಡೆವೆಂಬೊಲಿಂತೀಕಾವ್ಯರತ್ನದಲ್ಲಿ ॥
ಬಸೆದು ತೋಱುವ ಲಕ್ಷಣೋಕ್ತಿಯಱಿಯದ ಕುಜನ ।
ವಿಸರವುಱೆ ಮಾಜ್ಪ ತಪ್ಪಂ ಕಂಡೆವೆಂದು ಗ ।
ರ್ಜಿಸುವರೇಕದೆ ಗುಣಕೆ ಕಾರಣಂ ಹೃದಯಭೂಷಣಮೆಂದು ನೆಱ ನೋಡದೆ ॥೨೦॥

ತ್ರಿಣಯನಣುಗಂ ತಿರುಜ್ಞಾನಿಸಂಬಂಧೀಶ ।
ನಣಿಯರದಿ ಜಿನಮತವಿದಾರಣಂಗೈದು ಧಾ ।
ರಿಣಿಯಲ್ಲಿ ತಿರುಪಾಟು ಪದಿನಾಱು ಸಾವಿರವನೊರೆಯುತ ಕುಲಚ್ಚರಿಯಗೆ ॥
ಪ್ರಣವಪಂಚಾಕ್ಷರಿಯ ಮಹಿಮೆಯಂ ತಿಳಿಪೆ ಸ ।
ದ್ಗಣಿಯಪ್ಪ ಸತ್ಯೇಂದ್ರಚೋಳಭೂಪನ ಕಥಾ ।
ಭಣಿತೆಯಂ ದ್ರಾವಿಡದೊಳೋದಿದಂ ಕನ್ನಡದಿ ಪೇೞ್ದೆನಾಲಿಸೆ ಸುಜನರು ॥ ॥೨೧॥

ತರುಣಿ ಪೊರೆದಱುಗನಶ್ವದ ಖುರದ ಹತಿಯಿಂದ ।
ಹರಭಕ್ತನಱಿಯಲದ ಕೇಳ್ದು ಕೊಲೆಯಂಧಮಂ ।
ಪರಿಕಿಸಿ ನಿಜಾತ್ಮಜಂ ಮೊದಲಱಿವಿಗೆಂದ ನುಡಿಗಾಮುದ್ದುಮಗನ ತಲೆಯ ॥
ಅಱಿಸುವೆಡೆಯೊಳು ಮತ್ತೆ ಭಕ್ತವಧೆಯೆಂದು ನಿಜ ।
ಶಿರದೊಡನೆ ತಱಿದೇಱು ತಲೆಗಳಂ ಪಡೆದು ಶಂ ।
ಕರನೊರ್ಗೆ ಪೋದ ಸತ್ಯೇಂದ್ರಚೋಳನ ಕಥೆಯನಿದ ಬೆಳಸಿ ಕೃತಿಮಾಳ್ಪೆನು ॥೨೨॥

ಕೃತಿಯಿಂತಿದಕ್ಕೆ ಮೊದಲಾವುದೆಂದೆನೆ ಪತಿ ।
ವ್ರತೆಯಂತೆ ಕಾಂತಾನುಕೂಲದಿಂ ಕೌರವ ।
ಕ್ಷಿತಿವರನ ಸೇನೆಯಂತಾದ್ರೋಣಿಯಿಂ ಮೃಕ್ಷದಂತಾಪ್ರವಾಳದಿಂದ ॥
ಕ್ರತುಭುಜರ ಸುಡಲು ಗರಳವನುಗುಳ್ವ ಲೋಚನದಿ ।
ಶ್ರುತಿಪನಂತಚಲಾದ್ರಿವೃತ್ತದಿಂ ಕೃಷ್ಣಗಿರಿ (?)॥
ವ್ರತತರನೊಳಕೊಂಡು ತದ್ವೈರಿಗಳ ಗರ್ಜಿಸುವ ತೇಜದೊಳೊಪ್ಪಿತು ಸಮುದ್ರಂ ॥೨೩॥

ಅವಾರ್ಧಿಮಧ್ಯಭುವನಜಕರ್ಣಿಕೆಯೊ ಕೂರ್ತು ।
ಭೂವನಿತೆಗಿನಕುಲದ ನೃಪನೊಸಗೆಗೆಗಟ್ಟಿಸಿದ ।
ಜೀವನಿಧಿವಸನದೊಪ್ಪನೆಸೆವ ರವಿಯುಂಗುರವೊ ಬೊಮ್ಮನೆನಿಸುವ ಸೂತ್ರಿಕಂ ॥
ದೇವತೆಗಳೆಂಬ ಹಂಸಗಳನಾಡಿಪ ಕಂಭ ।
ಮೋ ವಿಚಾರಿಸೆ ಬೆಡಂಗವು*ರ್ದ ಕಣ್ಗೆಡ್ಡವಾ ।
ಯ್ತುವರಿಸೆ ತೇಜವಗ್ಗದ ಮೇರು ಗಿರಿರಾಜ ವಿಧೃತಕಲ್ಪಾವನೀಜಾ ॥ ॥೧೪॥

ಉಡುವರಂ ದಕ್ಷಸುತೆಯರ ಮದುವೆಯಾಗಿ ಬ ।
ರ್ಪೆಡೆಯೊಳಿಂದಿರೆ ನಿಜಾಗ್ರಜನನುರೆ ಬಾಗಿಲಂ ।
ತಡೆಯುಳಚಲತ್ವದಿಂದಿರ್ದಂತಿರಿರ್ಪ ಮೇರುವಿನ ಸಾನಿ, ಧ್ಯದಲ್ಲಿ ॥
ಕಡುನೇಹದಿಂ ಸುತವಿವಾಹಕ್ಕೆ ಬಂದು ಪ ।
ಳ್ಗಡಲಜಾದ್ಯರ್ಗೆ ಭಾವಿಸೆ ಗೋತ್ರವಾಗುತಂ ।
ದುಡುತ [illegible] ಕಿಟ್ಟುದಂಬರವನೆನೆ ಜಗಜಗಿಸುತೊಪ್ಪಿತಾ ರಜತಾಚಲಂ ॥ ॥೧೫॥

ಪಸುರ್ವರಲ್ಗಳ ಭಾಗ್ಯವೆನಿಪ ಸುರತರುಗಳಿಂ ।
ಸಸಿಗಲ್ಗಳೇೞ್ಗೆಯಿಂ ಕೆಂಗದಿ*ರ್ಗಳಿಂ ಕಱೆವ ।
ಮಿಸುಪ ಚಿಂತಾರತ್ನಶಿಖರಗಳ ಬಿಣ್ಪಿನಿಂ ಕನಕಪಂಕಜಸರಸಿಯು ॥
ವಿಸರದಿಂ ನೈದಿಲಿಂ ಮೆಱೆವ ಪೂದೊಣೆಗಳಿಂ ।
ದೆಸೆದತ್ತು ಪಂಚವರ್ಣವೆ ರಸನೆಯಾದ ತಾ ।
ಪಸಜನಾಖಿಲರ ಸುಖರಸದಾಲವಾಲವಾಹಾ ಭಾಪು ರಜತಶೈಲಂ ॥ ॥೧೬॥

ಪೂವಿಲ್ಲ ಗಡ ತನಗೆ ಕುಸುಮಶರನೆಂಬ ಪೆಸ ।
ರಾವ ಕಾರಣವಾದುದಳಿವೆದೆಯನಾಗಿ ಲೋ ।
ಕಾವಳಿಯು ಗೆಲ್ಪ ಬಗೆಯೆಂತು ಪೆಣ್ಮಕ್ಕಳಂ ಕೊಂದು ಕೂಗಿಡುವ ತನಗೆ ॥
ಕಾವನೆಂದೆಂಬ ಪೆಸರೇ ಮೆಯ್ಯೞಿಯು ಬಾರ ।
ದಾವಿಗಡನ ವಿಚಾರದಿಂ ಲಜ್ಜೆಗೆಟ್ಟವಂ ।
ಗಾವಟ್ಟೆಯೆಂದು ಮಾಶನ ಜಱಿದು ತಪವಿರ್ದರಲ್ಲಿ ವರಸನ್ಮುನಿಗಳು ॥ ॥೧೭॥

ಆ ರಜತಪರ್ವತಾಗ್ರದೊಳ್ ಪೀಯೂಷಪರಿ ।
ಖಾರಚಿತಹೇಮಸುಪ್ರಾಕಾರಮರಕತವು ।
ಹಾರವ್ಯವಪ್ರವೃಷಭಧ್ವಜಂಗಳೊಳೊಂದುಮಣಿದನೆಗಳಿಂ ಪರುಷದ ॥
ದ್ವಾರಬಂಧಾಧಿಕಕವಾಟಂಗಳಿಂ ಶಾವ ।
ಭೈರವಗಣಾಕೀರ್ಣದಾಕೊತ್ತಳಂಗಳಿಂ ।
ರಾರಾಜಿಸಿತು ಶಂಕರನ ವಾಸ ಕೈಲಾಸ ವಿಮಲಮೂರ್ತಿಯ ವಿಲಾಸ ॥ ॥೧೮॥

ವೇದಪುರುಷರ ಮಂತ್ರದೇವತೆಗಳತಿಪುಣ್ಯ |
ನಾದಮೂರ್ತಿಗಳ ಲಿಂಗೇಂದ್ರಿಯರ ಸಂತತಂ |
ಸಾದರಗುಣಾಂಚಿತರ ಷಟ್ಸ್ಥಲಬ್ರಹ್ಮಿಗಳ ಪಾವನಗೃಹಂಗಳಿಂದೆ ||
ಶ್ರೀದಿವ್ಯರತ್ನದುಪ್ಪರಿಗೆ ಧವಳಾರಗಳ |
ಬೀದಿಗಳ ಚೆಲ್ವಿನಿಂದೆಸೆವ ಪುರಮಧ್ಯದೊಳ್ |
ಮಾದೇವನರಮನೆ ಚೆಸಂಗಾಗಿ ಮೆರೆದುದದನೊಪ್ಪವನದೇಂ ವರ್ಣಿಪಂ || ||೯||
ನಾಲ್ಕಂಕದರಭೇದಗಳ್ ಸಲಂ ಜೊನ್ನವೈ |
ಗಲ್ಪೊದಕೆಜಗಲಿ ಮಾಣಿಕ್ಯ ರನ್ನಂಗಳ್ಯ |
ಕಿಲ್ಪಿಟ್ಟನಾಗಿಗೆಡವೊಪಲನಿತ್ತಲ್ಲಿ ಮಂಡಿಸಿದ ಶಂಕರನಲ್ಲಾಯಿಂ ||
ಸೊಲ್ವೆಣ್ಣನಾಣ್ಮನಮದುರ್ಗಣಿಯೆಣಿಯನುಂ ಕರ್ವುರ |
ವಿಲ್ಯೊತ್ತನೈಯ ಮೊದಲಾದ ಸಗ್ಗಿಗರ್ಪೈದ |
ಸಾಲ್ಕಿಡಿಪ ನಿಂದೋಲಗಂ ಪಳಚ್ಚನೆ ಮೆರೆದುದಯ್ಯಯ್ಯ ಸ್ತೈಸದೆಂತೆಂ || ||೧೦||
ಹರಿಸಜಲವಕ್ಷಿಗಳ ಮುನಿಗಳಿಂ ವ್ಯಾದೆಗೆವ |
ಹರನೊಳೊಂದುವ ಪರಮಸಾಮ್ರಾಜ್ಯರಿಂ ಪರಿವ |
ಕಿರಣಂಗಳೊಡನೆ ಕಣ್ಮುಚ್ಚುವಾನಂದರಿಂ ಸಾಸಿರದಳಾಬ್ಜದೀವ ||
ಪರಮಯೋಗೀಶರಿಂ ಸದ್ಭಾಸನಾಂಗರಿಂ |
ಭರಿತಸುಜ್ಞಾನರಿಂ ಹರಸಾರ್ಪಣಾಢ್ಯರಿಂ |
ಪರಮಾನುರಾಗಿಗಳಿನೆಸೆವ ಸಭೆಯುಪ್ಪವಿಧಪೂಜೆಯೆನೆ ಕಣ್ಗೆಸೆದುದು || ||೧೧||
ಶರಿಯಿಂದ ಮೆಱೆವ ತುಂಬುರನಾರದರ್ಕಳಿಂ |
ಪೆಸೆವ ಶಕ್ತಿತ್ರಯಗಳಿಂದೆ ವೇದಂಗಳಿಂ |
ಮಿಸುಪ ಸನಕಾದಿಯೋಗೀಶರಿಂ ಷಡ್ಗುಣದ ಸಿರಿಗಳಿಂ ಮಹಾತ್ಮಕೆಯರಿಂ ||
ವಸುಗಳಿಂ ಬ್ರಹ್ಮರಿಂಪಧಿಕವಿಶ್ವೇದೇವ |
ವಿಸರದಿಂ ರುದ್ರರಿಂ ರವಿಗಳಿಂ ಶರಣಾತೇ |
ರಸರಡಿಯನೋಲೈಸುತಿರ್ಪ ಮನುವರ್ಗದಿಂದಭವನೋಲಗವೆಸೆದುದು || ||೧೨||
ಶೂಲಿಯಿದಿರೊಳು ನಿಲದೆ ಕೆಲಸಾರು ಮಾಧವ ಕ |
ಪಾಲಿಯ ಸಭಾಂತರದೊಳುಲಿಯದಿರು ಕಮಲಭವ |
ಕಾಲಕಂಧರನ ಮುಂಬಿನೊಳುಡುಗಿ ಗರ್ವಗಳನಿಂದ್ರಾದಿಸುರರು ರುಂಡ ||
ಮಾಲಿಯಾಸ್ಥಾನದೊಳು ಭಯವಿಲ್ಲದಿರಿಯಸುರ |
ಜಾಲವೆಂದಾಜ್ಞೆಗೆಯ್ದೆಸೆದರಾನಂದಿಮಾ |
ಕಾಲರುದ್ರತರವೇತ್ರಲೀಲರವ್ನೊಡೆಯನ ವಿಶಾಲದೊಡ್ಡೋಲಗದೊಳು || ||೧೩||

ಕರೆವು ಸಿಂಹಾಸನದ ಸನ್ನಿಧಿಗೆ ಗಜಮುಖನ |
ನುರಗಕಂಕಣದ ಕರದಿಂ ನವಿಲನಡರ್ದನಂ |
ಶಿರವ ತಡವುತ್ತೆರಲೆಗೈಯು ಪುಲಿದೊವಲುಡಿಯೊಳಿಡುತವಳ್ತಿಯು ಪೆಂಪುಮಂ ॥
ಪರಿತೋಷಮಂ ಬೀಱುತೆಸೆವ ಶಂಕರನ ಭಾ |
ಪುರೆ ದೇವದೇವಕುಲಚಕ್ರೇಶ ನಿನ್ನ ಸಾ |
ರ್ದಾರಿಗರಿಗಳಿಲ್ಲೆಂದು ಕೈಯೆತ್ತಿ ಚಂಡಕೀರ್ತಿಗಳು ಪೊಗೞುತ್ತಿರ್ದರು ॥ ॥೧೪॥

ಕಡುಲೋಭವೆಡೆಗೊಂಡು ಗತಿಗೆಟ್ಟು ಶ್ರುತಿಯಿಲ್ಲ |
ದಡಸಿಯಾಣಲೊಳು ಬಿಸಮನೀದೋಷಮಂ ಕಳೆಯೆ |
ಮೃಡನ ಕರ್ಣದ್ವಯದ ಮೂಲಂಗಳಂ ಸಾರ್ದು ಸಲೆ ತೊಟ್ಟು ಸವೆಯದಿರ್ಪ ॥
ಪಡೆಗೆ ರನ್ನಂಬಡೆದು ಭುಜಪರಾಕ್ರಮದಿಂದೆ |
ನಡೆದು ಪಿವರಿಗಳಾಗೆಯುಮರ್ದನುಂಬವರೊಳ |
ಪುಮ್ಮಡಿಜಿಹ್ವೆಯುನಸೆಯುಶ್ವತಕಂಬಲರು ಶಿವನ ಹಾಡಿ ಹರಸುತ್ತಲಿಹರು ॥ ॥೧೫॥

ಮುಂಗಡೆಯೊಳ್ಗುಲಿವ ಪಂಚಮವಾದ್ಯದಿಂ ನವರ |
ಸಂಗಳಭಿನಯಿಸುವೆಡೆಯೊಳ್ ಭಕ್ತಿರಸವೆಸೆವ |
ಸಿಂಗರಮದಾಗೆ ತಾಂಡವಮುಖ್ಯನೃತ್ಯಂಗಳಿಂದೆ ರೂಪಾದಿಯಾದ ॥
ಅಂಗದಿಂದಂ ಗಾಡಿ ಸಂಚಾರಿಗಳನುಚಿತ |
ಸಾಂಗಭಾವಂಗಳಿಂ ಶಿವನ ಲೀಲೆಯೊಳ್ಪೃದು |
ಪಿಂಗೆ ವಿಂಶತಿಯು ಭೃಂಗಿರಿಟಿ ನರ್ತಿಸೆ ಗಣಂಗಳ್ ಭಾಪೆನುತ್ತಿರ್ದರು ॥ ॥೧೬॥

ಭೃಂಗೀಶಮುಖ್ಯರಂ ಪುರಿಯಿಟ್ಟು ಸತ್ಕೃಪಾ |
ಪಾಂಗದಿಂ ನಿಜಕುಮಾರನ ಗುಹನನೀಕ್ಷಿಸು |
ತ್ತಂಗಜಾರಾತಿ ಬೊಮ್ಮನ ನೋಡಲೆದ್ದು ಕರಕಮಲಮಂ ಮುಗಿದು ನಿಂದ ॥
ಇಂಗಿತಕಿದೇನು ವಿಪರೀತವೆಂದೀಕ್ಷಿಸೆ ಗ |
ಣಂಗಳಜನಲ್ಲಿ ಬಿನ್ನೈಸಿದಂ ದೇವ ಕುವ |
ರಂಗಕ್ಷರವನಱಿಪಲೆನ್ನನಟ್ಟಿದ ಹದನ ಜೀಯು ಚಿತ್ತೈಸೆಂದನು ॥ ॥೧೭॥

ಉದಯಕಾಲದೊಳು ಪರನಾಗಾರಕೈದಿ ಷ |
ಡ್ವದನನಂ ಗದ್ದುಗೆಯೊಳಿರಿಸಿ ಸುದ್ದಗೆಯೊಳ |
ಗ್ಗದ ಬಿಣ್ಪಿನೋಂಕಾರಮಂ ಬರೆಯಲೆನ್ನ ಕೈವಿಡಿದರ್ಥಮಂ ಕೇಳ್ವೊಡೆ ॥
ಮೊದಲನ್ವಯಂಗೇಳ್ವ ಮಾತು ಲಘುವೆನಲೆನ್ನ |
ಗದರದೆ ಕಶಾದಂಡದಿಂ ಹೊಡೆದನಯ್ಯ ಪು |
ಟ್ಟಿದ ದಿವಸಸಪ್ತಕಕೆ ತಾರಕಾಸುರನ ಕೊಂದದಟನೆನ್ನಂ ಬಗೆವನೇ ॥ ॥೧೮॥

ಒಡೆಯನ ಕುಮಾರಕಂ ಬಾಯಲ್ಲಿ ಬಲ್ಲಿದಂ ।
ಕಡೆಯೊಳೇಗೆಯ್ವೆನೆಂದಳ್ಕಿ ಸುಶ್ಲೋಕಂಗ ।
ಳೆಡೆಬಿಡದೆ ಪನ್ನೆರಡು ಸಾಸಿರದೊಳುಸಿರ್ದ*ನಾ ಪ್ರಣವದರ್ಥವನೀತಗೆ ॥
ಜಡಮತಿಯೆ ಸಾರೆನುತ್ತೆನ್ನ ಜಱ್ದೆಪ್ಪ ನಿ ।
ಮ್ಮಡಿಯ ಮುಂಬಿಗೆ ಬಂದನಯ್ಯ ನಾನಱಿಯೆನೆಲೆ ।
ಪ್ರೌಢ ವಿಶೇಷಾರ್ಥಮಂ ಪೇಳ್ವುದೆನಲಭವನೊರೆದಂ ಪ್ರಮಥರಾನಂದಿಸೆ ॥ ॥೩೯॥

ಶ್ಲೋಕಲಕ್ಷದ್ವಾದಶಂಗಳಿಂ ಶಿವನೊರೆದೊ ।
ಡಾಕುಮಾರಂ ಕರಾಬ್ಜಂಗಳಂ ಮುಗಿಯುತಗ ।
ಜಾಕಾಂತ ಕೇಳಯ್ಯ ಬೊಮ್ಮನಂ ಜಡನೆಂದುದೆನ್ನದಪರಾಧಮೆನಲು ॥
ಈ ಕಟಕಿ ಬೇಡಮ್ಮೆ ಪ್ರಣವಮೆನಿತುಸಿರೆನೆ ಮ ।
ಹಾಕೋಟಿ ಪನ್ನೆರಡೆನಲ್ಕೆ ಚಿಂತಿಸಿದಂ ಪಿ ।
ನಾಕಿ ಮಜ್ಜಿಹ್ವೆಯಿಂದಾವಕಾಲದೊಳು ಪೊಱಮಟ್ಟುವಗೆ ಸಾರ್ದದೆಂದು ॥ ॥೪೦॥

ಹಿಂದೆ ಕೋಟ್ಯನುಕೋಟಿಯುಗದೊಳು ಜಲಪ್ರಾಣಿ ।
ಯೊಂದನಿರಲೀಯದಬ್ಧಿಯೊಳು ಪಾರ್ವತಿಗೆ ಪೇ ।
ಳ್ದೊಂದು ತನ್ಮಾತ್ರೆಯು ನವಿಲ್ಮುಡಿಯೊಳಳಿಯಾಗಿ ಕೇಳಿದನು ಚಾತುರ್ಯದಿಂ ॥
ಎಂದಱಿದು ಚಪಲ ಪೇೞೆನಲು ಗದ್ದುಗೆಯನಿೞಿ ।
ತಂದೆ ನಾಂ ಮೇಲಿರ್ದು ಪೇಳ್ವೆನೆನೆ ಕಡುಮುಳಿಸಿ ।
ನಿಂದ ಹದಿನಾಱು ಸಾಸಿರ ಜನ್ಮದಲ್ಲಿ ಪುಟ್ಟೆಂದು ಗುಹನಂ ಶಪಿಸಿದಂ ॥ ॥೪೧॥

ಈವಿಷಮಶಾಪಕಾತಂ ಕುಮರನೆನೆ ಮೂಱು ।
ಸಾವಿರ ಗಣಂಗಳಂ ಝಂಕಿಸುತ್ತಿವನೊಡನೆ ।
ನೀವುದಯಿಸೆಂದೊಡಂತಹುದಲಾಜ್ವರದ ಮೊದಲೊಳ್ ಪಾಲು ಬಿಸಮೆಂಬಿನಂ ॥
ದೇವ ಮುಂಗೋಪದೊಳಗೆಮ್ಮ ನುಡಿಯುಚಿತಮ ।
ಲ್ಲೀವತ್ಸನಿಂದ ನುತಿ ಷೋಡಶಸಹಸ್ರಗಳ ।
ನೀವೊಪ್ಪುಗೊಂಬೊಂದು ಜನ್ಮ ಸಾಲ್ಗಿವಗೆನಲ್ ಪಶುಪತಿ ನಗುತ್ತೆಂದನು ॥ ॥೪೨॥

ಶಾಪವೆನ್ನವರಿಗುಂಟೇ ಗಣಂಗಳ್ ನೀವು ।
ಭೂಪವಿತ್ರಾರ್ಥದಿಂ ಜನಿಸಿ ಭಕ್ತವ್ರಜಾ ।
ಳಾಪಮಂ ತಿರ್ದಿ ಪೇರಾಂಬಣದ ತಿಲ್ಲವೆಣ್ಬಂದಣಾಮ್ವೆಯರಾಗಲು ।
ಪೋಪುದೆಂದೊರೆದು ತತ್ಪ್ರಣವದರ್ಥಮನಱಿಯು ।
ಲಾ ಪಿತಾಮಹನ ವಾಗೀಶನಾಗಲ್ಕಳುಪು ।
ತೋಪ ತಮ್ಮಣುಗನ ತಿರುಜ್ಞಾನಸಂಬಂಧಿಯಾಗೆ ಪೇಳ್ವಿಟ್ಟಲಭವಂ ॥ ॥೪೩॥

ಶ್ರೀಕಾಳಿಯಾದಿಶೈವಂಗೊಗೆದು ಶಂಭುಗಿರಿ ।
ಜಾಕರುಣಮಂ ಪಡೆದನೇಕಮಹಿಮೆಯ ಮೆಱೆದು ।
ಶಾಕುಜೈನರ ಕೊಲ್ವ ಪದದೊಳವದಿರಿಗೆ ಶೂಲಂಗಳಂ ಸವೆದಿರಿಸಿದ ॥
ಆ ಕುಲಚಕ್ತ್ರರೆಯಂಗೆ ಪಂಚಾಕ್ಷರಿಯನಱಿಪಿ ।
ಲೋಕಗುರುವಹ ಪಿಳ್ಳೆನಯನಾರು ಸದ್ಗುಣಾ ।
ಸ್ತೋಕಸತ್ಯೇಂದ್ರಚೋಳನ ಕಥೆಯನೊರೆದುದಂ ಪೇೞ್ವೆನಾಲಿಪುದಧಿಕರು ॥ ।೪೪॥

ಪೆಱೆದಲೆಯನಾಳ್ಗಳಗ್ಗದ ಬಗ್ಗೊ ಸಿರಿವೆಣ್ಣ ।
ನೆಱೆ ತಳೆದ ಬಿಸಜಗಳೊ ತುೞಿ*ಲ್ಕೆಯ್ಯುತಿರ್ಪರ ಕಣ್ ।
ಪೞವೆಗಳಿಗುಣಿಸೀವ ಪೊಂದಾವರೆಗಳೊ ಮೇಣ್ ಜತಿಕುವರರಸುವೆನಿಸುವ ॥
ಮಱಿಯಂಚೆಪಿಂಡಾಡುವಲರ್*ವನವೊ ಪೇೞೆನಲ್ ।
ಮೆಱೆವ ಪೃಥ್ವಿಯ ಮಹತ್ತಿನ ಪಾದಪದ್ಮಂಗ ।
ಳುಱಿ ಬಿಡದೆ ನೆಲಸುಗೆನ್ನೆದೆ*ಗೊಳನೊಳಗೆ ಜಾನನಱುಗಂಪನುಱೆ ಬೇಱುತೆ ॥೪೫॥

ಇದು ಸಕಲಭಕ್ತಪದಪಂಕೇಜರೇಣುಮ ।
ಸ್ತದ ಮಲ್ಲಣಾರ್ಯನಾಚೇರಪಾಂಕಂಗೆ ಬೆಸ ।
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಲಕರ್ಣ ॥
ಹೃದಯಮಸ್ತಕವದನಸರ್ವಾಂಗಸೌಖ್ಯಕಾ ।
ಸ್ಪದಮಖಿಳಸುಜನರ್ಗೆ ಪಂಚಾಕ್ಷರಿಯ ಮಹ ।
ತ್ವದ ಬೋಧೆಯಿಂದೋದಿದೊಡೆ ಕೇಳ್ದಿಷ್ಟಾರ್ಥಸಿದ್ಧಿ ಸರ್ವರಿಗಪ್ಪುದು ॥ ॥೪೬॥

ಮೊದಲನೆಯ ಸಂಧಿ ಸಮಾಪ್ತಂ

# ಎರಡನೆಯ ಸಂಧಿ

ಸೂಚನೆ ॥ ಪಾವನಚರಿತ್ರನುತ್ಸವಕಲ್ಪವೃಕ್ಷನೀ ।
ಭೂವಿನುತಸತ್ಯೇಂದ್ರಚೋಳಧರಣೀಶ್ವರಂ ।
ದೇವದೇವನ ಚರಣಸೇವೆಯಿಂ ಸುಖದಿಂದ ರಾಜ್ಯವಾಳುತ್ತಿರ್ದನು ॥

ನೇವಳದ ಫಣಿಯ ಪೆಡೆವರಲ್*ಗಳೊಳು ಮಾರ್ಪೊಳವ ।
ಸಾವಿರ ನಿಜಾಂಗದಬಲೆಯರ ಸವತಿಯರೆಂದು ।
ದೇವ ನಿಮ್ಮಂ ಪೊಯ್ವ ಬಗೆಯೊಳವು ಕರವೆತ್ತಿ ಕಾಣುತಿವರಿಂದಮೆನ್ನ ॥
ಈ ವಿಧಿಗೆ ವಲ್ಲಭಂ ತಂದನೆನುತುಂ ಮುಳಿಯೆ ।
ಪಾವ ತೆಗೆದಾರಸಾತಳಕಿಟ್ಟು ಪೋದರಾ ।
ಭಾವಕಿಯರೆಂದಗಜೆಯಂ ತಿಳಿಪಿದಮರಗುಂಡದ ಮಲ್ಲಿನಾಥ ಶರಣು ॥ ೧

ಎಲೆ ಕುಲಚ್ವರೆಯ ಕೇಳ್ವೈ ಮೇರುವಿರ್ಪ ಭೂ ।
ತಲವಿಳಾವೃತವರ್ಷವದಱ ತೆಂಕಲು ನಿಷಧ ।
ಕುಲನಗಂ ಬಳಿಕ ಹರಿವರ್ಷವಂತಾ ಹಿಮದ ಶಿಖರಿ ಕಿಂಪುರುಷವರ್ಷಂ ॥
ಸಲೆ ಮೆಱೆವುದಿಂತು ಹಿಮವನ್ನಗೇಂದ್ರಂ ಪೂರ್ವ ।
ಜಲಧಿ ಪಶ್ಚಿಮವಾರ್ಧಿಗಳ ಕೂಡಿಕೊಂಡು ನಿ ।
ರ್ಮಲಶಿವನ ಮಾವನೆನಿಸುವ ಬಿಣ್ಪಿನಿಂದೆಸೆವುದದಱ ದಕ್ಷಿಣದೊಪ್ಪುಗುಂ ॥ ೨

ಉತ್ತಾನಪಾದನೆನಿಸುವ ರಾಜಋಷಿ ಮೊದಲು ।
ಪೆತ್ತ ಭರತಂಗೆ ಹಿಮವಂತದಿತ್ತಣ ಧರೆಯು ।
ನಿತ್ತ ಕತದಿಂದ ಭಾರತವರ್ಷವೆನಿಸಿತದಱಾಕಾರವೆಂತೆಂದೊಡೆ ॥
ಚಿತ್ತರಿಪೆನಿನಕುಲದ ನೃಪನೆಂಬ ಕಾಮಂಗೆ ।
ತೆತ್ತುಮನಮಂ ಭೂಮಿರತಿ ಪುರುಷಧನುಮನ ।
ಚೆಟ್ಟುತ್ತಿಕೊಂಡಳೊ ತನ್ನ ಪೇರುರದೊಳನೆ ಬಿಗಿದ ಬಿಲ್ಲಂತೆ ಮೆಱೆದಿರ್ದುದು ॥ ೩

ಮಣಿ ಸರ್ಪ ನಕ್ಷತ್ರ ಧೇನು ಗಿರಿ ತರು ಸರ್ವ ।
ಗುಣ ಮಂತ್ರತತಿಯೊಳಸೆದಿರ್ಪ ಚಿಂತಾರತ್ನ ।
ಫಣಿಪ ಚಂದ್ರಮ ಕಾಮದುಘ ಮೇರು ಸುರವೃಕ್ಷ ದಾನ ಪಂಚಾಕ್ಷರಿಗಳ್ ॥
ಗಣಮೆಂತು ಘನವಧಿಕಮುಖ್ಯಾಗ್ರತಮಮುಖಾ ।
ಗ್ರಣಿ ಮಹತು ಶ್ರೇಷ್ಠಂಗಳಪ್ಪಂತೆ ಭರತಧಾ ।
ರಿಣಿಯ ನಾನಾದೇಶಕಿದು ಭಾಗ್ಯನಿಧಿಯೆನಿಸಿ ಚೋಳದೇಶಂ ಮೆಱೆದುದು ॥ ೪

ನರಕಬಂಧಂಗಳೆಂಬಿವು ಕೊಳಗುಳಂಗಳೊಳು ।
ಪರಿಕಿಸಲ್ಕಿಟ್ಟಯೇಱೆಂಬುದು ಮಹೀಜಕರಿ ।
ತುರಗಂಗಳೊಳು ದೇಹಿ ನಾಸ್ತಿ ಶಬ್ದಂಗಳಬಲಾಜನದ ಮಧ್ಯದಲ್ಲಿ ॥
ಅರಿಯೆಂಬ ನುಡಿ ಕೆಯ್ಗಳೊಳು ನುಡಿದು ತಪ್ಪುವುದು ।
ಗರುಡಿಯೊಳಗಱ ಮಱಗಳೆಂಬ ನುಡಿ ನಾಡೆ ಭೂ ।
ಧರಕುಲಂಗಳೊಳಿದಿರುದಲೆವಾತು ಕನ್ನಡಿಯೊಳಲ್ಲದಾನಾಡೊಳಿಲ್ಲ ॥ ೫

ವಿನುತಹಂಸಾವಳಿಯ ನದಿಗಳಿಂದಬ್ಜವಮ ।
ವೆನಿಸುವ ತಟಾಕಂಗಳಿಂ ಕುಜದ ಪಜ್ತಿಯಿಂ ।
ದನುಪಮಬುಧರ್ಕಳಿರ್ಪಗ್ರಹಾರಂಗಳಿಂ ಗುರುಕುಲಾಢ್ಯರ ಪುರಿಗಳಿಂ ॥
ಘನಕವೀಶರ ರಾಜಧಾನಿಗಳಿನಸಿತಕಂ ।
ರನ ನಗರಿಗಳಿನಹಿತವಿಧುರಾಹುವೆನಿಪ ಬಿರು ।
ದಿನ ಕೇತುಮಂಗಪತ್ತನಂಗಳಿಂ ದೇಶಂ ನವಗ್ರಹಾತ್ಮಕವೆನಿಸಿತು ॥ ೬

ಸೂರಿಜನಹರ್ಷವಿಸ್ತಾರಿ ಸುಖಸಂಕಥಾ ।
ಕಾರಿ ಬಜನೆರ್ದಗಂ ಕರಾರಿ ಬೆಳಸಿರಿಯ ಭರ ।
ಭಾರಿ ಕುಶ್ರಮಸಂಘವೈರಿ ಜಲಚರಸದಾಧಾರಿ ಕಾಲಾರಿಶಿವನ ॥
ನಾರಿ ಗಂಗಾಂಬಾವತಾರಿ ದುರ್ದೋಷಸಂ ।
ಹಾರಿಯೆಂದೊದಱುವತಿ ಭೇರಿಯಾರ್ಭಟೆ ವೀಚಿ ।
ಧಾರಿ ಬಹುಮಾರ್ಗಪ್ರಚಾರಿಯಾನಾಡ ಕಾವೇರಿ ಭೋರ್ಗರೆದೆಸೆದುದು ॥ ೭

ಮೂಡೆಗಟ್ಟಂ ಕಟ್ಟಿ ಹುಡುಕುನೀರೊಳ್ ಮೆಟ್ಟಿ ।
ಕಾಡುತಿಹ ಪಾಮರರ ಕೈನಿಡಿತೆಗೊಳಗಾಗಿ ।
ನಾಡೆ ಪಂಕವ ಪುಗುತ್ತೆರ್ದೆಯೊಡೆದು ಪುಲ್ಗರ್ಚೆ ಕಂಟಕಂಬಡೆದೆವಿನ್ನು ॥
ರೂಢಿಸಿದ ಕಾವೇರಿಯಿರ್ಕೆಲನೊಳಿರ್ದು ಶಂ ।
ಚೂಡಂಗೆ ಸಲ್ವ ಪೇರೊಲ್ಮೆಯಿಂ ಪಿಡಿದವರ ।
ಕೂಡೆ ಬಾಯ್ವಿಡಿಸದಿರೆವೆಂಬ ಕಟವೆಯ ಮಡಿಯ ಸಾಲುಗಳು ಸಲೆ ಮೆಱೆದುವು॥ ೮

ನಡೆ ಮಂದವಾಯ್ತು ನಡುಗಡಸಿತ್ತು ಬಡತನಂ ।
ನುಡಿ ಮೆಲ್ಲನಾಯ್ತು ಕಟವೆಯ ಮಡಿಗಳಂ ಕಾವ ।
ಮಡದಿಯರ್ಗೆನುತೆ ಮುತ್ತಿದುವು ತಲೆಯಂ ತುಂಬಿ ಕೋಕಂಗಳೆರ್ದೆಯಡರ್ದುವು ॥
ಅಡಿಗೆ ತೊಡಕಾದುವಂಚೆಗಳೆದೇ ಕಾಲವೆನು ।
ತೊಡನೆ ಗಿಳಿವಿಂಡು ಗರ್ದೆಯ ಸೂಱೆಗೊಳೆ ಕಿತ್ತು ।
ಪಿಡಿದು ಕರಕಂಜದಿಂದರಲ್ದ ನೆಯ್ದಿಲ್ವೂವನಿಡುವರಾಶಶಿಮುಖಿಯರು ॥ ೯

ಕಲ್ಲೆ*ರ್ದೆಯು ಕರಗದಂಗನೆಯರೆಮ್ಮಂ ಬಗೆವ ।
ರಲ್ಲೆಂದು ಪಥಿಕರ ಮೊಗಂ ಕಂದಿ ಬಾಯ್ ಬತ್ತಿ ।
ಮೆಲ್ಲನಾಗಲ್ ನಡೆಗಳುಸಿರ ಬಿಡುತಿರಲೆಣಿಸುತಾಸತಿಯರವರ ಕರೆದು ॥
ಇಲ್ಲಿಗೈತರ್ಪನ್ನೆಬರ ನಿಮ್ಮ ಕುಱಿತು ಕ್ಕೈ ।
ಯುಲ್ಲಿ ಜೀವನವ ಪಿಡಿದಿರ್ದವೆನಲಳ್ಕುತವ ।
ರೆಲ್ಲ ಬಾಯ್ವಿಡಲಮೃತವೆರೆದಚ್ಚರಿಯರೆನಿಸಿ ಮೆಱೆದರಜವಟಿಗೆಗಳೊಳು ॥ ೧೦

ಅರೆವ ಚಂದನಕೆ ನಱುಸುಯ್ಗಂಪಿಗೆಱಪಳಿಗ ।
ಳುರವಣೆಗೆ ಸತಿ ರನ್ನದೊಡದೋಳನೆತ್ತುತಿರೆ ।
ಸುರಚಾಪವೆನಿಸಿತಲ್ತೆತ್ತಿದ ಕರವ ಬಳಸಿ ಪಿಂಛಾತಪತ್ರಗಳನು ॥
ಸ್ಮರಗೆ ಪಿಡಿದಂತಾಯ್ತುದಲ್ತು ನೀಲದೊಳು ಶಂ ।
ಬರವೈರಿ ಸಂಗ್ರಹಣಮಂ ಮಾಡಿ ಪಿಡಿಸಿದನೊ ।
ಗರುಡಿಯೊಳು ತರುಣಿಯುನದಲ್ತು ಕಾಮನ ಕರಾಗ್ರದ ಚಕ್ರವೆನಿಸಿತದರೆ! " ೧೧

ಸತತವಿಂತೊಪ್ಪುತಿಹ ಚೋಳದೇಶದ ಸಮು ।
ನ್ನತಿಯು ಕೊಂಡಾಡುವೊಡೆ ಫಣಿರಾಜನೆಂಬ ವಾ ।
ಗ್ಜ್ಞಾತೆ ಬೇಡ ಸಮಸುಖದೊಳಸೆವ ಕೆಱೆತೊಱೆಕಾಲ್ಗಳುಪವನದ ಸಂಪತ್ತಿನಿಂ ॥
ಅತಿಪುಣ್ಯದಿಂದಲತಿನೀತಿಸನ್ಮಾರ್ಗದಿಂ ।
ದತಿಚತುರಸಾಮರ್ಥ್ಯವತಿಧರ್ಮದಿಂ ಧರ್ಮ ।
ವತಿಯೆಂಬ ಪಿರಿಯ ಪಟ್ಟಣವೊಪ್ಪುತಿರ್ದುದಾನಾಡ ಸೈಪಿನ ಕರಂಡಂ ॥ ೧೨

ಉರಗೇಂದ್ರನಿಳೆಯ ಬಗಿದೆದ್ದು ತಚ್ಚೋಳಭೂ ।
ವರನ ಬಲಗೊಳಲಾದುದೋ ಪರಿಖೆಯೆನೆ ಫಣಿಪ ।
ನುರುಸುದರ್ಶನದ ವಿಮಲಾಂಗಸದ್ವೃತ್ತತೆ ಸಮುನ್ನತಮದಾಯ್ತೆಂಬಿನಂ ॥
ಕರಮೆಸೆದುದಾ ಪಳಿಕುಗೋಂಟೆ ಮುಗಿಲಗ್ನಿಯೊಡ ।
ಮೆರೆದ ಕೆಂಗದಿ*ರ್ವಣಿಯ ಪಡೆ ಪಲವರಿಂ ಸುತ್ತು ।
ವರೆ ನೋಳ್ಪನಹಿಪನೆನೆ ರನ್ನದೆನೆಗಳಿನೆಸೆದುದಾ ಪಟ್ಟಣಂ ಭಾವಿಸೆ ॥ ೧೩

ಅಳವಟ್ಟ ಸಾಧನದ ಸಂಪತ್ಕರಂಗಳಿಂ ।
ನಳಿನಸಖನಂತರುಣರಾಗಿ ಪೊಂಬೆಟ್ಟುಗಳ ।
ಬಳಸುವ ವಣಿಗ್ವರರ ಸೈಪಿನಿಂ ಶಿವಭವನದೊಪ್ಪಂಗಳಿಂ ಭಕ್ತರ ॥
ನಿಳಯಂಗಳುರ್ವಿನಿಂ ಮಕುಟವರ್ಧನರ ಮಂ ।
ಡಳಿಕ ಮನ್ನೆಯರ ಗೇಹಂಗಳಿಂ ನಡುವೆ ಕಂ ।
ಗೊಳಿಪ ಹಿರಿಯರಮನೆಯೊಳಿರ್ಪನಾಸತ್ಯೇಂದ್ರಚೋಳಧರಣೀಪಾಲನು ॥ ೧೪

ಚರಣದೊಳು ಹೃದಯದೊಳು ಕೈಬಾಯ್ಗಳಲ್ಲಿ ಸಾಂ ।
ದರದೇಹದಲ್ಲಿ ಮಱುಜೆವಣಿಯಂ ಸುಗುಣಮಯ ।
ಪರಮಚಿಂತಾಮಣಿಯ ಸುರತರುವನಮೃತವಂ ಸೌಭಾಗ್ಯಮಂ ಪಡೆಯುತ ॥
ಶರಣೆಂದ ರಿಪುಗಳ್ಗೆ ಮಿತ್ರರ್ಗೆ ಯಾಚಕರ್ಗೆ* ।
ಪರಮಾನುಭಾವರ್ಗೆ ಶರಣರ್ಗೆ ಸತ್ಯೇಂದ್ರ ।
ನಿರದೀಯೆ ನಾಣ್ಕೆ ಭಾಂಡಿಕದೇಹಿಯಾಗಿ ಸಗ್ಗಂಬೊಕ್ಕನೋ ಸುರಪನು ॥ ೧೫

ಲಾಳನಂ ಬರ್ಬರನ ಗೌಳನಂ ವೈರಿ ಪಾಂ ।
ಚಾಳನಂ ಗೆಲ್ದು ಕರವಾಳನಂ ಭಸ್ಮಮಯ ।
ಭಾಳನಂ ತತ್ಸದೋದ್ಧೂಳನಂ ರಂಜಿಸುವ ಕಾಳನಂ ಗೆಲ್ದು ವಿಧೃತ ॥
ವ್ಯಾಳನಂ ನಮಿತಸುರಜಾಳನಂ ಹಸ್ತಕಂ ।
ಕಾಳನಂ ಕೊರ್ಬಿರ್ದ ಕೋಳನಂ ಕೊಂದ ಸೊ ।
ಡ್ಡಾಳನಂ ಘಟಿಸ ಭೂಪಾಳನಂ ಸತ್ಯೇಂದ್ರಚೋಳನಂ ಪೊಗಳಲಳವೆ ॥ ೧೬

ಲಿಂಗಪೂಜೆಯ ಮಾಡುವಲ್ಲಿ ರತಿ ಸತ್ಯವಾ ।
ಕ್ಯಂಗಳಂ ನುಡಿವಲ್ಲಿ ಸದ್ವಾಣಿ ನಿತ್ಯಹ ।
ರ್ಷಾಂಗಿಯಪ್ಪುದಱಿಂದರುಂಧತಿಯ ಪಾಂಗು ಪಾವನಕ್ಷೇತ್ರತನ್ನೊಳಿರಲು ॥
ಸಾಂಗರೂಪಂ ಪ್ರೌಢೆ ಪತಿಭಕ್ತಿ ಸಿರಿಗಳು ।
ಶೃಂಗನೆಯರಾಣ್ಮರಹ ಮದನನಜವಾಸಿಷ್ಠ ।
ತುಂಗಹರಿಗಳ ಜಱಿವ ಸತ್ಯೇಂದ್ರಚೋಳಂಗೆ ಸತಿಯಮೃತವತಿಯಾದಳು ॥ ೧೭

ಬಂದು ಚಂದ್ರನ ಮಾಡಿ ಮೊದಲದು ಕಳಂಕಾದು ।
ದೆಂದಂಬರಕ್ಕಿಟ್ಟು ಮತ್ತೆರಡ ರಚಿಸಿ ರಾ ।
ಕೇಂದುವಿನ ಷೋಡಶಾಂಶವನೀಶ್ವರಂಗಿತ್ತು ಸಪ್ತಕಲೆಯಂ ದೇಹಕೆ ॥
ತಂದಿಟ್ಟು ಮಿಕ್ಕೆಂಟು ಪಣೆಗಿಟ್ಟು ಮಱುಜನೆಯ ।
ಚಂದಿರನ ಮೊಗದೊಳೊರಿಸಿದನೋ ಕಶ್ಯಪನ ।
ಕಂದೆಯಲ್ಲದೊಡೆ ಸತ್ಯೇಂದ್ರನಂಗನೆಗಮೃತವತಿಯೆಂಬ ಪೆಸರೆಸೆವುದೇ ॥ ೧೮

ಸಲೆ ನಿರ್ಜರಾಧೀಶವೃದ್ಧಶ್ರವಂಗೆಯೊ ।
ಪ್ಪಲು ಜೀವನಾಗಿ ಚಿತ್ರಶಿಖಂಡಿಜಂ ಮಂತ್ರಿ ।
ತಿಲಕಂ ಗಡಾ ಹಾಸ್ಯ ಮಲ್ತೆಯಂತಲ್ಲ ಮಿಸುನಿಯ ಕೆಲಸದೊಳಗೆ ರನ್ನಂ ॥
ಚಿಲುಪಾಲೊಳೆಸೆವ ತವರಾಜ ಪನಿನೀರೊಳೊಡ ।
ಗಲಸಿರ್ದ ಶಿರಪಚ್ಚೆ ಶಿವತತ್ತ್ವದೊಳು ಕೂರ್ತರ್ ।
ನೆಲಸಿದಾಪ್ರಣವದಂತರಸಂಗೆ ಪಕ್ಷಿವೋಹಿಯೆನಿಪ ಮಂತ್ರೀಶನೆಸೆದಂ ॥ ೧೯

ಒಂದು ದಿನ ಸತ್ಯೇಂದ್ರಚೋಳಧರಣೀಶನಾ |
ನಂದದಿಂ ವಾರಣಾಸಿಯೊಳೀಶ್ವರಂಗೆ ನಲ |
ವಿಂದ ಭಾಗೀರಥಿಯ ಪಾವನೋದಕದಿನಭಿಷೇಕಮಂ ಮಾಡವೇಳ್ಕುಂ ||
ಎಂದು ಗಂಭೀರಭೇರಿಯ ಮೊಳಗುವೇಳ್ಪೊಡೈ |
ತೆಂಗೊಡೆಯನಂಘ್ರಿಪಂಕಜಕೆ ಪಣೆಯಂ ಸಚಿವ |
ನೊಂದಿಸಿದನಿಟ್ಟು ಕುಂಕುಮಗಂಧರಜಮಾಪದಾಗದಂದವ ಪಡೆಯಲು || ೨೦

ಕರಕಮಲಮಂ ಮುಗಿದು ಜೀಯ ನೀನಿರ್ದ ಮಂ |
ದಿರವಲಾ ಕಾಶಿಯಾತೀರ್ಥಮೈತರ್ಪುದಿಂ |
ದರರೆ! ಭಾಗೀರಥಿಗೆ ಧರ್ಮವತಿಗೇಳ್ನೂರು ಗಾವುದದೊಳಡೆಗುಂದದೆ |
ವರಮುಕುಟವರ್ಧನರ ನಿಲಿಸಲೊರ್ವೊರ್ವರ್ಗೆ |
ಪರಮಜಲಮಂ ಕನಕಘಟದೊಳಿಯ್ದಿಸಲು ಶಂ |
ಕರನ ಪೂಜೆಯನೆಸಗಿದಂ ರಾಯನೆನಲುಚಿದ ಪಡೆಯನಿನ್ನಾರೆಣಿಪರು || ೨೧

ಇಂತು ಸದ್ಭಕ್ತಿಸಂಪತ್ತಿಯಿಂ ಚೋಳಭೂ |
ಕಾಂತನಿರಲೊಂದು ದಿವಸಂ ಬಂದನರರೆ! ನಿ |
ಶ್ಚಿಂತನಜ್ಞಾನಸುಜ್ಞಾನಕುಮುದಾಂಭೋಜತರಣಿಯತ್ಯಂತಕರುಣಿ ||
ಕಂತುಹರಮೂರ್ತಿಯೀಬಂದಿನೀಬಂದಂ ಕೃ |
ತಾಂತಭಂಗಸುಸಂಗ ಚಿದ್ಘನಶಿವಾಚಾರ್ಯ |
ರಿಂತು ಬಿಜಯಂಗೈದರೆಂಬ ಕಹಳೆಗಳೊದರೆ ಕೇಳ್ದನಾನಂದದಿಂದ || ೨೨

ಹಾ ಮಹಾದೇವ! ಬ*ರ್ದುಕಿದೆನಲಾ ಮದ್ಗುರು |
ಸ್ವಾಮಿ ಬಿಜಯಂಗೈದರೆಂದೆದ್ದು ಶಿವಗಣಾ |
ಸ್ತೋಮದೊಡನಧಿಕಸಂಭ್ರಮದಿಂದೆ ಪೊಳಲ ಸಿಂಗರಿಸವೇಳ್ದೊಡನೆ ನಡೆದು ||
ಕಾಮಿತಪ್ರದನ ಸಾಲೋಕ್ಯದಿಂ ಪದದಗ್ರ |
ಧಾಮಗುರುವರನ ಸ್ವಚ್ಛಂದ ಗುರುಕುಲಲ |
ಲಾಮನಂ ಕಂಡನಾಚೋಳಧರಣೀನಾಥನತಿಶಯಾನಂದದಿಂದ || ೨೩

ಕಂಡು ಶುಭಚಿಹ್ನಾಂಗನಾತ್ತ ಸಾಷ್ಟಾಂಗ |
ದಂಡಪ್ರಣಾಮಮಂ ಮಾಡಿ ಗುರುಪದವಿಡಿಯ |
ಲಂಡಲೆವ ಮಾಯೆಯೈರ್ದೆಯೊಡೆವ ಗಂಭೀರವಚನದಿ ಪರಸಿ ಕಣ್ಕೊಳಿಯಲು ||
ಮುಂಡಾಡಿ ನೋಡಿ ಭಸಿತವನಿಟ್ಟುರ ದ್ವಿಜರ |
ತಂಡ ಸುರಿವಕ್ಷತೆಯೊಳಲೆ ಕಂದ ಬಾರೆಂದು |
ಕೊಂಡಾಡಿ ಕರೆದಂ ಕೃಪಾಮೃತದ ಸೋನೆಯಂ ಚಿದ್ಘನಶಿವಾಚಾರ್ಯನು || ೨೪

ಪರಮಸಂಭ್ರಮದಿ ಪುರವೀಧಿಯೊಳು ಬರ್ಪ ಧೀ ।
ವರನನೀಕ್ಷಿಸಿ ಮುನ್ನ ಗೇಹಮಂ ಪೊಕ್ಕು ಕು ।
ಕ್ಕುರಗೆ ಶಿವಮುದ್ರೆಯಂ ಮಾಡಿ ಕೂಡಿರೆ ಮಟ್ಟಿಗರು ಜಱಿಯೆ ವೇದಂಗಳಾ ॥
ಬರೆಯಿಸಿದನದಱಿನೊರುಮುಕ್ಕಾಳುವಾರು ತ ।
ದ್ಗುರುಕುಲೋದ್ಭವ ಚಿದ್ಘನಾರ್ಯರಡಿಗಂಡೆವ್ಯೈ ।
ಹರ! ಮಹಾದೇವೆಂದು ನೀಲಕಂಠನ ಭಕ್ತರೈದೆ ನಲಿಯುತ್ತಿರ್ದರು ॥

ಶರಣರುಘೆ! ಚಾಂಗು! ಬೊಲ್ಲೆನಲು ಪೊಂಬಲ್ಲಕಿಯು ।
ಹರಿಸದಿಂದಿಱಿದರಸನಿಟ್ಟ ಮಣಿವಾವುಗೆಯು ।
ಚರಣದೊಳು ತಳೆದು ಮೇಲುಪ್ಪರವದಾರೆಂಬ ತಾರ್ಕಿಕರ ಘೋಷಣದೊಳು ॥
ಅರಮನೆಯ ಪೊಕ್ಕು ಪದಕೆಱಗಿದ ನೃಪಾಂಗನೆಯು ।
ಪರಸಿ ಶಿವಲಿಂಗಪೂಜೆಯನೆಸಗಿ ಸಿಂಹವಿ ।
ಷ್ಟರವನೊಲ್ದೇಱಿ ಭಕ್ತರೊಳೆಸೆದು ಶಿಷ್ಯನೊಡನೆಂದನಾಗುರುರಾಯನು ॥ ೨೬

ನಿನಗಿಷ್ಟವೇನೆನಲು ಜೀಯ ನಿಮ್ಮಂಘ್ರಿದ ।
ರ್ಶನವೆನ್ನ ದೋಷತಿಮಿರಜ್ಯೋತಿಯೆನ್ನ ಜೀ ।
ವನಚಾತಕಕ್ಕೆ ಕಾರ್ಮಂಬನಿಯಲಾ ನಿಮ್ಮ ಕರುಣರಸವಿನ್ನು ಬೇಱೆ ॥
ಘನವಸ್ತುವುಂಟೆ ನೀವೇ ಶಿವಂ ಗುರುವೆ ಕೇ ।
ಳೆನಗೆ ನಿಮ್ಮಮಲಬೋಧೆಯ ನಿರೂಪಂಗೆಯ್ವು ।
ದೆನಲು ಕಣ್ಗೆಸೆವ ಶಿವತತ್ತ್ವಮಂ ಪೇಳ್ದರಾ ಚಿದ್ಘನಶಿವಾಚಾರ್ಯರು ॥ ೨೭

ಪರದೈವಭಜನೆಗಳನಿಂದ್ರಿಯಾರ್ಥಂ ಮಾಳ್ಪ ।
ನರರ್ಗೆ* ಕಂಟಕಮಪ್ಪುದೆಂಬುದಂ ಸೂಚಿಸುವ ।
ಪರಿಯೊಳಾಶುಕ್ಲತ್ವಮಂ ತೊಱೆದು ಕೃಷ್ಣಪಕ್ಷವನೆ ಸಾರ್ದಾಕಾರಣಂ ॥
ಅರರೆ! ದೋಷಾಕರಂ ಜಡನಾಗಿ ಬೀದಿಯೊಳು ।
ಕರ ಬಱಲಿ ಮೆಯ್ಯೆಲ್ಲ ಬೆಳ್ಪಾಗಿ ತನ್ನ ತಾ ।
ಯ್ಯೆರಸಿ ಪೆರ್ಚುತ್ತ ಕುಂದುವ ಚಂದ್ರನೆನಲನ್ಯದೈವವಂ ನೆನೆಯ ಬಹುದೇ ॥ ೨೮

ಪತಿ ಹರ್ಯಜಾದ್ಯರ್ಗಜಾಂಡಕುಲರಕ್ಷಕಂ ।
ತ್ರಿತಯಮಱಿವಮಲಯೋಗಿಗಳ ಜ್ಞಾನಂ ಕುಱಿತು ।
ಸತತ ಷಟ್ತ್ರಿಂಶತ್ಪರಂ ತತ್ತ್ವಚಿದ್ಘನನ ನಿಷ್ಕಲನ ಶಿವನ ಕೂರ್ತು ॥
ನುತನಿರಾಕಾರಸಾಕಾರದ ಸದಾಶಿವಾ ।
ಕೃತಿಯು ತಳೆದಾತನ ಮಹೇಶನಾ ಪಂಚವಿಂ ।
ಶತಿಲೀಲೆಯುಮನೊಱೆವೆನೆನಲೊಡನೆ ರೋಮಾಂಕಚೋಳನಾದಂ ಚೋಳನು ॥ ೨೯

ಎಲೆ ದೇವ ದೋಷಾಕರನ ಪಿಡಿಯಲದು ನಿನ್ನ |
ತಲೆಗೆ ಬಂದತ್ತು ಸರ್ವರ ಸುಡುವ ಬಿಸವನಾ |
ನಲೆ ನಿನ್ನ ಕಂಠೋದ್ಗತಕ್ಕೆ ಬಂದುದು ನಾಡೆ ದುರ್ಲಕ್ಷ್ಯಮಪ್ಪ ಖಳರ ||
ವಿಲಗದೂರುಗಳ ಮೂಱಿಂ ನೋಡೆ ನಿನ್ನ ನಿ |
ಶ್ವೈಲನಯನದೊಳಗಂಬು ಮೂಡಿದುದು ಮುಚ್ಚಿತ್ತು |
ನಿಲಯದೊಳ್ ಉದುಳವಿರಲಿಂ ಬಾಧೆಯಿಲ್ಲ ಕೇಳಮರಗುಂಡಾಧೀಶ್ವರಾ || ೩೦

ಇದು ಸಕಲಭಕ್ತಪದಪಂಕೇಜರೇಣುವ |
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ |
ಸಿವ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಲಕರ್ಣ ||
ಹೃದಯಮಸ್ತಕವದನಸರ್ವಾಂಗಸೌಖ್ಯಕಾ |
ಸ್ಪದಮಖಿಳಸುಜನರ್ಗೆ ಪಂಚಾಕ್ಷರಿಯ ಮಹ |
ತ್ವದ ಬೋಧೆಯಿಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದು || ೩೧

ಎರಡನೆಯ ಸಂಧಿ ಸಮಾಪ್ತಂ

—— o: ——

## ಮೂಱನೆಯ ಸಂಧಿ

ಪಲ್ಲವಿ || ನಾದಬಿಂದುಕಳಾಗ್ರಗುರು ಬಂದು ಚೋಳಗೊರೆ |
ದಾದಿದೇಶಿಕಲೀಲೆ ಪಂಚವಿಂಶತಿಯಂ ಪ್ರ |
ಸಾದಮಂ ಕುಡಲಮೃತವತಿಗೆ ಸಂಭವಿಸಿತ್ತು ಮಂತ್ರಲಕ್ಷಕನ ಗರ್ಭಂ ||

ಇಂದುಶಿಲೆ ಮಂಟಪದಿ ಹೇರಂಬ ರೋದಿಸಲ್ |
ಕಂದ ಬಾಬಾ ಎನಲ್ ಗುಹ ಕಣ್ಣಲುಗಿತಮ್ಮ |
ಯೆಂದೆನೆ ಕುಮಾರ ಚೇಷ್ಟಿಸುವುದೇನೆನಲು ಮದ್ದೃಕ್ಸಂಖ್ಯೆಗೆಯ್ದನೆನಲು ||
ಉಂದುರಾಸನಚರಿತನೆಂದ ಷೋಣ್ ಶಕ್ತಿಧರ |
ಗೊಂದು ತಪ್ಪುಂಟಮ್ಮ ಮನ್ನಾಸವೆಬ್ಬಿದನೆನೆ |
ಮುಂದಸ್ಮಿತದೆ ಕುವರರಂ ವೀಕ್ಷಿಸುವ ಶರ್ವಸತಿ ನೀನೆ ಪೊರೆವುದೆಮ್ಮಂ || ೧

ದೇವಿ ದಾಕ್ಷಾಯಣಿಯು ಪರವಸ್ತುವಿಂ ಪಡೆಯು |
ತಾವಿಭುವಿಗಿತ್ತು ಪೆಣ್ಮಣಿಗಳಂ ಕುಡೆ ಸುರರ್ |
ಮೂವತ್ತುಮೂಱುಕೋಟಿಗಳಳಿಯರೆನಿಸಲಿರ್ಪತ್ತೇೞು ಸುತೆಯರರಸ ||
ಆವನಿತೆಯರನನಯದಿಂದಾಳೆ ದಕ್ಷಪ್ರ |
ಜಾವರಂ ಶಪಿಸಲಾಚಂದ್ರಸರ್ಚಿಸೆ ಶಿವನು |
ಪಾವಿಮಲರೋಚಿಯಂ ಧರಿಸಿದನಲಾ ಚೋಳ ಕೇಳೆಂದ ಗುರುರಾಯನು || ೨

ಪರಮಶಿವತತ್ತ್ವಕ್ಕೆ ಪ್ರಣವ ಕುಸುಮಕೆ ಗಂಧ |
ವರಫಳಕೆ ರುಚಿ ದಿವ್ಯರತ್ನಕ್ಕೆ ಸತ್ಕಾಂತಿ |
ಯೆರವಿಲ್ಲದಂತೆ ಪತಿಯಾದಿಯಿಚ್ಛಾಜ್ಞಾನತತ್ಕ್ರಿಯಾಶಕ್ತಿರೂಪ ||
ಧರಿಸಿ ಶಾಂಭವಲೋಕಪತಿಯಪ್ಪ ತನ್ಮಹೇ |
ಶ್ವರಗನನ್ಯದ ವನಿತೆಯುಮೆಯಾಗಲದುವೆ ಪಂ |
ಕರುಹಗರ್ಭಾಂತಕೋಟಿಗಳುದಯಕಾರಣದ ಲೀಲೆ ಕೇಳೈ ಯೆಂದನು || ೩

ಸರ್ವಲೋಕಂಗಳಂ ವಿಲಯವೈದಿಸುತ ಹರ |
ನೊರ್ವನೇ ನಿಂದು ಯೋಚಿಸಿ ತನ್ನ ಧರ್ಮವನ |
ಪೂರ್ವರೂಪಂ ಮಾಡೆ ಸತ್ಪ್ರಣವವೇದಪೌರಾಣಾಗಮಾಂಗನಾಗಿ ||
ಗೀರ್ವಾಣರಂ ತನ್ನನಾಸಿಕೋಚ್ಛ್ವಾಸಗಳ |
ಗುರ್ವಿನಿಂದಾಡಿಸುತ್ತೆಲರ್ವಟ್ಟೆಗರ್ಗೆ ಚಾ |
ತುರ್ವಿಧದ ಪುರುಷಾರ್ಥಫಲದ ವೃಷಭಂ ಶಂಕರಂಗೆ ವಾಹನಮಾದನು || ೪

ಆಲೋಕಮಾತ್ರದಿಂದಖಿಳಮಂ ಸುಟ್ಟುರುಹಿ |
ಮೇಲೆ ಡಮರುಧ್ವಾನದಿಂದೊತ್ತೆದಜಾಂಡಮಂ |
ಕೀಲಕಾದಿಗಳ ಪದಹತಿಯಿಂದೆ ನುಗ್ಗಿ ತಿಱ್ಱನೆ ತಿರುಗಲಹಿ ಮೊಱೆಯಲು ||
ಫಾಲಾಗ್ನಿಯಿಂದಿಂದು ಕರಗಲಮೃತದಿನಸ್ಥಿ |
ಮಾಲೆ ಜೀವಂಬಡೆಯೆ ಸೃಜಿತಾಜಕೃಷ್ಣೇಂದ್ರ |
ಜಾಲವೆನಲೆಸೆವ ನಾಟ್ಯಾಡಂಬರದ ಶಿವನ ಲೀಲೆಯಂ ಕೇಳೆಂದನು || ೫

ಹರನಿಂದೆಯಂ ಕೇಳ್ದು ಯಜ್ಞದೊಳ್ ತನುವಟ್ಟಿದು |
ಗಿರಿರಾಜನಂಗನೆಗೆ ಮಗಳೆನಿಸಿ ಬಳೆದು ಬಂ |
ದುರುಹಂಪೆಯಲ್ಲಿ ತಪಮಿರ್ದ ಶಿವನಂ ಭಜಿಸಲುಮೆಯಿತ್ತ ವಿಷ್ಣುಮುಖ್ಯ ||
ಸುರರುಂ ತಾರಕಗಳ್ಕಿ ಕಳುಪೆ ಬಂದೆಚ್ಚೊಡಾ |
ಸ್ಮರನ ಸುಟ್ಟಂಗಭವನೆನಿಸಿ ತಪಿಸುವ ಶಿವೆಗೆ |
ವರದನಾಗುತ್ತೊಗ್ಗೆ ಕಳುಪಿ ವಿಭವದೊಳಗಣಿಯಂ ಕೊಂದುವೆಚಾದನೀಶಂ || ೬

ಶಿವನುಗ್ರಮೂರ್ತಿ ಘುಡಿಘುಡಿಸುತ್ತೆ ವೈಕುಂಠ ।
ಕವಗಡಿಸಿ ನಡೆದು ವಿಷ್ವಕ್ಸೇನನಾಂತೊಡಿಱಿ ।
ದವನ ಶೂಲಕೆ ಸಾರ್ಚಿ ಪುಗೆ ವಿಷ್ಣುವಭವನಖಮುಕುರಪದಕೆಱಗುತೆನ್ನ ॥
ತ್ರಿವಿಧಸಪ್ತಕಜನ್ಮಸಾಫಲ್ಯವೆಂದು·ಕಂ ।
ಛವನೆ ಪಾಯುಲ್ ತಲೆಯು ರುಧಿರವುಗಲೆಱೆಯೆ ಪೊರೆ ।
ದವನ ದಿಕ್ಪಾಲಲೋಕವ ತಿರುಗಿ ಬಂದುದೇ ಹರನ ಭಿಕ್ಷಾಟನ ಕಣಾ ॥ ೭

ಸುರನಿಕರಮಾತಾರಕಂಗಳ್ಕೆ ಕಾಮನಂ ।
ಹರನ ತಪಮಂ ಕಿಡಿಸಲೆಂದಟ್ಟೆ ಗಿಳಿಗುದುರೆ ।
ದುರುಳತುಂಬಿಗಳೊಡನೆ ತಾವರೆಯ ನೂಲ್ದಿಱುವಿಗಿನಿವಿಲ್ಲನರಲಂಬನು ॥
ಅರರೆ! ಪೂಡುತ್ತೆಚ್ಚೊಡೋತು ತಪಮಂ ಮಾೞ್ಪ ।
ವರತಪ್ತಜಾಂಬೂನದಾಂಗ ನಾಗಾಜಿನೋ ।
ತ್ತರವಸನಯಂತ್ರವಾಹಕ ಭಾಳನೇತ್ರನವನಂ ಸುಟ್ಟು ಭಸಿತವಿಟ್ಟಂ ॥ ೮

ವರಸತಿಯ ಮುಡಿಗೆ ತರ್ಪಲ್ಲಿ ಯೂಥಿಕೆಯುದೊಂ ।
ದರಲವನಿಯೊಳು ಬೀೞೆ ಶಂಭುಗೆಂದುದಱಿಂದೆ ।
ಸುರಪುರವನಾಳ್ದ ರಂಭೆಯು ಬೋಧೆಯಿಂದ ಶುದ್ಧಸ್ಫಟಿಕಸಂಕಾಶನ ॥
ಚರಣಮಂ ಶ್ವೇತನರ್ಚಿಸಲವನ ಪಿಡಿಯೆ ಬಂ ।
ದುರವಣಿಪ ಕಾಲನಂ ಹೊಳೆವಾತ್ರಿಶೂಲದಿಂ ।
ದಿರದಿಟ್ಟು ಮಡಿದಾತನಸುವಿತ್ತು ಬೋಧಿಸುತ್ತಿಟ್ಟದಂ ಸರ್ವೇಶನು ॥ ೯

ಸಿರಿಯೊಡೆಯ ಕೋಲ್ಗಱಿಯ ಪೆರ್ವಕ್ಕೆಗೆಲರುಣಿಯ ।
ನಱಿಸುತಿರೆ ಕಂಗೆಟ್ಟು ಸರಿಗೆನ್ನದಾ ಪಾವಿ ।
ಗಿರದಮ*ರ್ದರ್ಗಯ್ವ್ಯೇಸಗಾಲಿಗಳು ನಡುಗಿ ಬೀೞೆ ತೇರ ಕೆಡೆವುದೆಂದು ॥
ಪರಿಕಿಸದೆ ಕೋಲ್ದುದಿಯ ಕಿಚ್ಚಿಗಾ ಪೊನ್ನಸಿಂ ।
ಗರವೆಟ್ಟುವಿಲ್ ಕರಗುಗೆಂದಳ್ಕದದಟ ಮು ।
ಪ್ಪುರಮಂ ವೆಱಂ ಸುಟ್ಟ ಕಡುಬಿರುದನಮರಗುಂಡದ ಮಲ್ಲಿನಾಥ ಶರಣು ॥ ೧೦

ವೃತ್ರಕುಲಭವಜಲಂಧರನಿಷ್ಟಮಂ ಪಡೆದು ।
ಧಾತ್ರನಿಂದವನ ಭಂಗಿಸಿ ನಡೆದು ಕಾದಿ ಮುರ ।
ಶತ್ರುವಂ ಪಿಡಿದು ಫಣಿಪಾಶದಿಂ ಕಟ್ಟಿ ಗಗನಕ್ಕಿಟ್ಟು ಸುರರ ಸದೆದು ॥
ಚಿತ್ರಮೆನೆ ಶಿವಪುರಿಗೆ ದಂಡು ಬರೆ ಹರನಗ್ನಿ ।
ನೇತ್ರದಿಂದುರುಹಿ ಜಲಮಂ ಚಕ್ರಮಂ ಬರೆವ ।
ಪಾತ್ರಕಸುರನ ತಲೆಯು ಶೀಘ್ರಗತಿಯಿಂದಱಿಯೆ ತಳೆದನಾಶಿರವನಭವಂ ॥ ೧೧

ಮಾರವೈರಿಯು ದಕ್ಷಿಣಾಂಗದೊಳ್ ಜನಿಸಿ ವಿಧಿ ।
ಮೇರುವಗ್ರದೊಳಾಪ್ತರೊಡನಹಂಕರಿಸುತಾ ।
ಶಾರಿವೇದಗಳ ನುಡಿಗಳ ಮೀಱಿ ಶಿವನಿದಿರೊಳುಲಿಯೆ ಪಂಚಮಶಿರವನು ॥
ಭೈರವಾಕಾರದಿಂ ಪಱಿದು ಗುರುಶಿಕ್ಷದೀ ।
ಕ್ಷಾರತಿಯೊಳವನ ಮಸ್ತಕದೆಡೆಗೆ ಕೈಯಿಟ್ಟ ।
ನೈ ರಾಯ ಕೇಳು ಸೋಮಾಷ್ಟಕವನೆಂದು ಬಿತ್ತರಿಸಿದನು ಗುರುರಾಯನು ॥ ೧೨

ಮೃಡನ ಸಭೆಯಿಂದ ಮನ್ನಣೆವಡೆದು ಯಜ್ಞಮಂ ।
ತೊಡಗೆ ದಕ್ಷಂ ದಧೀಚಿವ್ರತಿಯು ಶಪಿಸಲುಮೆ ।
ಯೊಡನೆ ನಾರದನಱಿಪೆ ಪೋಗಿ ಶಿವನಿಂದೆಗೇಳ್ದೊಡಲಱಿಯೆ ಹರನಱಿಯುತೆ ॥
ನಡುಗಣ್ಣಿನಿಂದ ಬೀರನ ಪೆತ್ತು ಕಳುಪೆ ಘುಡಿ ।
ಘುಡಿಸಿ ದೋಸಿಯು ತಲೆಯ ಹೊಡೆದಗ್ನಿಯೊಳಗಾರ್ದು ।
ಕೆಡಹಿ ಕುಱಿದಲೆಯಿತ್ತನವಿಚಾರವವಿಚಾರಕೀಡಾಗದೆಂತಿರ್ಪುದು ॥ ೧೩

ಅಮರರೊಳು ಕಾದಿ ರಕ್ಕಸರು ಕೆಟ್ಟೋಡಲಾ ।
ಕ್ರಮಿಸಿ ಪಿಂದಟ್ಟೆ ಮುನಿಪತ್ನಿ ದಿವ್ಯಾದೇವಿ ।
ಯಮದಂಡ್ಯವಾಯಲಾಕೆಯ ತಲೆಯನರಿಯೆ ಭೃಗು ಶಪಿಸಲದಱಿಂ ವಿಷ್ಣುವ ॥
ಕ್ರಮದೆ ಬಕ ಧೀವರ ನಿಜಾಂಗ ಶರಭತ್ವದಿಂ ।
ದಮೆ ತೀರ್ಚೆ ತತ್ಸಿಂಹಮಂ ಕೂರ್ಮೆಯಿಂ ತಳೆದು ।
ಹಿಮಘೃಷ್ಟಿಶೇಖರಂ ನರನಿಷ್ಟದಾತಪಂಚಾನನಂ ಮೆಱೆದನಂದು ॥ ೧೪

ಕ್ಷೀರಶರಧಿಯೊಳು ಹರಿ ಮಲಗಿರ್ದೊಡಾವೇಳೆ ।
ವಾರಿಜೋದ್ಭವನೈದಿ ಯುದ್ಧಮಂ ಮಾಡಲಾ ।
ಶೌರಿಯುಜರಿಸಲೆರಡು ಪಾಶುಪತಬಾಣದುರಿಯಿಂ ಜಗಂ ಬೇಯೆ ನಡುವೆ ॥
ಮಾರಾರಿಯುರಿಲಿಂಗವಾಗಿ ಕುಳಿರ್ವೆಟ್ಟನ ಕು ।
ಮಾರಿಯೊಡನರ್ಧನಾರೀಶತ್ವದಿಂದೊಳಗೆ ।
ರಾರಾಜಿಸುತ್ತವರ ಸಲಹಿ ತಂಪಂ ಜಗಕೆ ಬೀಱಿದಂ ಚಂದ್ರಧರನು ॥ ೧೫

ವಾರಿಜೋದ್ಭವನಾತ್ಮಸುತೆಗಳುಪಿ ಮೃಗಿಯಾಗಿ ।
ನಾರಿಯೋಡುತ್ತಿರಲ್ ಹರಿಣನಾಗುತ್ತಲಾ ।
ಭಾರತಿಯ ಬೆಂಬತ್ತಿ ರಮಿಸುವಿನಮವಳಭವನಂ ನೆನೆಯೆ ವೇದಂಗಳು ॥
ಸಾರಮೇಯಗಳಾಗಿಯಾಘ್ರಾಣಿಸುತ್ತಿಡಿಯ ।
ದಾರಿವಿಡಿದೈದೆ ಶಬರಾಕೃತಿಯೊಳಾವಿಧಿಯ ।
ನಾರಿ ತಲೆ ಪಱಿಯಲೆಚ್ಚಂ ಮುನಿದಿಗೀಶನೆನಿಸುವ ಕಿರಾತಾದಿರುದ್ರಂ ॥ ೧೬

ಬಂದು ಬಲಿಯುಂ ಭೂಮಿಯುಂ ಬೇಡಿ ಪಡೆದು ಬಳಿ ।
ಕೊಂದು ಕಾಲಂ ಸತ್ಯಲೋಕಕ್ಕೆ ನೀಡಲರ ।
ವಿಂದಭವನಿಟ್ಟ ಮಂತ್ರೋದಕದಿನುಡಿದಲ್ಲಿ ಸಿಲ್ಕಲದು ತದ್ವಿಷ್ಣುವ ॥
ಮಂದಿವಾಳವ ತೀರ್ಚೆ ಬೆನ್ನಲುವ ಮುಱಿದವಂ ।
ಮುಂದಕ್ಕೆ ತಲೆವಾಗಿ ನಡೆವುದಕೆ ಹರಿ ತನ್ನ ।
ಹಿಂದ ನೆನೆಗಿರಲೆಮ್ಮ ಸನ್ನಿಧಿಯೊಳೆಂದು ಕಂಕಾಳಮಂ ಪಿಡಿದನಭವಂ ॥ ೧೭

ಕೀಲಾರವಂ ಸಾವ ಕಾಲದೊಳು ಮಣಲಿಂ ಮ ।
ಹಾಲಿಂಗಮಂ ಮಾಡಿ ಲೋಲತೆಯಿನರ್ಚಿಸುವ ।
ಬಾಲಚಂಡನ ತಂದೆಯಾಲೋಕಿಸುತ್ತೊದೆಯೆ ಶೂಲಿಯುಂ ತಂದೆ ಬಳಿಕ ॥
ಸ್ಥೂಲಪರಶುವನಾಕಪಾಲಿಯಿಂ ಪಡೆದವನ ।
ಕಾಲ ಕೀಲರಿಯೆ ಪೊಡೆದಾರಲಭವಂ ಮೆಚ್ಚಿ ।
ಕೈಲಾಸಕುಯ್ದೊಡೆ ವಿಶಾಲಗಣತತಿಯಿರ್ಪ ಸಾಲೊಳಾಶರಣ ಮೆಱೆದಂ ॥ ೧೮

ಶೂಲಿ ಸೂಡಿದ ಪುಷ್ಪಮಾಲೆಯುಂ ದುರ್ವಾಸ ।
ಲೋಲಮುನಿ ಕುಡೆ ಸಿತವ್ಯಾಲಕುಂಭಕ್ಕಿಟ್ಟೊ ।
ಡಾಲೇಖವಲ್ಲಭಸ್ಥೂಲಭಾಗ್ಯಂ ಪೋದ ಕಾಲದೊಳಗಸುರಸುರರ ॥
ಶೈಲದಬ್ಧಿಯ ಮಥನವೇಳೆಯೊಳಗಹಿವಿಷ ।
ಜ್ವಾಲೆಯಿಂ ಬೇವ ಬಲಮೂಲದನಿಮಿಷರ ಭಯ ।
ಜಾಲಮಂ ಪಱಿದುಗ್ರಹಾಲಾಹಲಮನರರೆ ! ಶೂಲಿ ಕಂಠದೊಳ್ ತಳೆದಂ ॥ ೧೯

ಆಜಲಪ್ರಳಯಕಾಲದೊಳು ಹರ್ಯಜರತಿ ।
ವ್ಯಾಜದಿಂ ಪಳಚಲುದಯಿಸಿದ ಲಿಂಗದ ಮಹಾ ।
ತೇಜಸ್ಸು ತತ್ಸಮುದ್ರದ ಬಡಬನಂತೆಸೆಯಲೆಡಬಲದೊಳಿಂದ್ರನೀಲ ॥
ಯೋಜಿಸಿದ ತತ್ಕನಕಪುಷ್ಯರಾಗಂಗಳವೊ ।
ಲಾಜನಾರ್ದನವಿಧಿಗಳಿರೆ ಚಕ್ರಶಂಖಗಳ ।
ನಾಜಲಧಿಯಾವರ್ತಶಬ್ದಂಗಳೆನಲಿತ್ತನಭವನಂದಾವಿಷ್ಣುಗೆ ॥ ೨೦

ಮಿಸುಪ ವಿದ್ಯೆಯ ಮೊಗದ ಕೈಯುಳ್ಳದಾನಮಯ ।
ರಸಿಕಂಗೆಬೂಚಾರಗುರುಸಮರ್ಪಣೆಯ ಸಂ ।
ಧಿಸುವ ಗಣಪಂಗೊರೆವೆನೆಂದು ನಾನಾಶಾಸ್ತ್ರಮಂ ದೇವರಾದಿತ್ಯನು ॥
ಬಸೆದು ನಿರವಿಸೆ ಕೇಳ್ದದಿವನ ಪೊಡೆಯುಂ ಬಳಸೆ ।
ಸಶಿವಪ್ರಸಾದಿಯಾನೆಂಬ ಫಣಿ ಬಂದು ರಂ ।
ಜಿಸುವ ಕುಕ್ಷಿಯ ಕುಮಾರನ ನೋಡಿ ಹರ್ಷಿಸುವನಭವನೆಲೆ ಚೋಳ ಕೇಳ್ ॥ ೨೧

ಮನವೊಲ್ದು ಶಿವನಗಜೆಯುಂ ರಮಿಸುತಿರೆ ಸುರರು ।
ದನುಜಭಯಕಗಿದಗ್ನಿಯುಂ ಕಳುಪೆ ಬಂದು ಶಾಂ ।
ಭವನ ವೀರ್ಯವ ಕೊಳಲು ಗರ್ಭವಾಯ್ತುಮರರುದ್ಧಾರಿಸಲು ಶರವಣದೊಳು ॥
ಅನಲಸಂಬಂಧ ಕೃತ್ತಿಕೆಯೊಳೊಗೆದಾಷಡಾ ।
ನನನನಾಗಿಸಲಿಂದ್ರನಂ ಜಯಿಸಿ ಸೇನಾನಿ ।
ದಿನವೇಳಿಯೊಳು ತಾರಕಾರಿಯಾದಂ ಚಿತ್ರಭಾನುಭೂವಾದ ಕತದಿಂ ॥ ೨೨

ಪರಶಿವನ ಧರ್ಮವೇ ವೃಷಭನಾಕಾರದಿಂ ।
ದೆರಡನೆಯ ಶಂಭುವೆನಿಸುವ ಬಿಣ್ಪಿನಿಂದ ಬಂ ।
ದುರಕೃತಯುಗಂ ತ್ರೇತೆಯುಂ ದ್ವಾಪರಂ ಕಲಿಯುಗಂಗಳೊಳು ನಾಲ್ಕು ಮೂಱು ॥
ಪರಿಯಾಯದೆರಡೊಂದು ಪಾದಗಳು ನಿಲ್ವಿನಂ ।
ಧರಿಸಿ ಪುರುಷಾರ್ಥಂಗಳೊಳು ಮೋಕ್ಷಮುಖ್ಯಮೆಂ ।
ದರಸ ಕೇಳಂತೆ ಗೆಱವೇಕಪಾದದ ಶಿವನ ಲೀಲೆಯೆಂದಾರ್ಯನೊರೆದಂ ॥ ೨೩

ಗೌತಮಂ ಕ್ಷಾಮದೊಳು ಪಾರ್ವರಂ ಸಲಹಿ ಬಱಿ ।
ಕಾತಂಗೆ ಗೋವಧೆಯನವರು ಕಲ್ಪಿಸೆ ಪಡೆದ ।
ಜಾತನಿಂ ಗಂಗೆಯುಂ ಮರಳಿ ಶಪಿಸಲು ನೀಚದರ್ಶನಗಳಾಗೆ ಖಲರು ॥
ಸೋತಾಕ್ರಿಯಾಜ್ಞಾನಿಯಕ್ಷಪಾದಂಗಭವ ।
ನೋತು ನಿರವಿಸೆ ನಂದಿಯೇ ಸುಖಾವಹಮೂರ್ತಿ ।
ನೂತನಾಚಾರ್ಯಂಗೆ ನಯನತ್ರಯಂ ಬೋಧೆಯಿಂದೆ ರಕ್ಷಿಸಿದನವರಂ ॥ ೨೪

ದಾರುವನದೊಳು ಭಿಕ್ಷು ಶಿವನ ಮೇಲಂದಪ ।
ಸ್ಮಾರಫಣಿಡಮರುಮುಖ್ಯಮನಟ್ಟೆ ಮುನಿಗಳದ ।
ಮಾರಾರಿಯುಳಮಡಿಸಿಕೊಂಡು ತಾಂಡವಮನೆಸಗುತ್ತ ಬಯಲಾಗಲವರು ॥
ಸಾರಿ ಕೀರ್ತಿಸೆ ವಟದ ಮೊದಲೊಳು ತ್ರಿಣೇತ್ರಕೋ ।
ಟೀರಾದಿಯಿಂ ದಕ್ಷಿಣಾಮೂರ್ತಿ ತನ್ಮುಖಸ ।
ರೋರುಹಗಳಲರೆ ಪುಸ್ತಕವಿಡಿದು ನೋಡಿ ಬೋಧಿಸಿ ಪೊರೆದನಾರುಷಿಗಳ ॥ ೨೫

ಪಾಲ್ಗಡಲ ಮಗಳಿನಿಯನೊಡನೆ ಬೊಮ್ಮಂ ಸರಿಮಿ ।
ಗಿಲ್ಗೆ ಕಿನಿಸಿಂ ಪೋರೆ ಮಿಱುಪ ಮಿಂಚುಗಳ ಬಂ ।
ಬಲ್ಗಳಗ್ಗಳ ಮೀಂಗಳಮದರ್ಗ್ಯಯುವರನೇಸಱ ಪಲವ ಜಗಜಗಿಸುವ ॥
ಬಲ್ಗಿಚ್ಚ ಪಱಿವ ಲಿಂಗಂ ಮೂಡೆ ಕಣ್ಗೆಟ್ಟು ।
ಕಾಲ್ಗಾಣದಾದನಾಕಾಳ್ಗೈಯ್ತುಕಳ್ಕುತೆ ತು ।
ಱಲ್ಗಂದಿ ನಾಲ್ಮೊಗಂ ಹುಲಿಗಂಡನೇ ಶಿವನ ಬಲ್ಗಣೆಯ ಪೋಲ್ಗಾವನು ॥ ೨೬

ಎಲೆ ಚೋಳ ಪಂಚವಿಂಶತಿಲೀಲೆಗಳ ಕತೆಯು |
ನೊಲಿದು ಕೇಳ್ದವರಷ್ಟಮದಗಳಂ ಕೆಡೆಮೆಟ್ಟಿ |
ಯುಲಿದು ಸಪ್ತವ್ಯಸನದೇಳ್ಗೆಯುಂ ವೈರಿಷಡ್ವರ್ಗಮುಂ ಕಿಬ್ಬು ಬಿಸುಟು ||
ಬಲದೊಳಂತಃಕರಣಚಾತುಷ್ಟಯುಂಗಳ |
ಸ್ಖಲಿಕೆಯುಂ ತೀರ್ಚಿ ಪಡೆವರು ಭೋಗಮೋಕ್ಷಂಗ |
ಳಲಘುಪದವಿಯುನೆಂದು ಪೇಳ್ದನಾಚಿದ್ಘನಶಿವಾಚಾರ್ಯನಘತಿಮಿರಸೂರ್ಯಂ || ೨೭

ಎಂತೆನ್ನ ಪರಮಾರ್ಥದಾರಿದ್ರ್ಯಕೆಂದು ಚಿ |
ಕ್ಕಾಂತಗುರುವಂ ಕೇಳಲಾಶಿವಾಗಮುಲಿಖಿತ |
ಹಂತಿಯನಿಸುವ ಸಾಧನಗಳಿಂದ ನೆಲೆಯುಱಿದು ಕಾರಿಕಾಲಮ್ಮೆಕಾಲು ||
ಮುಂತಾಗಿ ನಡೆಯೆ ಸುಜ್ಞಾನಾಂಜನವನಿಕ್ಕಿ |
ಶಾಂತಮುರುಘರೆ ಮಂತ್ರವಾದಿಯಾಗುತ್ತಿರೆ ಪು |
ರಂತರೆಂತಧಿಕಪರವಸ್ತುವಂ ಕಂಡವರಡಿವಿಡಿದು ಬರ್ದುಕೆಂದನು || ೨೮

ಇಂತು ಚಿದ್ಘನಶಿವಾಚಾರ್ಯರಾಚೋಳಭೂ |
ಕಾಂತಂಗೆ ಬೋಧಿಸುತ್ತಿರ್ಪೆಡೆಯೊಳಾನೃಪನ |
ಕಾಂತೆ ಸದ್ಗುಣಿಯುಮೃತವತಿ ನೋಡಿ ಕೆಳದಿಯೊರ್ವಳೊಳಂದಳಾನಂದಿಸಿ ||
ಚಿಂತಾಮಣಿಯು ಬಜೀವ ಪಂಚಕಲ್ಪದ್ರುಮದ |
ಸಂತತಿಯುನತಿಗಳೆವ ಕರದಾನಿ ಗುರುಮೂರ್ತಿ |
ಮುಂತೆ ರಾಜಿಸುತಿರ್ಪರಾವರ ಕೃಪೆಯಿಂ ಪಡೆವೆನೆನ್ನಭಿಮತವನೆಂತೆನೆ || ೨೯

ಹಿಂದೆಮ್ಮ ಮಂತ್ರಿ ಪತಿಮೋಹಿಯಣುಗನನೆನ್ನ |
ಕಂದನೆಂದೇ ಬಗೆದು ಸಲಹುತಿರ್ದಪ್ಪೆನಾ |
ನಂದು ರೇವಣವೇಶಿಕೇಂದ್ರಪದಯುಗವ ತೆಲ್ಲಿಗ ಕಲ್ಲಿಸೆಟ್ಟಿ ನೆನೆದು ||
ಬಂದು ಮುನ್ನುಳ್ಳಕ್ಷಿಗೆಣೆಗಣ್ಣನುಳ್ಳಾತ |
ನೆಂದೆಂಬಿನಂ ಮೆಱೆದನಂತೆ ಮದ್ಗುರುಕೃಪೆಯೊ |
ಳಿಂದು ಸುತನೊರ್ವನಂ ಮದ್ಗರ್ಭಶರಧಿಯೊಳು ಪಡೆವೆನಾನೆಂತೆಂದೊಡೆ || ೩೦

ಚೆಲ್ಲೆಗಂಗಳ ಮಿನುಗುವರಳಲೆಯ ಮೊಂಗಾಯ್ಗ |
ಳುಲ್ಲಾಸದಿಂ ಮಿಱುಗುವೆಳನಗೆಯ ಮೊಳವಲ್ಲ |
ಗಲ್ಲದೆಡೆಯೊಳಗೊಸರ್ವ ಲಾಲಾಜಲಾಮೃತದೊಳಟ್ಟುಂಬ ಸುತನ ತೊದಲ ||
ಸೊಲ್ಲನಾಲಿಸಿ ನೋಡಿ ತೆಗೆದು ಮೂರ್ಧ್ನಿಘ್ರಾಣ |
ದಲ್ಲಿ ತಕ್ಕೈಸಿ ಬಾಯೊಳು ಬಾಯನಿಟ್ಟಿಕ್ಕಿ |
ಅಲ್ಲಿ ಮಂಡಾಡುವೆಂ ಪಾಡುವೆಂ ಮುದ್ದುಗಳ ಬೇಡುವೆನೆನುತ್ತ ನಲಿದು || ೩೧

ಸೋಗೆಗಂಗಳ ವನಿತೆ ಮನದೊಳಗೆ ನರ್ತಿಸು ।
ತ್ತಾಗಳೈತಂದು ಗುರುಪದಕೆ ವಂದಿಸಿ ನಿಂದು ।
ಕೈಗಳಂ ಮುಗಿದು ಬಿನ್ನಪ ಚೇಯು ಚೋಳಕುಲಕಮಲಬಾಲಾರ್ಕನೆನಿಪ ॥
ಚಾಗಿ ಕುವರನನಿತ್ತು ರಕ್ಷಿಸೆನೆ ದೇಶಿಕಂ ।
ರಾಗಿಸುತ್ತುಂ ಮಗಳ ಕೊಳ್ಳನುತೆ ಕರ್ಪೂರ ।
ಯೋಗತಾಂಬೂಲದೊಡನಿಷ್ಟಸಿದ್ಧಿಯನಿತ್ತನಾರ್ಯನಾನಂದದಿಂದ ॥ ೧೨

ಧಾರಿಣೀಶನ ಹೃದಯಕಮಲವನಲರ್ಚಿ ಗಂ ।
ಭೀರ ಶಿವಭಕ್ತಚಕ್ರಂಕಳ್ಗೆ ನಲವಿತ್ತು ।
ಸಾರಿದವರಜ್ಞಾನತಿಮಿರವಂ ತೀರ್ಚಿ ನೃಪನಂಗನೆಯ ಹರ್ಷವೆಂಬ ॥
ಚಾರುನಯನಕ್ಕೆ ಬೆಳಗಂ ಬೀಱಿ ಸರ್ವಸ ।
ತ್ಕಾರವಂ ಕೈಕೊಂಡು ಗಣಸಂತತಿಯ ಸಿರಿಯೊ ।
ಳಾರಾಧ್ಯಮೂರ್ತಿ ಬಿಜಯಂಗೈದನಮಲಪ್ರಭಾಕರಂ ನಿಜವಾಸಕೆ ॥ ೧೩

ಇತ್ತಲೀಚೋಳಧರಣಿಪನೀಶಪೂಜೆಗೈ ।
ಯುತ್ತೆ ಶಿವಶರಣಗೋಷ್ಠಿಯ ಸುಖದೊಳಾಱಿ ಮುಱು ।
ಗುತ್ತೆ ಮಾರ್ಕಂಡೇಯಮುಖ್ಯಪುರಾಣದೊಳಗೋಲಾಡುತಾನಂದದಿಂ ॥
ಸತ್ಯಸದ್ಗುಣಶಾಂತಿವೀರವಿತರಣಗಳಿಂ ।
ತತ್ತರುಣಿಸಹಿತ ಚರಸೇವೆಗೈಯುತ್ತಲೈ ।
ವತ್ತಾಱುದೇಶದರಸರು ತನ್ನನೋಲೈಸೆ ರಾಜ್ಯವಾಳುತ್ತಿರ್ದನು ॥ ೧೪

ಅರಿರಾಯಗಿರಿವಜ್ರದಂಡನಘವನಕಾಲ ।
ಸರಣಿ ನಿರ್ಮಲಧರ್ಮ ಸುಜ್ಞಾನಸನ್ಮಾನ ।
ನಿರುತಿಯಜ್ಞಾನಪಾಶಚ್ಛೇದಪಾವನಂ ರಾಜರಾಜಂ ಮದೀಶಂ ॥
ಧರಣಿಯಧಿನಾಥನಹ ಸತ್ಯೇಂದ್ರಚೋಳವರ ।
ನರಪತಿಯನಂತಗುಣಿಯೆಂದು ದಶದಿಕ್ಕಿನೊಳು ।
ಪರಿವಾಡಿವಳು ಕೀರ್ತಿಮಾನಿನಿ ವಿಲಾಸದಿಂ ಶಿವನ ಭುಜಬಲದಂದದೆ ॥ ೧೫

ಅಂಬುಧಿಪರೀತವಸುಮತಿಯನಾಳುವ ನೃಪಕ ।
ದಂಬಕೋಟೀರಮಂಡಿತಪದಂ ದಿಗ್ಭೂಮಿ ।
ಯಂಬರವ ಚುಂಬಿಸುವ ಕೀರ್ತಿ ಬಾಲಾರುಣಾನ್ವಯಸಮುದ್ಧರಣಸುತನು ॥
ಬಿಂಬಾಧರಿಯ ಗರ್ಭದಿಂದೊಗೆವನೆಂಬುದ ನಿ ।
ತಂಬಿನಿಯು ಚೆಲ್ವಿನಂಬರದಲ್ಲಿ ಕಾಣಲಾ ।
ಯ್ತೆಂಬಂತೆ ಮಾಣಿಕಂಗಂಡಳಂತಾನೃಪನ ರಾಣಿ ಗುರುಮಂತ್ರವಾಣಿ ॥ ೧೬

ಹಿಂಡದಿರು ಹಿೞಿಯದಿರು ಹಿಕ್ಕಿ ಕೂಡೊದಱದಿರು ।
ಪುಂಡರೀಕೇಕ್ಷಣೇ ನಾನಳ್ಕಿ ನಿನ್ನ ಮುೞಿ ।
ಗೊಂಡು ಪಾದಾಬ್ಜಮಂ ನೆಱೆ ಸಾರ್ದು ಬಾೞ್ವೆನೆಂದಿರ್ದೆನೆಲೆ ತಾಯೆ ಕೂರ್ತು ॥
ಮುಂಡೆಯೊಳ್ ಕೈಯಿಡಲ್ ನಂಬಿರ್ದೆನಕಟ! ಮುಂ ।
ಕೊಂಡು ಮುಡಿಮಾಡಿ ಪಡೆಗಟ್ಟುವಾ ಕೇಳ್ ನಿನ್ನ ।
ಗಂಡಂಗೆ ಲೇಸೆ ಪೇೞೆಂಬಳಕದಿಂ ಪಿಂದು ರಾಜಿಸಿದಳಾವಮಾನಿನಿ ॥ ೪೭

ಇಂತು ಚಾತುರ್ಥಿಕಸ್ನಾನಮಂ ಮಾಡಿ ನೃಪ ।
ಕಾಂತೆ ದೇವಾಂಗಮಂ ತೆಗೆದುಟ್ಟು ಸತ್ಕೃಪಾ ।
ವಂತನಂ ಪಡೆವಚ್ಚಿಱಿಂ ಬಟ್ಟಮುತ್ತುದೊಡಿಗೆಯ ತೊಟ್ಟು ಸುಲಿಪಲ್ಗಳ ॥
ಕಾಂತಿ ಮುಖದೊಳ್ ಪೊಳೆಯೆ ಶುಭ್ರತ್ರಿಪುಂಡ್ರದಿಂ ।
ದಂ ತಳ್ತ ಚೆಲ್ವ ಪಣೆಯಿಂ ಮುಡಿದ ಮಲ್ಲಿಗೆಗ ।
ಳಿಂ ತರಳೆ ಮಾಱುಲೋಕಕ್ಕಮರ್ದ*ಗೆಱುವ ಚಂದಿರಮೊಗದಿನೊಪ್ಪಿರ್ದಳು ॥ ೪೮

ತಿಲಕುಸುಮದಾಯ ಸಂಪಗೆಯೆಂಬ ನಿಂದೆಗಳ ।
ಮಲಹರನ ಭಕ್ತೆಯ ಮುಖಾಬ್ಜಮಂ ಸಾರ್ದು ತಾಂ ।
ಕಳೆಯೆ ನಾಸಿಕ ಚಂದ್ರಸೂರ್ಯರೆಡಬಲದೊಳೋಲೈಸಲಾಚಾರಲಿಂಗ ॥
ನಿಳಯಮಾಯ್ತಲ್ಲಿ ಪರವಸ್ತುವಂ ಕುಱಿತೆನ್ನ ।
ತಲೆಮುಡಿಯೊಳೆಸಗುವೆಂ ತಪವನೆನುತುಂ ಮುಕ್ತಿ ।
ನೆಲೆಗೊಂಡಪೋಲಮೃತವತಿಯ ಮೂಗುತಿಯ ಪೆರ್ಮುತ್ತು ರಾರಾಜಿಸಿದುದು ॥ ೪೯

ಶ್ರುತಿಗಳಭವನನಱಿಸಿ ಬೞಲಿ ಶಿವಮಯಮಪ್ಪ ।
ಸತಿಯ ನಯನಂಗಳಂ ಸಾರ್ದವೈ ಸರಿಯಿಲ್ಲ ।
ದತಿಶಯದ ಲಾವಣ್ಯರಸವ ನೆಱೆ ಕಣ್ಣಿಟ್ಟು ಕರಗಿ ಕಿವಿಗೋವಿಯಲ್ಲಿ ॥
ಚತುರಾಸ್ಯನೆನಿಪಕ್ಕಸಾಲೆಮೆರೆದಪನೆಂಬ ।
ಮತಿ ಬೇಡವೆನಲೆಸೆದುವಾಕರ್ಣನಯನಗಳು ।
ಪತಿಭಕ್ತೆಗಾವಗಂ ಕಂಡು ಕೇಳ್ದರ ಸಂಗಮಗಲದಂತಱಿಪುವಂತೆ ॥ ೫೦

ಗುರುತರದ ಕುಚದಿಂದ ಚಂಪಕದ ಕುಸುಮಬಂ ।
ಧುರಲಘುಶ್ವಾಸನಾಸಿಕದಿಂ ಚಕೋರದೊ ।
ಳ್ಪರಿಜಿನಕ್ಷಿಗಳಿಂದಲಾಪಾದಮಸ್ತಕಾಭರಣಂಗಳಂದದಿಂದ ॥
ಸ್ಮರನೆಂಬ ಬಾಲಕಗೆ ಛಂದೋವಿಭೇದಮಂ ।
ಪರಮಕವಿಹೃದಯದಱಿಕೆಯನಲಂಕಾರದಲಿ ।
ಪರಿಣತೆಯ ತಿಳಿಪುವಾಚಾರ್ಯಳೆನೆ ರಾಜಿಸಿದಳಾರಾಣಿ ಕಮಲಪಾಣಿ ॥ ೫೧

ಪೊಡೆಯೊಳಗೆ ಪುಗಿಸದಿಂದೆನ್ನ ಪೊಱಮಡಿಸಲಾ |
ಹಿಡಿತಕ್ಕೆ ಬಂದು ದಾರಿದ್ರ್ಯದಿಂದಂ ನವೆದ |
ನಡುವನಾಶ್ರೈಸಿದೆಂ ನಾಭಿಮಂಡಲದಿಂ ಪಯೋಧರದ ಸೀಮೆಗಾಗಿ ||
ನಡೆವೆನೆಂದೈತರ್ಪ ಬಾಸೆಯುಂ ತಮ್ಮ ನೆಲೆ |
ಯೆಡೆಗೆ ಕರೆದೈತರಲ್ ಮೋಹದಿಂದಂ ತಡೆಯು |
ಲ್ದೊಡಬಟ್ಟು ಮೊಲೆಗಳೆಂದೆಸೆದಳಾನಾರಿ ಕಂದರ್ಪರಾಜ್ಯದ ವಿಚಾರಿ || ೪೨

ನಳಿತೋಳ ಮೊದಲೆಂಬ ಬಾಹುಯುಗಮೆಂಬ ನುಡಿ |
ಗಳ ನಿಂದೆಯಂ ಪೊರ್ದದಧಿಕಚಂಪಕಮಾಲೆ |
ಗಳ ಪಾಂಗಿನಿಂದಿರ್ಪ ದೋರ್ಲತಾಯುಗಳದಿಂದಮವು ' ಮನ್ಮಥವೀರನ ||
ನಿಳಯುದಗ್ರದ ಗಂಧಸಿಂಧುರದ ಪೋಲ್ವ ಕೋ |
ಮಳೆಯೆಂಬುದಂ ಕುಚದ ನಡುವೆಸೆವ ಬೈತಲೆಗ |
ಳೊಳೆ ಕಾಣಲಾದುದೆಂಬಂತೆಸೆದಳಾಚೆಲ್ವ ನಾರಿ ಸದ್ಗುಣವಿಚಾರಿ || ೪೩

ಎರಳೆಗಣ್ಗಳ ಪಟಫಲಾಧರದ ಬೆಳ್ನಗೆಯು |
ಪರಪುತ್ತುಮಿರ್ಪ ಪ್ರಕಾಶರದದೆಸೆವ ಚಂ |
ದಿರಮೊಗಕ್ಕೆಳಸುತಾನಾಭಿವಲ್ಮೀಕದಿಂ ಬಾಸೆಯೆಂಬಸಿತಸರ್ಪಂ ||
ಬರೆ ರಾಜನಾಳು ಸಾಲಿಟ್ಟು ಬಟ್ಟೆಯು ಕಟ್ಟು |
ಉರುಫಣಿಯು ಪೆಡೆವರಲ್ ಕುಚದ ಮಧ್ಯದೊಳಿರ್ಪ |
ಪರಿಯ ಮಣಿಮಯುಮಧ್ಯದಮಲನಕ್ಷತ್ರಮಾಲಿಕೆ ಮೆಱೆದುದಾವನಿತೆಗೆ || ೪೪

ಕುಮುದದಿಂ ಪ್ರತಿಕೂಲದಿಂ ವಿಜಾತಿಗಳ ಸಂ |
ಗಮದಿಂದ ಜಡಜೀವನೋಪಾಯದಿಂ ಭಂಗ |
ಸಮಿತಿಯಿಂದಿರ್ಪ ತಾವರೆಗೊಳಂ ಪತಿಯ ಹರ್ಷಾನುಕೂಲೆಯು ಸತ್ಕುಲ ||
ರಮೆಯನುತ್ತಮಶಿವಪ್ರಾಣಿಯನಭಂಗದು |
ತ್ತಮಪೂರ್ಣಚಂದ್ರವದನೆಯು ನಾಭಿಸರಸಿಯೊಂ |
ದಮಲತ್ವಕೆಣೆಯಲ್ಲವೆಂದೆಸೆದಳಾಚೆಲ್ವ ಪೆಣ್ಣು ಭೂಭುಜನ ಕಣ್ಣು || ೪೫

ಕನ್ನೈದಿಲಲಗೆಯಾರಡಿಗೆ ಶಶಿಬಿಂಬಕ್ಕೆ |
ರನ್ನಕ್ಕೆ ಪೊನ್ನ ಕಳಸಕ್ಕೆ ತಿಳಿಗೊಳಕೆ ಮಿಗೆ |
ಚೆನ್ನಸೆವ ಬಗಸೆಗಣ್ಣಳಕವಾನನಮಧರಕುಚಯುಗ್ಮಮೆಸೆವ ನಾಭಿ ||
ಮುನ್ನಮೇ ಸರಿಯೆಂಬ ಬಲ್ಕೆ ಪೊಱಮಾಜಧಿಕ |
ವೆನ್ನಲುಚಿತಂ ತದ್ಭವೆನಲೆಸೆದಳಾಚೆಲ್ವೆ |
ಕನ್ನೆ ಭೂಭುಜನ ಮನಸದನ್ನೆ ರತಿಕಲೆಯೊಳುತ್ಪನ್ನೆ ಸದ್ಗುಣಕಭಿನ್ನೆ || ೪೬

ಪೊಡೆಯುರಲನಂಗನೆಯ ಮನೆಯ ಸತಿಯೆನಲಾಳ್ವ ।
ನುಡಿದೊಸಱಿಂಗಳ್ಕದಾ ರಮಾಕಾಂತೆಯೊಡ ।
ನೆಡೆವಿಡದೆ ಪಗಲೆ ಪತ್ನಿಯೊಳಿರ್ಪನದು ದೋಷವೆಂದು ಮನದೊಳ್ ನೆನೆಯುವ ।
ಎಡೆವಿಡದೆ ಸೂರ್ಯನಾರಾಯಣನೆನಿಸಿಕೊಂಬ ।
ಕಡೆಗಿವನ ಬರ್ದು*ಕು ನೀರೊಳ್ ನೆರೆಯುದಿರದೆಂದು ।
ಪೊಡವಿಯಾಡುವ ಮಾತಿಗೆಡೆಯಾಗಿ ರವಿ ಪಡುವ ಕಡಲೊಳಾಹಾ! ಬಿಟ್ಟನು ॥ ೪೭

ಲೋಕದ ಜನಂಗಳೆನ್ನುಂ ಮಗನ ಹೆಱೆಯೆಂಬ ।
ರೇಕಿಲ್ಲಿಯಾನಲ್ಲಿಗೆಯ್ದುವುದ್ವರ್ಪಿಯಾ ।
ಲೋಕಿಸುತೆ ನೆರೆದ ಕಂದನನೊಲ್ದು ಮುಂಡಾಡಿ ಬೆಳಗನ್ನಮಿರ್ಪನೆಂದು ॥
ಜೋಕೆಯಿಂ ಪೊಲ್ಗಡಲ್ ನಡೆತಂದು ತಾರಕಾ ।
ನೀಕವೆಂದೆಂಬ ಮುತ್ತಂ ಕೊಟ್ಟುದೋ ಎನಲು ।
ರಾಕೇಂದುವಂ ಬಳಸಿ ನಕ್ಷತ್ರದೇಟ್ಗೆಯಿಂ ಬೆಳ್ದಿಂಗಳೆಸೆದಿರ್ದುದು ॥ ೪೮

ಆರಾತ್ರಿಯಲ್ಲಿ ಪೇರೋಲಗವ ಬೀಳ್ಕೊಟ್ಟು ।
ಭೂರಮಣನೈತಂದು ಲಿಂಗಾರ್ಚನೆಯನೆಸಗಿ ।
ಚಾರುಶಿವಲಿಂಗಪ್ರಸಾದಮಂ ಸವಿಯುಲುಟದುದ ಕೊಂಡು ಭಕ್ತಿಯಿಂದ ॥
ನಾರಿ ಶಯ್ಯಾಗೃಹದ ಹಂಸತೂಳದ ತಲ್ಪ ।
ದೋರಣದ ಚೆಲ್ವಿನಡಕಿಲ್ವಾಸಿನೊಳ್ ಪತಿಯು ।
ಸಾರಿ ಕರ್ಪೂರತಾಂಬೂಲಸೇವೆಯೊಳು ಮನ್ಮಥಯುದ್ಧಕನುವಾದಳು ॥ ೪೯

ಎನಗೆ ಸಾಕೆ! ತಾರಹಾರೆ ನಿನ್ನಧರದೊಳ ।
ಗಿನಿದೆನುತ್ತಡಿಗಡಿಗೆ ಪೀರ್ದ ಕೇಕಾಶಿರೋ ।
ಜನಿತಧಮ್ಮಿಲ್ಲೆ ಕೇಳೌ ನಿನ್ನನಗಲೆ ಪತ್ತಿರ ಕಡೆಯುವಸ್ಥೆಯಲ್ತೆ ॥
ಘನಕುಚಶ್ರೀಪರ್ವತಾಗ್ರಗಳ ಕಂಡೆ*ರ್ದೆಯೊ ।
ಳನುಗೊಳಿಸಿದೆಂ ಧರೆಯೊಳುಳ್ಳ ದಿವ್ಯಕ್ಷೇತ್ರ ।
ವೆನಿತವಱ ಮುಕ್ತಿಗಳ್ ನಿನ್ನೊಳೊಳವೆಂದು ರಮಿಸುತ್ತಿರ್ದನಾಚೋಳನು ॥ ೫೦

ಎಸೆವಂಗಪರಿಮಳಂಗಳ ಸಾಸಿಕದಿನೀಂಟಿ ।
ಮಿಸುಗುವಧರಂಗಳಂ ಪೀರ್ದು ಕಣ್ಗಳೊಳ ನಿ ।
ಟ್ಟಿಸುತಲಮ*ರ್ದಪ್ಪುತನ್ಯೋನ್ಯಕರ್ಣಂಗಳೊಳು ಲಲ್ಲೆನುಡಿಯಿನಿದುಗೇಳಿ ॥
ಬಸೆದು ನೆರೆದುರುಸದಾಚಾರದಿಂ ಗುರುವಿಗ ।
ರ್ಪಿಸುತ ಶಿವಲಿಂಗಜಂಗಮಸುಪ್ರಸಾದಂಗ ।
ಳಸುಗಳೆರಡೊಂದಾಗಲಾಮಹಾಲಿಂಗಭೋಗಿಗಳು ಸುರತವನೆಸಗಲು ॥ ೫೧

ಲೋಕಕ್ಕೆ ನಾಂ ಮಿತ್ರನೈಸಲೇ ಶಿವಗಣಾ |
ನೀಕಕ್ಕೆ ಮಿತ್ರನುದಯಿಪನಿಲ್ಲ ನೋೞ್ಪೆಸಾ |
ನೀಕೆಯು ಪವಿತ್ರಕುಕ್ಷಿಯನೆಂದು ಪೂರ್ವಗೋತ್ರದೊಳುದಯಮಾಗೆ ಮಿತ್ರಂ ||
ಆಕಾಲದೊಳಗಮೃತವತಿ ಶಿವನ ಪೂಜೆಯಂ |
ಭೂಕಾಂತನೊಡನೆ ವಿರಚಿಸಿ ಸುಖದೊಳಿರೆ ಗುರುಕೃ |
ಪಾಕಲ್ಪವೃಕ್ಷದುತ್ಪತ್ತಿಬೀಜದ ಮಾೞ್ಕೆಯಿಂದ ಗರ್ಭಂ ತೋಱಿತು ||

ವಿಳಸದೋಂಕಾರಬೀಜಂ ಕಂದಮಾಗೆ ಪೊಡೆ |
ಯೊಳ ಮೆಲ್ಲನಂಕುರಿಸೆ ನಾಭಿಮಂಡಲದಲ್ಲಿ |
ಸುೞಿದೋಱಲಿ*ರ್ದಯ ಸೆರೆ ಪಸು*ರ್ವಳ್ಳಿಯಾಗೆ ಮತ್ತಧರದೊಳು ತಳಿರುದೋಱೆ ||
ನಳನಳಿಪ ಕುಚಕುಟ್ಮಲಂ ಮೆಱೆಯೆ ನಾಡೆ ಕ |
ಣ್ಗಳುಮಲರೆ ರಾಜಿಸಿದಳಾಕಾಂತೆ ಚೋಳಭೂ |
ವಳಯಾಧಿಪತಿಗಿಷ್ಟಫಲವೀವ ಕಲ್ಪಲತೆಯಂತೆ ಕಣ್ಗೆನದ ಬೇಱೆ || ೫೭

ನಲಿದು ಗುರುಕರುಣದಿಂ ಕೈಲಾಸಪುರದ ಬಾ |
ಗಿಲ ತೋರ್ಪ ಕಂದನಂ ಪಡೆವೆನೆಂಬಾಬಾಸೆ |
ಬಲವೇಱಿತೆಂಬಂತೆ ಬಾಸೆ ನಳನಳಿಸಿತ್ತು ಬಹಳ ಬಡತನದೊಳಿರ್ಪ ||
ಲಲನೆಗೀನಡು ಬಡತನಂಬೋಗಿ ಬಿಣ್ಪಾಯ್ತು |
ನೆಲವೆಣ್ಣು ತದ್ಧೃತಿಯ ಬೇಡಿಯಡಿಗಡಿಗೆ ಪದ |
ಜಲಜಗಳನಮ*ರ್ದಪ್ಪೆ ವಹಿಲಮಂ ಮಾಣ್ದಂತೆ ಚೆಲ್ವ ನಡೆ ಮಂದಮಾಯ್ತು || ೫೮

ಶಿವಲಿಂಗಮಂ ಕರಸ್ಥಲದಲ್ಲಿ ಕಾಣ್ಬುದೀ |
ಯುವತಿಯಕ್ಷಿಗಳಿಗೆಡೆವೊಕ್ಕೆವಂತಲ್ಲದಿವ |
ಳವಯಕೆ ಪೊರೆಯಾದೆವದುಮಲ್ಲದೀಸತಿಯನೆ*ರ್ದಗಿಡಿಸಿ ಕೊಂಡಿರ್ದವು ||
ಭವನ ಕರುಣದ ಪಿಂಡಮೀಗರ್ಭಮಂ ಪೊಕ್ಕು |
ದೆಮಗಾದುದಪರಾಧಮೆಂದಳ್ಕಿ ಕುಚದ ತೊ |
ಟ್ಟಿವು ಮೊಗಂ ಕಂದಿದುವೊ ಪೆಱದಲೆಯನಂ ನೆನೆಯುತಮೃತಮಾರ್ಗಂದಳೆಮುವೋ ||

ಉದಯಿಸುವ ಪುತ್ರನಿನಕುಲಚಕ್ರವರ್ತಿಯೆಂ |
ಬುದನಱಿಪುವಂತರಲ್ದುದು ನಾಭಿಸರಸಿಜಂ |
ಸದಮಲಾಚಾರಿಯುತ್ಪತ್ತಿಯಾದಪನೆಂಬ ಮಾತ್ರದೊಳೆ ಭವಪಾಶದ ||
ಪುದಿದ ಬಲ್ಕಟ್ಟು ಸಡಿಲುವ ತೆಱದಿ ಸಡಿಲಲಂ |
ಗದ ಬಿಗುಪು ಗರ್ಭಿಣಿಗೆ ನವಮಾಸಪೂರ್ಣಮಾ |
ದುದು ತದ್ವಿಲಾಸಿನಿಯ ಸಂತಸದ ಮುಂದೆ ನಸುಬೇನೆಯಂ ಪೇೞಲಹುದೇ || ೫೯

ಮಿಗೆ ಶಾರದಾಭ್ರದಿಂ ಚಂದ್ರಮಂ ರೋಹಣದ |
ನಗದಿಂದ ಚೆಲ್ವ ರನ್ನಂ ಕಾಮಧೇನುವಿಂ |
ಸೊಗಯಿಸುವ ಪಾಲ್ ಮಿಱುಪ ತಾಮ್ರಪರ್ಣಿಯ ಸಿಂಪಿನಿಂ ಮುತ್ತು ಪೂರ್ವಾದ್ರಿಯಿಂ ||
ಝಗಝಗಿಪ ಬಾಲಾರ್ಕನುದಯಿಸದನೆಂದೆಂಬ |
ಬಗೆ ಬೇಡ ಸತ್ಪ್ರಣವದಿಂ ಮೂಲಮಂತ್ರ ತಾ |
ನೊಗೆದಂದದಿಂದುದಯವಾದನಾವನಿತೆಯುದರದಿನಮಳಸುಕುಮಾರನು || ೫೭

ಈಪುತ್ರನಧಿಕಬಲನಿವನಾತ್ಮದೊಳ್ ಪುದಿದ |
ಪಾಪವಂ ಕಳೆವ ದುಷ್ಕೃತ್ಯಭೋಗಂಗಳಂ |
ಕೈಪಿಂದೆ ಕಾಣ್ಬನೆನೆ ಮೆಱೆವ ಹಲಮುಸಲಪಿಟಕುಮಂದಪತ್ರಂಗಳಿಂದ ||
ವ್ಯಾಪಿಸುವ ಪೂಜಮುಡುವ ಸತಿಯರ ವಿಧಾನದಾ |
ಲಾಪದಿಂ ರಂಜಿಸುವ ಸೂತಿಕಾಗೇಹದೊಳು |
ಭೂಪನ ಕುಮಾರನೆಸೆದಂ ರತ್ನಮಯಕನಕಪರಿಯಣದ ಮಧ್ಯದಲ್ಲಿ || ೫೮

ಸಲ್ವ ಸಗ್ಗಂ ನೆಲಕೆ ಕಾಲ್ವಟ್ಟೆಯಾಗಿ ಬಂ |
ಬಲ್ವಿಡಿದು ನಡೆತರ್ಪ ಬಲ್ಪಡೆಗಳಮರಿಯರ |
ನಾಲ್ವಡಿಸಿದಂದದಿಂಗೋಲ್ವಿಲ್ಲ ಸ್ಮರನುರೆ ಪೋಲ್ವ ಪುರ್ಬುಗಳ ರತಿಯ ||
ಗೆಲ್ವ ಸೊಬಗಿಂದುರೆ ಕುಕಿಲ್ವಟ್ಟಱಂದ್ಯೆದೆ |
ಜೋಲ್ವ ಮುಡಿಯಬಲೆಯರೆಲ್ವ ಮನದಮಳಿನ ಮ |
ರಲ್ವ ಕಣ್ಣಿಂ ನೋಡೆ ಚೆಲ್ವ ಕುವರನ ಸೊಬಗು ಸಾಲ್ವುದೇ ಭೂತಳದೊಳು || ೫೯

ಇದು ಸಕಲಭಕ್ತಪದಪಂಕೇಜರೇಣುವು |
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ |
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನಮಮಳಕರ್ಣ ||
ಹೃದಯ ಮಸ್ತಕ ವದನ ಸರ್ವಾಂಗ ಸೌಖ್ಯಕಾ |
ಸ್ಪದಮಖಿಳ ಸಜ್ಜನರ್ಗೆ ಪಂಚಾಕ್ಷರಿಯ ಮಹ |
ತ್ವದ ಬೋಧೆಯಿಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದು || ೬೦

ಮೂಱನೆಯ ಸಂಧಿ ಸಮಾಪ್ತಂ

—:o:—

# ನಾಲ್ಕನೆಯ ಸಂಧಿ

ಪಲ್ಲವಿ ॥ ಒಗೆದುಮಾಧವನ ಕರುಣದ ಮಂತ್ರಲಕ್ಷಕಂ ।
ಸೊಗಸುವಗ್ರಜನೊಡನೆ ಬಾಲಲೀಲೆಯ ಕಳೆಯೆ ।
ಮಿಗೆ ವಸಂತಂ ಬರಲ್ ವನಕೇಳಿಯಲ್ಲಿ ಮೆಱೆದಂ ಚೋಳಚಕ್ರೇಶನು ॥

ಶ್ರೀಗುರುವೆ ತ್ರಿಜಗೈಕಗುರುವೆ ಮದ್ಗುರುವೆ ಸಕ ।
ಲಾಗಮಪುರಾಣಶ್ರುತಿತತಿಯಱಸಿ ಕಾಣದ ಮ ।
ಹಾಗುರುವೆ ನಿತ್ಯನಿರ್ಮಲಗುರುವೆ ಪರಮಸರ್ವಜ್ಞಜ್ಞಾನಭರಿತಗುರುವೆ ॥
ಆಗುಹೋಗೆಂಬುವಿಲ್ಲದ ಗುರುವೆ ನಿಖಿಲಶರ ।
ಣಾಗತರ ಹೊರೆವ ಘನಗುರುವೆ ನೀನೆನ್ನ ಹೃದ ।
ಯಾಗತಿಯೊಳೊಲವಿಂದ ನೆಲಸಿ ಸಲಹುಗೆ ನಮೋ ದಕ್ಷಿಣಾಮೂರ್ತಿಗುರುವೆ ॥ ೧

ಗಿರಿಜೆಯ ಮೊಗಂ ನೀಲಕುಟ್ಮಮದೊಳಂ ಪೊಳೆಯೆ ।
ಸರಸಿಯೊಳ್ ಮೆಱೆವ ತಾವರೆಯೆಂದು ಕೈನೀಡೆ ।
ಶಿರವೆತ್ತಿ ಸಿಂಹಾಸ್ಯಗಣವರನ ಕಂಡೋಡಿವರ್ಪ ತಮ್ಮನ ನವಿಲಿಗೆ ॥
ಉರಗನಳ್ಕುತೆ ಸರಿಯೆ ಕಟ್ಟುಱುಮ ಪೊಡೆಯೊಡೆದು ।
ಸುರಿಪುಲುಂಡಲಿಗೆ ಬಂದಪ್ಪಿ ಹೊಟ್ಟೆಯು ಕಟ್ಟ ।
ಕರಿಮುಖನ ಮುದ್ದು ಬೇಡಲ್ಕೆ ಸುಂಡಲ ನೀಡೆ ನಗುವ ಶಿವ ರಕ್ಷಿಸೆಮ್ಮ ॥ ೨

ಆವೇಳೆಯಲ್ಲಿ ಕೆಳದಿಯರೈದಿ ಪೇರೊಸಗೆ ।
ದೇವ ಬಿನ್ನಪಮಯ್ಯ ಕುವರನುದಯಿಸಿದನೆನೆ ।
ಭೂವರನ ಚಿತ್ತಭೂಮಿಯೊಳ್ ಹರ್ಷದ ಬೀಜಮಂ ಬಿತ್ತಿ ಸರ್ವಾಂಗವ ॥
ತೀವಿದಗೆಯನೆ ರೋಮರಾಜಿಯುವರೆಡೆಗೆಱೆದ ।
ಪಾವನೋದಕಮೆಂಬ ಸುಸ್ವೇದಮುಣ್ಮೆ ಭ ।
ಕ್ತಾವಳಿಗಳಾಯೆಂದು ನಲಿಯೆ ಪರಿಕಲಿಸಿ ಪರ್ಬಿತ್ತು ಶುಭವಾರ್ತೆ ಧರೆಗೆ ॥ ೩

ಪೌರಜನಮೈದೆ ಹರ್ಷಾಮೃತಂದಳೆಯುತಿರೆ ।
ಘೋರೆಂದು ಬಹುವಾದ್ಯಸಂತತಿಗಳುಲಿಯುತಿರೆ ।
ಚಾರುಪುಷ್ಪಾಂಜಲಿಗಳುಂ ನಿವಾಳಿಯು ರತ್ನವುಂ ಬೀದಿಬೀದಿಯಲ್ಲಿ ॥
ಆರಯ್ಯೆ ಪರಿಕಲಿಸೆ ಮಕರತೋರಣಮುಖ್ಯ ।
ಚಾರುಪ್ರಕಾಶವಾವರಿಪ ಕಾಲದೊಳ್ ಮುಂ ।
ಗಾಱಂತೆ ಚಿದ್ಘನಶಿವಾಚಾರ್ಯರೆಯ್ದುರುಕೃಪಾವರ್ಷಮಂ ಕರೆಯಲು ॥ ೪

ಭೂತಳಾಧಿಪನೆಱ್ಪ ಸಾಷ್ಟಾಂಗವೆಱಗೆ ಸಂ |
ಪ್ರೀತಿಯಿಂ ಪರಸಿ ಕುವರಂಗೆ ಗುರು ತನ್ನ ಕರ |
ಜಾತಕರ್ಮಂಮಾಡಿ ಲಿಂಗೋಪದೇಶಪ್ರಭಾಪುಂಜಮಂ ಕರುಣಿಸಿ ||
ಆತಂಗೆ ಮಂತ್ರಲಕ್ಷಕನಾಮಮಿಟ್ಟು ತ |
ನ್ಮಾತೆಯುಂ ಸತ್ಕರಿಸಿ ಪೊಡೆಮಡಿಸಿಕೊಂಡು ವಿ |
ಖ್ಯಾತನೆಯ್ದಿದನು ನಿಜವಾಸಕ್ಕೆ ಪರಮಗುರುರಾಜ ನತಕಲ್ಪಭೂಜಂ || ೫

ಅಣಿಯರದೆ ದಾನಧರ್ಮಂಗಳಿಂ ಸಕಲಜನ |
ದಣಿವಂತೆ ಮಾಡಿಯಾರಾಧನೆಯ ಭಕ್ತ ತಿಂ |
ತಿಣಿಗಿತ್ತು ಭೂತಿವೀಟಿಕೆವೆರಸು ಶಿವಪುರಂಗಳ ಸಮರ್ಪಣೆಯಮಾಡಿ ||
ಗಣಪರ್ವಮಂ ತನಯನೊಗೆದ ಪನ್ನೆರಡು ದಿನ |
ಮಣಿದೊಟ್ಟಿಲುಚ್ಛವದೊಳಸಗಿ ಸುಖದಿಂದೆ ಧಾ |
ರಿಣಿಯ ಪಾಲಿಸುತೊಪ್ಪಿದನು ಸತ್ಯಚೋಳೇಂದ್ರ ವೃಡಸಮಯಶರಧಿಚಂದ್ರ || ೬

ವೈರಿಭೂಮಿಪರ ವಕ್ಷಮನೊದೆವ ತೇಜದೆ ಚರ |
ಣಾರವಿಂದಮನಾಡಿಪಂ ತನಗೆ ಮುಂದೆ ಮಾ |
ರಾರಿಪ್ರಸನ್ನಕಾಲದೊಳಾಗಸದೆ ಬರ್ಪ ಮಣಿಖಚಿತಪುಷ್ಪಕವನು ||
ಆರಯ್ವ ತೇಜದೆ ಲಂಬಣರತ್ನಕಂತುಕವ |
ಹಾರಾಮಮಂ ನೋಳ್ಪನಂಗಮೋಹಿಗಳಂ ಕು |
ಮಾರನಪಹಾಸ್ಯಮಂ ಮಾಳ್ಪಂತೆ ನಸುನಗುವನೈ ಬಾಲಲೀಲೆಯಲ್ಲಿ || ೭

ದೇಹಮೋಹದ ವಿರಾಗದ ಪಣ್ಣನೊಳಿದು ಮು |
ನ್ನಾಹ ಸಿರಿಯಾಳನಣುಗಂ ಸವಿದನದು ತನಗೆ |
ಬೇಹುದೆಂದಕ್ಕೆಗೆಯ್ವುತ್ತಬುತ್ತಂ ವೀರಸೋಮಮ್ಮೆಯುಂ ನುಂಗಿದ ||
ಸಾಹಸವ ಬಿಡು ನಿನ್ನನೊಳಕೊಂಡೆನೆನ್ನ ಚಿ |
ದ್ಗೇಹದೊಳಗೆಂದು ಸೊಡರಂ ನೋಡಿ ನಗುವನು |
ತ್ಸಾಹದಿಂ ಪಂಚಶಕ್ತಿಯರ ಸೆಱ್ವಿಡಿವೊಲಬಲೆಯರ ಮುಂದಲೆವಿಡಿವನು || ೮

ಪಸುತನಂ ಪೋರ್ದದಂತಾವ್ಯಾಘ್ರಪಾದಪದ |
ಬಿಸಜಮಂ ತಾಳ್ದಂತಿರೆಳಲಿಟ್ಟ ಪುಲಿಯುಗುರಿ |
ನೆಸಕದಿಂ ಭ್ರೂಮಧ್ಯದರಳಲೆ ಪರೀಕ್ಷಿಸೆಂಬಂದದರಳಲೆಯ ಚೆಲ್ವ ||
ನೊಸಲಿಂದ ಫಲವಾಸನೆಯನಾಪ್ರಸಾದಮುಖ |
ರಸವ ಮಾಡುವೆನೆಂಬಿನಿಂ ಮೆಱೆದು ಕಿವಿಗೆ ರಂ |
ಜಿಸುವ ಮಾಗಾಯ್ಗಳಿಂದೆಸೆದನಾಮಂತ್ರಲಕ್ಷಂ ಕ್ರಿಯಾಜ್ಞಾನಪಕ್ಷಂ || ೯

ನಗಿಸಿ ಕೈವೆರಲ್*ಗಳಿಂದಳ್ಳೆಯುಂ ಚಕ್ಕುಲಿಸಿ ।
ಮಗನೆ ಬಾಯೆಂದು ಬರೆ ಸೆಳೆದಪ್ಪಿ ಶಿರಕೆ ಕರ ।
ಯುಗವಿಹುತ್ತಾನಂದದಿಂದ್ಯಜೋಗುಳವಾಡಿ ವಾಸನೆಯ ಕರ್ಮ್ಮಲರ್*ಗಳ ॥
ಅಗಜಾಧಿಪತಿಗರ್ಪಿಸುತ್ತಿತ್ತು ಯತ್ನದಿಂ ।
ಸೊಗಸುವಡೆಯಿಸಿ ಪುತ್ರನಂ ತಂದೆ ಮುದ್ದಿಸುವ ।
ಬಗೆ ಮೊದಲ್ ಪಂಚಾಕ್ಷರಿಯ ಮೋಹವಲ್ಲದೇಂ ಲೋಕವರ್ತನೆಯುಪ್ಪುದೇ ॥ ೧೦

ದೋಸಮಂ ಕಂಡೊಡಾಂ ಬಳುಕುವೆಂ ಶರಣರನ ।
ಗಾಸೆ ಪಿಂಗೋಡೆ ಪಿಡಿವೆಂ ತತ್ಪದಾಬ್ಜಮಂ ।
ಭಾಸುರಾಚಾರದಿಂ ದಟ್ಟಡಿಯನಿಡುವೆನಾಂ ಮಿತ್ತುವಿನ ನಡುದಲೆಯೊಳು ॥
ಮೋಸವಿನ್ನಿಲ್ಲಪ್ರೌಢ್ಯಾಟಮೆನಗನ್ಯಥನ ।
ವಾಸೆಯೆಂಬಂತೆ ಕೈಕಾಲ್ಗಳಿಂದಂ ನಡೆದು ।
ಲೇಸೆನಿಪ ಭಿತ್ತಿಯಂ ಪಿಡಿದು ಮೆಲ್ಲಡಿಯಿಟ್ಟು ಪರಿದಾಡಿದಂ ಕುಮಾರಂ ॥ ೧೧

ಆರಮಾಕರೆ ಮುನ್ನ ಮಂತ್ರಿ ತನಗಿತ್ತ ಸುಕು ।
ಮಾರಮಿತವಚನನಂ ಮಂತ್ರಲಕ್ಷಕನನೊ ।
ಯ್ಯಾರದಿಂ ಸರಿಯುಬ್ಬಿಯಿಂ ಸಲಹೆ ರಾಮಲಕ್ಷ್ಮಣನಕುಲಸಹದೇವರ ॥
ಓರಗೆಯೊಳುರೆ ಬಳೆದರೆಂಬುದನುಚಿತ ಕಾಮ ।
ವೈರಿಯಾಲಯದ ಕಂಬವನೊಡೆದ ಬೌದ್ಧನ ವಿ ।
ದಾರಿಸಿದ ರೇಮಯ್ಯ ರೇಚಯ್ಯಗಳ ಮಾಳ್ಕೆಯಿಂದೆ ಬಳೆದರು ಬಾಲರು ॥ ೧೨

ಹಿರಿಯ ಮಗನಾಡುತಿರೆ ಲಿಂಗಂ ಸಡಿಲ್ದು ಬಿ ।
ಚ್ಚಿರಲಱಿಪಲವನಸುವ ಬಿಡೆ ಲಿಂಗಮಂ ತಂದು ।
ಧರಿಸಲೊಡನೆಚ್ಚನವನಂ ತಂದೆ ಪೊಗೞೆ ಚಱೆದಾಕಿಱಿಯನಂ ಪಂಕಿಸಿ ॥
ಇರುಳಯ್ಯನಭವನಂ ಕೊಂಡುಯ್ಯಲಱಿಯಲವ ।
ನರುಹೋದಯದೊಳೀಯೆ ಜೀವಿಸಿದ ಸತ್ಯೇಶ ।
ಶರಣ ಜಾಮಯ್ಯನಣುಗರ ಪೋಲ್ವ ನೃಪಕುಮಾರಕರು ಒರ್ದಿಂ ಒಳದರು ॥ ೧೩

ಅಮೆಮಾಮೆ ಸಂಪೂರಣಾಚ್ಛಾಯೆ ಹೈಮವತಿ ।
ಸುಮನತಾ ಜ್ಯೋತ್ಸ್ನ ಸ್ವಧಾಕಾಂತಿ ಸುಶ್ರೀಗ ।
ಳಮರ್*ದಿದ ಹ್ರೀರೇವತಿಪ್ರೀತಿತುಷ್ಟಿಪುಷ್ಟಿಗಳೊಡನೆ ತನ್ಮಾನಸಿ ॥
ಅಮೃತಾಖ್ಯಷೋಡಶಕಲಾಭರಿತಪೂರ್ಣಾಚಂ ।
ದ್ರಮನಂತೆ ರಾಜಿಸುವ ಹದಿನಾಜು ವರ್ಷದೊಳ್ ।
ರಮಣೀಯಮಾವನಗ್ರಜನೊಳ್ ಕುಮಾರ ಲಕ್ಷಣಮಾಕ್ಸ್ವಧಾಳಿಸೂರ ॥ ೧೪

ಸ್ಮರ ವಿಕ್ರಮಾಂಕ ದೇವೇಂದ್ರ ಯಕ್ಷೇಶ್ವರರು ।
ಶರಶಸ್ತ್ರಕರಿತುರಂಗಾಭ್ಯಾಸದಲ್ಲಿ ಸರಿ ।
ದೊರೆ ಕುಮಾರರ್ಗೆಂಬುದನುಚಿತಂ ತ್ರಿಪುರಸಂಹಾರನೇಣಾಧಿನಾಥ ॥
ವರನನಿರಿವತ್ತಾಂಡಿಯರ ಚೊಕ್ಕನೈನಾರ ।
ಕರುಣದೆ ವಿರಾಜಿಸುವರೆನಲುಚಿತಮಾಲಸ ।
ದ್ವರಗುಣಿಯು ಶಿವಭಕ್ತಕುಲಶಿರೋಮಣಿಯು ದಿವ್ಯಜ್ಞಾನಗಗನಮಣಿಯು ॥ ೧೫

ಇಂತು ಕುವರರು ನಾಡೆ ಮೆಱೆಯೆ ಧರೆ ಕೊಂಡಾಡೆ ।
ಸಂತಸದ ಚೈತ್ರಕಾಲಂ ಮೂಡೆ ದಕ್ಷಿಣದಿ ।
ಶಾಂತದೊಳಗೆಲರು ತಣ್ಣನ ತೀಡೆ ಕೋಕಿಲಂಗಳ್ ಕೊರಲ್ತೆರಪುವಾಡೆ ॥
ಕಂತು ನಲಿದಾಡೆ ವನಿತೆಯರಳುಪಿನಿಂ ನೋಡೆ ।
ಮುಂತೆ ಪಾರ್ವಲರ್ವಕ್ಕಿ ಝುಂಕಾರದಿಂ ಪಾಡೆ ।
ಕಾಂತಸಹಕಾರಮಾಕೆಂದಳಿರ್ಗಳೊಳ್ ಕೂಡೆ ರಾಜಿಸಿದುದಾವಸಂತಂ ॥ ೧೬

ಕಂಡು ವನಪಾಲನಾಸುರಗಿಪ್ರಸೂನಮಂ ।
ಕೊಂಡು ಧ ತರಸ್ತಕರವೀರನೇಱ್ದಂದು ಬೂ ।
ಮಂಡಲಾಧಿಪ ಕೇಳು ಕಾಮಚಕ್ರೇಶ್ವರನ ದಂಡು ವನದೊಳಗೆ ಬಿಟ್ಟು ॥
ಪುಂಡರೀಕಾಕರಂ ಬಂಡಾಯ್ತು ಶುಕಪಿಕಂ ।
ತೊಂಡುಗೆಡೆದುಱೆ ಕೂಗಲಷ್ಟ ನವಿಲುಸುತೆ ಘುಮಂ ।
ಗೊಂಡು ಪಲ್ಲಿಱಿಯುತವೆ ದಾಳಿಂಬವಿನ್ನಾವಸಂತವೇಲಬೇಱೆಂದವನು ॥ ೧೭

ಎಂದ ಮಾತಂ ಕೇಳ್ದು ನೂತನಾನಂಗನಾ ।
ನಂದರತಿಸಹಿತ ವೈಭವದಿಂದ ಪೊಱಮಟ್ಟು ।
ಪಿಂದೆ ಕೋಟ್ಯನುಕೋಟಿವನಿತೆಯರ ಸಾರಂಭದಿಂದಮಮೃತವತಿ ನಡೆಯಲು ॥
ಬಂದು ಬನಮಂ ಪುಗುತ್ತಂದಾವಸಂತನೊಲ ।
ವಿಂದ ಸುಖದೊದವಿಯಲಿಂದಾನು ಸರ್ವೇಶ ।
ನಂ ದಯಾನಿಧಿಯನಾಸ್ಕಂದಪಿತನಂ ಪೂಜಿಪಂದಮಂ ಮಾಳ್ಪೆನೆಂದು ॥ ೧೮

ಕುಸುಮರಜದಿಂದ ಫಲರಸದಿಂದ ನಾಡೆ ನ ।
ರ್ತಿಸುವ ಶಿಖಿಯಿಂದ ತೇಂಬೆಲರಿಂದನಂತ ರಂ ।
ಜಿಸುವ ಕನಕಾಬ ಪಙ್ಕ್ತಿಗಳ ನಿರ್ಮಳಜೀವನಂಗಳ ಸರೋವರಗಳ ॥
ಬಸೆದು ಸಾದೊರ್ಪ್ಪುತಿಹ ಹಂಸಮಿಥುನಂಗಳಿಂ ।
ದೆಸೆವಷ್ಟಮೂರ್ತಿವತ್ತಾದ ತದ್ವನದೇವಿ ।
ವಸುಧಾಧಿಪತಿಯನುಪಚರಿಸುವಂತೆ ಮೆಱೆದುದಂತಾವನಂ ಮಿಗೆ ಪಾವನಂ ॥ ೧೯

ಕಲಮಾಗ್ರಚಿಂತಾಮಣಿಕ್ಷೇತ್ರಮಧ್ಯದೊಳ್ ।
ತೊಳಪ ವನದೊಳಗಮೃತದಿಂದನಿಮಿಷಾಳಿಯಿಂ ।
ನಳನಳಿಪ ಪಾರಿಜಾತದಿ ಮಾರುತಸ್ಪರ್ಶದಿಂ ಸೋಗೆಗಳ ಕೇಣ್ಮಳ ॥
ಕಳೆಗೆದಱುತಿಹ ಶಿಖಿಗಳಿಂ ಧರ್ಮರಕ್ಷಕಂ ।
ಜಲಧಿಮುದ್ರಿತಧರಾಧೀಶ ಪಾವನ ಶಿವನ ।
ಕಳೆಯುಂಶ ಚಿನ್ಮಾನಿನೀಶ ಸೌರಂಭಾಳಿಯಿಂದ ಸತ್ಯೇಂದ್ರನೆಸೆದಂ ॥ ೨೦

ಪೂರ್ಣಚಂದ್ರಾನನಾಕರ್ಣನಯನದ ಸಮಾ ।
ಕೀರ್ಣವಹ ಮಲ್ಲಿಗೆಯಲರ್ ನುಡಿ ರಾಜಿಪ ನ ।
ವಿರ್ಣವಕದೊಳ್ಮುಡಿಯ ಕನ್ಯೆಯರಿಲಮ*ಳ್ಗೆನಿಯಮದೀರ್ಘತಾಪಸಧೈರ್ಯದ ॥
ಸ್ವರ್ಣಘಟಿಕುಚಯುಗದ ಚೂರ್ಣಹಿಮತಾಂಬೂಲ ।
ಪರ್ಣಪೂಗಂಗುಡುವೆಲ್ ನಯದ ಬಿಜ್ಜಲದ ।
ವರ್ಣನೆಯ ಸತಿಯರೊಳು ಮಾರ್ನುಡಿದಳರಸಿ ಸೌಖ್ಯಾರ್ಣವದ ತೆರೆಗಳಂತೆ ॥ ೨೧

ಇಂದೀವರಾಕ್ಷಿಗಳಿಗಾಕಮಲಮುಖಿಕೆ ಸುಖ ।
ವೆಂದೆನಿಸಿತರಾಜಹಂಸಗಮನಂ ಬಳಿಕ ।
ಮಂದಗಜಯಾನದಿಂದೂರಿಂಗೆ ಹೊಱಗಾಗಿ ಚೆಲ್ವಿನೊಪ್ಪುವ ಬಾಸೆಗ ॥
ಹಿಂದಾದವೆಂದದಿರುವಂತೆಸೆವ ಪೊಱಮಾರ್ಗ ।
ಳಿಂದೊಪ್ಪವಾಸತಿಯರಾನಂದದಿಂದಲೆ ।
ಯ್ದುಂದರಾಕೆಯ ಕೂಡೆ ತಾಪಸರು ಕೆಟ್ಟೋಡೆ ಕಾವನರಲಂಬ ಪೂಡೆ ॥ ೨೨

ಎಸಗಲ್ಕೆರಾವಣಾಧಿಕರಾವವೆಂದು ನಿರ ।
ವಿಸುತಲಾಪುಂಡರೀಕಾಕರಂಬುಗಲು ರಂ ।
ಜಿಸುವಾಮನಃಪ್ರೀತಿಯಿಂದ ಕುಮುದಾಂಜನಾಲಂಕೃತಾಕ್ಷಿಯರಬ್ಜದ ॥
ಪೊಸ ಪುಷ್ಪದಂತರಂಗದ ಸರಾಗದೊಳ್ ಸವಿ ।
ರಸವಾದ ನೀರ್ದುಂಬಿಂಕಿದರು ಟೋಯೆಂದು ಗ ।
ರ್ಜಿಸುತಲಂತಾಸಾರ್ವಭೌಮನ ಮಹಾಸುಪ್ರತೀಕವಂ ನೆಱೆ ಮುಸುಕಲು ॥ ೨೩

ಕಂಬುಕಂಧರೆಯರಾಡಂಬರದ ರತ್ನದಾ ।
ಚೆಂಬೊನ್ನಿನಂಡೆಗಳ ತುಂಬಿ ಪರಿಮಳಮಿಶ್ರ ।
ದಂಬುಗಳ ಕಟಕಝಣರೆಂಬ ರವದಬಲೆಯರು ಮುಂಬರಿದು ಚೆಲ್ಲುವಲ್ಲಿ ॥
ಅಂಬರದೊಳೆಯ್ದೆ ನೆಱೆ ಬಿಂಬಿಸುವ ಸುರಚಾಪ ।
ವೆಂಬೊಲ್ ಪಯೋಧರವ ಚುಂಬಿಸುವ ಧಾರೆ ಮಿಗೆ ।
ಶಂಬರಾಹಿತನ ಕೂರಂಬನಿಟ್ಟಿಕೆಪ್ಪುವೇನೆಂಬೆನಾಜಲಕೇಳಿಯ ॥ ೨೪

ಕಡೆಗಣ್ಣ ಕಾಂತಿ ಸುಲಿಪಲ್ಗಳಗು ನಖದ ಬೆ |
ಳ್ಪಡಸಿ ಪಸರಿಸೆ ಕೊಳನ ಜಳವೈದೆ ಚೆಲ್ವ ಪಾ |
ಲ್ಗಡಲಂತೆ ಮೆಱೆಯುಲು ಮುಳುಂಕಿ ನಿಂದಮೃತವತಿ ಸಾಕ್ಷಾತು ಕಮಲೆಯಿವಳ ||
ಎಡೆಯೊಳಾಂ ಸತ್ಯೇಂದ್ರಚೋಳನಿರೆಯೆಂದು ಪೊಱ |
ಮಡೆ ನೀನು ಪುರುಷೋತ್ತಮಂ ಪೋಗಬೇಡ ನಾಂ |
ಬಿಡೆನೆಂದು ಮೌಕ್ತಿಕದ ಸೇಸೆದಳಿವಂತೆ ಚೆಲ್ಲಿದಳು ನೀರ್ವನಿಗೆದಱುಲು || ೨೫

ಇಂತು ಜಳಕೇಳಿಯುಂ ರಚಿಸಿ ಪೊಱಮಟ್ಟು ಮಿಗೆ |
ಸಂತಸದೊಳೈದೆ ದಣಿಬವನುಟ್ಟು ಹಣೆಯೊಳ್ ಸ |
ಮಂತು ಭಸಿತವನಿಟ್ಟು ವನಿತಾಜನಕ್ಕೆ ವಸ್ತ್ರಾಭರಣತತಿಯು ಕೊಟ್ಟು ||
ಕಾಂತೆಯರ ಕೆಲಬರಂ ಕುಸುಮಕ್ಕೆ ಬೀೞ್ಕೊಟ್ಟು |
ಮುಂತೆ ರಚಿಸಿರ್ದ ಗದ್ದುಗೆಗೆ ಬಂದಳವಟ್ಟು |
ತಿಂತಿಣಿಸಿದುಪಕರಣಮಂ ಶಿವಕುಮಾರನೃಪನೀಕ್ಷಿಸಿದನೞ್ತಿವಟ್ಟು || ೨೬

ಅನಿತಱೊಳ್ ವಲ್ಲಿತರುಗುಲ್ಮಕಾಸಾರದೊಳ್ |
ಘನಮಾಗರಲ್ದುತೊಡಂಬೆಯು ಸಡಿಲ್ವ ಕೀ |
ಟನಿಕಾಯಮುಱೆ ಸಾರ್ದ ಪಱಮೆಗಳು ಮುಸುಡಿಟ್ಟು ಪೀರ್ದ ಪುಷ್ಪಗಳನುೞಿದು ||
ತನಿಗಂಪನೀವ ಸೊಂಪಿಂದಲರೆ ಬಿರಿದ ಚೆ |
ಲ್ವಿನ ಸೊಬಗಿನುಳ್ಳಲರ ತಿಱಿದರಬಲೆಯರು ಪಾ |
ವನಮಲ್ಲಿಕಾಸ್ಮೇರಕನಕಪ್ರಭಾಂಗಸೌಂದರಜಾತಿ ಪದ್ಮಿನಿಯರು || ೨೭

ಅತ್ತೆಸೆವ ಮಾವನಳಿಯುಂ ಮುಗಮುಗಿಪ ಕಂಪು |
ವೆತ್ತ ಕುಸುಮವನೀಕ್ಷಿಸೊಸೆಯುತ್ತುಂ ಮನದೊಳಂ |
ದತ್ತಿಗೇಕೀಹುೞುಕುತನವೆಂದು ಭಾವಜಂ ತಮ್ಮಯ್ದನೆಯ ಜಾಣದ ||
ಉತ್ತಮದ ಕರ್ನೆಯ್ದಿಲೆಂಬ ಕಣ್ಮುಚ್ಚಿದುವೆ |
ನುತ್ತ ನಾದಿನಿದುಗಂಪಿಂ ನಗುವ ತಾವರೆಯು |
ಮೊತ್ತಮಂ ನೋಡೆಂಬ ನೆವದೆ ಬಂಧುಗಳ ನೆನೆಪಾಡುತಿರಲಾಸತಿಯರು || ೨೮

ಭಾವಕಿಯರೈದೆ ಪೂಜಾಸ್ಥಲಕೆ ನಡೆತಂದು |
ದೇವ ಚೈತ್ಯಸಯ್ಯು ಸಿರಿವೆತ್ತು ರಾಜಿಸುವ |
ತಾವರೆಯು ಕುಸುಮಗಳಶೋಕೆಗಳ ಚೂತದೊಳ್ಪಳಿರ್*ಗಳಂ ಮಲ್ಲಿಗೆಗಳ ||
ಪೂವ ಕರ್ನೆಯ್ದಿಲ್ಗಳಟ್ಟದಂ ಮನ್ಮಥನು |
ಹಾವೀರನೀಶಂಗೆ ಸೋಲ್ತಸ್ತ್ರಸಂಕುಳವ |
ನೇವೇೞ್ವೆನುೞಿದ ಪುಷ್ಪಗಳನೆಂದೀಯುತಿರ್ದರು ರಾಯನಾನಂದಿಸೆ || ೨೯

ಚಾರು ಸದ್ಯೋಜಾತ ವಾಮದೇವಂ ಮಹಾ ।
ಘೋರ ತತ್ಪುರುಷೇಶಾನದಿಂ ಧರೆಜಲವನಲವನಿಲ ।
ತಾರಾಧ್ವಮವಜಂ ನಿವೃತ್ತಿ ಪ್ರತಿಷ್ಠೆ ವಿದ್ಯಾತಿಶಾಂತ್ಯಾತಿಕೆ ? ॥
ಕಾರಣದಿ ಕಪಿಲಾಸಿತಾರುಣಾಮಲ ಚಿತ್ರ ।
ನಾರನಂದಾಭದ್ರೆ ಸುಮನೆ ಸುಸಿಲೆಯು ಸುರಭಿ ।
ಯೀರವ್ಯಪಶುವಿಂ ವಿಭೂತಿಭಸಿತಂ ಭಸ್ಮವಾಕ್ಷಾತಿರಕ್ಷೆಯೆಂದು ॥ ೩೦

ಭೂಪನಾನಂದದಿಂದಂ ಭಸಿತಸರ್ವಾಂಗ ।
ಲೇಪನಾಗುತ್ತಂ ತ್ರಿಪುಂಡ್ರಭಾಳಾದಿಯಿಂ ।
ತ್ರೈಪುರಾರಿಯು ನೆನೆದು ರುದ್ರಾಕ್ಷೆಗಳನಾಗಮಕ್ರಮದೆ ಧರಿಸಿ ಬಳಿಕ ॥
ಶ್ರೀಪಂಚವರ್ಣವಂ ಜಿಹ್ವೆಯೊಳ್ ಜಪಿಸುತ್ತ ।
ಲಾಪಾವನದ ವೇದಸಾರುವ್ರ ಯೆಂಬರ್ಥ ।
ದಾಪರಬ್ರಹ್ಮ ತಾನಾಗಿ ಪದ್ಮಾಸನದೊಳಿರ್ದ ಮತ್ತಾ ಚೋಳನು ॥ ೩೧

ಶಿರದೊಳೇಕೋರುವ್ರ ನೆತ್ತಿಯೊಳ್ ತ್ರಿಣಯನಂ ।
ಪರಿವೃತಂ ತತ್ವಷಟ್ತ್ರಿಂಶಾಧಿಪಂ ಜ್ಞಾನ ।
ವರಸತ್ಕ್ರಿಯಾಕರ್ಣಯುಗದೊಳಾ ಚಂದ್ರಕಳೆ ತೋಳ್ಗಳೊಳು ತರಣಿಯಂಶ ॥
ಎರಡು ಮುಂಗೈಯೊಳಾಗ್ನೇಯತತಿಯೆ ೖವಡಿಸಿ ।
ಯುರದಲ್ಲಿಯುಪನಿಷದ್ಗಳದಲ್ಲಿ ಷಟ್ಸ್ಥಲವ ।
ದಿರದೆ ಪದಿನೆಂಟುಮಡಿ ರುದ್ರಾಕ್ಷಯುಪವೀತ ಜಪಮಾಲೆಯುಗಮವಂಗೆ ॥ ೩೨

ಚತುರಷಡ್ದಶರವಿಕಳಾದ್ವಿಗುಣನಾಂಬುಜಾ ।
ಶ್ರಿತದಳಾಧಾರಮಾಸ್ವಾದಿಷ್ಟಮಣಿಪೂರ ।
ಯುತದನಾಹತ ವಿಶುದ್ಧಾಗ್ನೇಯತಟದಿನಾಗ್ನಿಸ್ಫಟಿಕಸುರಧನುವಿನ ॥
ವಿತತರಕ್ತಾಭ್ರದಾಚಾರಗುರುಶಿವಚರಾ ।
ನ್ವಿತಸುಪ್ರಸಾದ ಮಹದಾಖ್ಯನೆ ಶಿವಾಸ್ಥಲಾ ।
ಶ್ರಿತಸುಪ್ರಕಾಶಗುರುದತ್ತಲಿಂಗವ ಕರದೊಳಳವಡಿಸಿದಂ ಚೋಳನು ॥ ೩೩

ವ್ಯೋಮಕೇಶನನಾದಿಮೂರ್ತಿಯಂ ನಾಡೆ ವಾ ।
ಚಾಮತಿಗಭೇದ್ಯನಂ ಶ್ರುತಿತತಿಗಗಮ್ಯನಂ ।
ಶ್ರೀಮನೋಂತಃಕರಣದುರ್ಲಭನನುರುಗುಣಾಶಕ್ಯಕಾಲಾಂತಭವನ ॥
ಸ್ವಾಮಿ ವರಶುದ್ಧವಿದ್ಯಾರೂಪನಂ ನತ ।
ಪ್ರೇಮಿ ಷಟ್ತ್ರಿಂಶತತ್ವಾತೀತಶಂಭುವಂ ।
**ಭೂಮಿಪಾಲಂ ನೋಡಿದಂ ಕೊಂಡೆಪಾಡಿದಂ ಶಿವಭಕ್ತಿಯಿಂ ಬೇಡಿದಂ ॥ ೩೪**

ಹೊನ್ನಿತಂದೆಗಳನಣುಮೂರ್ತಿಯಾದ್ವುಕ್ಕಿಯು |
ತ್ಯುನ್ನತದ ಮಾರಿದೇವಗಳ ಹರದತ್ತಾರ್ಯ |
ರನ್ನಾಡೆ ಗೊಗ್ಗವ್ವೆಯುಂ ಕಲಿಯುನಾರುಪಂ ಕರಿಕಾಲಚೋಳನೃಪನಂ ||
ಚೆನ್ನಿದಾನದ ರೇಚಿ ತಂದೆಗಳ ಪಾದವುಂ |
ತಾಂ ನೆನೆದು ಲಸದಷ್ಟವಿಧಪೂಜೆಯುಂ ರಚಿಸಿ |
ದಂ ನವ್ಯಸುಗುಣಿ ಭೂಪಾಲನುತಶೀಲ ಸುವಿಶಾಲ ಸದ್ಭಕ್ತಿಲೋಲ || ೩೫

ಮುಂಡಿಗೆಯು ಗೂಡರಸರಿಷ್ಟದ ವೃಷಾಂಕಂಗೆ |
ಖಂಡಿತಾಮೃತಕಿರಣಜೂಟಂಗೆ ಕಮಲಗ |
ಭಾರ್ಂಡಭಾಂಡಸುಪೂರ್ಣಸಿತಕೀರ್ತಿಮಯಗೆ ಖರ್ಜೂರಪರ್ವತವಾಸಿಗೆ ||
ಕಂಡು ನುತಿಸಿದರ ಮನದನ್ನನೊಡನಾಶರಣ |
ರುಂಡುಮಿಕ್ಕಾಕ್ಷೇಪವುಂ ಶಿವಂಗಿತ್ತು ಕೈ |
ಕೊಂಡು ಭೂಪಂ ನಿಯೋಗಂಬೆರಸಿ ಸುಖದಿಂ ವಸಂತಮಾಸವ ಕಳೆದನು || ೩೬

ಪರತರಬ್ರಹ್ಮಾನವರತಸಂತೃಪ್ತಾಹಿ |
ಧರ ತರಣಿರೇಂದುದೃಕ್ಸ್ಮರತತಿಸ್ತುತ್ಯ ಭಾ |
ಸ್ಕರತನು ಭವದ್ವಿಷಾವಿರತ ನತಸಜ್ಜನಾಮರತರು ಕ್ಷಪಗವರದ ||
ಕರತಳ ಶ್ರೀನಾಥ ಪರತತ್ವಚಿದ್ರೂಪ ಮುರ |
ಹರತನುಜಪತ್ರ ನಿರ್ಜರತಟನಿಧೃನ್ಮಹೇ |
ಶ್ವರವಪರ ಸಲಹೆಂದು ನಿರತವೆಱಗಿದ ಭಯಾತುರನತನೃಹರಿಶರಭಗೆ || ೩೭

ಇದು ಸಕಲಭಕ್ತಗಣಪಂಕೇಜರೇಣುವು |
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ |
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಳಕರ್ಣ ||
ಹೃದಯ ಮಸ್ತಕ ವದನ ಸರ್ವಾಂಗ ಸೌಖ್ಯಕಾ |
ಸ್ಪದಮಖಿಳಸಜ್ಜನರ್ಗೆ ಪಂಚಾಕ್ಷರಿಯ ಮಹ |
ತ್ವದ ಬೋಧೆಯೊಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದು || ೩೮

ನಾಲ್ಕನೆಯ ಸಂಧಿ ಸಮಾಪ್ತಂ

—:o.—

# ಐದನೆಯ ಸಂಧಿ

ಪಲ್ಲವಿ ॥ ಗೆಲುತೆ ಸಿಂಹಳನೃಪನ ತತ್ಪುತ್ರಿಯರ ಮಂತ್ರಿ ।
ಸುಲಭ ಸುಕುಮಾರರ್ಗೆ ಮದುವೆಯಂ ಮಾಡಿ ಭೂ ।
ಲಲನಾಧಿಪಂ ಚೋಳನಾರಾಧಿಸುತ್ತಿರ್ದನಂದುಮಾವಲ್ಲಭನನು ॥

ಬೇಡವೆಲೆ ದೇವಯೆನ್ನೊಳು ಗರ್ವ ನಿನ್ನ ಗುಣ ।
ಪಾಡಿದರೆ ಹುರುಳಿಲ್ಲ ನಂಬಿಯೇಕಾಂತದೊಳ್ ।
ಕೂಡುವಂಗನೆಯುಪ್ಪ ಪೆಱವೆಣ್ಣ ಮೊಲೆಯೊಳಗೆ ನೀಂ ಕೈಯನಿಕ್ಕಲಾತಂ ॥
ನೋಡುತಲೆಲೇ ಶಿವನೆ ಎಂದೊಡಳ್ಕುತ್ತೆ ಕೊಂ ।
ಡಾಡಿ ಸಾಸಿರ ಪೊನ್ನ ತೆತ್ತ ಮರ್ಮವನೀಗ ।
ಲಾಡುವೆನು ಶರಣರೊಳದೇಕೆ ನೀನೆಮಗೆ ಭಕ್ತಿಯ ಲಂಚವಿತ್ತು ಬರ್*ದುಕು ॥ ೧

ಆ ವಸಂತೋತ್ಸಾಹವಂ ಕಳದು ಸಂತಸದೆ ।
ಭೂವರಂ ಮಂತ್ರಿಯು ಮೊಗಂನೋಡಿ ಪುರಕೆ ರಾ ।
ಜೀವಲೋಚನೆಯುಮೃತಿವತಿಮುಖ್ಯವಾದ ಪಲ್ಲಕಿಗಳಂ ತೆರಳವೇಳ್ದು ॥
ಪಾವನಸ್ಥಲಕೆ ನಡೆತಂದು ತುರಗನನಡರು ।
ಪಾವೇಳೆಯೊಳಗೊರ್ವ ಶಬರನಾಯಕನ ನಿಜ ।
ಕೋವಿದಸಖಂ ತ್ವರಿತದಿಂದಲುಪಗಮಿಸೆ ದೂರದೊಳವನ ಬರವನಱಿದು ॥ ೨

ಕ್ಷೋಣೀಶನೀಕ್ಷಿಸುವ ದೃಷ್ಟಿಭೇದವನಱಿದು ।
ಜಾಣರೆನಿಸಿರ್ದ ಕಂಬಿಯ ಕಲಿಗಳಾಕ್ಷಣದೆ ।
ಕಾಣಿಸಲು ಶಬರನ ಸಖಂ ಬಂದು ಸಾಷ್ಟಾಂಗದಂಡದಿಂ ನಮಿಸಿ ನಿಂದು ॥
ಮಾಣಿಕವನೊಂದ ಕಾಣ್ಕೆಯನಿತ್ತು ಕೈಮುಗಿದು ।
ಮಾಣದಡಿಗಡಿಗೆ ಗಂಭೀರವಾರಾಶಿ ಮ ।
ತ್ಪ್ರಾಣ ಜಯಜೀಯ ರಕ್ಷಿಪುದೆಂದು ಕೀರ್ತಿಸುತ ನಿಂದನಾಸಮಯದಲ್ಲಿ ॥ ೩

ಆರತ್ನದಧಿಕಪ್ರಕಾಶವಂ ನೋಡುತ್ತ ।
ಭೂರಮಣನಖಿಳವಣಿಜರ ಪರೀಕ್ಷಿಪುದೆನೆ ಮ ।
ಹಾರಾಯ ಚಿತ್ತೈಸು ನವಕೋಟಿ ಬೆಲೆಯೆನಲು ವಿಷ್ಣುವಿನ ಬಾಚ್ಕೆಯ್ಯೆಸ್ ॥
ಸಾರಕೌಸ್ತುಭವೆನಲು ಜಾರಗೋಪಾಂಗನೆಯ ।
ಪೇರುರದ ಸೋಂಕು ಚಿಂತಾರತ್ನವೆನೆ ತ್ರಿದಿವ ।
ದೂರಸಂಪತ್ತಲಾ ನಾರದಮುನೀಶನ ಮನೋರಾಗವೆನೆ ಮೆಚ್ಚಿದಂ ॥ ೪

ನೆಟ್ಟನಾಪ್ರಾಥವಣಿಜಗರ್ಗಂಗಚಿತ್ತವುಂ ।
ಕೊಟ್ಟು ಸತ್ಯೇಂದ್ರಚೋಳಾಧೀಶನಾಚರನ ।
ನಿಟ್ಟಿಸಲು ಜೇಯು ಬಿನ್ನಪ ದಕ್ಷಿಣಾಂಬುಧಿಯು ಸೀಮೆಯು ಕಿರಾತನಗರ ॥
ಪುಟ್ಟಿದೂರಲ್ಲಿಗಧಿಪರು ನಮ್ಮವರು ನಿಮ್ಮ ।
ಮೆಟ್ಟುಗಳ ಲೆಂಕರಾನಾಯಕನ ನಾಮವಳ ।
ವಟ್ಟುಪರ್ಗ ಕಾಳಮೇಘಂ ಸುಖದೊಳಿರೆ ಮಹಾಗ್ರೀಷ್ಮಕಾಲಂ ಬಂದುದು ॥ ೫

ಸ್ಫಟಿಕವೆಂದೆಂಬ ಕಂದದಿನೊಗೆದು ನಾಡೆ ಧಣಿ ।
ಛಟಿಲೆಂಬ ಕಿಡಿಗಳೇ ಮೊಳಗಳಾಸೂರ್ಯನು ।
ತ್ಕಟದ ಕಿರಣಂಗಳೇ ವಲ್ಲಿಯುಗ್ರದ ಭಾಸ್ಕರನೆ ಫಳಂ ಪಕ್ವಮಾಗಿ ॥
ಪುಟವೇಱಿಯುಕ್ಕುತಂ ಬ್ರಹ್ಮಾಂಡಮೆಂಬ ।
ಘಟದೊಳು ರಸಂ ತೀವಿತೆನೆ ಮರೀಚಿಯ ಜಲಂ ।
ಪಟುವಾಗಲಾಗಿ ಬೇಸಗೆ ಬೆಳೆವು ಪಣ್ತುದೆಲೆ ದೇವ ಚೈತ್ರಸೆಂದನು ॥ ೬

ಸೂರಕಿರಣಂಗಳಿಂ ಬೆಂದು ತಲೆಬಿರಿದು ಮದ ।
ವಾರಣದ ಮುತ್ತುಗಳು ಸುಱಿಯೆ ಕೆಱೆಯುಗೆ ಕಾಯ್ದು ।
ನೀರಿಂದೆ ಮುಯ್ಯ ಸಮ್ಮಂ ಸಗಿವ ಬೆಳ್ಳಾನೆಯಾನ ಬಚಿಕಿಕೆಯೊಳಿರದೆ ॥
ಸಾರಿತವು ಸಗ್ಗವುಂ ಪಿಂದಬ್ಬಿಯುಂ ಪೀರ್ದ ।
ವೀರಕುಂಭಜನಾಮಮಾಮುಣಿಗೆ ಸಲಲ್ಕೆ ।
ವಾರಿಯುಱತಾತಟಾಕಂ ಬೀಡೆವರಿದುದೇನೆಂಬೆ ಬೇಸಗೆಯುಗ್ರಮಂ ॥ ೭

ಇಂತಪ್ಪ ಕಾಲದೊಳು ಬೇಡವಡೆಯುಂ ಮೊಱೆವ ।
ನಂತವಾದ್ಯಂಗಳಿಂ ತಳ್ತಲಗುಗಳ ಮಿಱುಪ ।
ಕಾಂತಿಯಿಂ ಬೇಂಟೆಗುಜ್ಜುಗಿಸಿ ವಿಪಿನಕೆ ನಡೆವೆನಲ್ಲಿ ಶರತತಿಯು ಕಱೆವೆಂ ॥
ದಂತಿಗಳ ತಲೆಯ ಮುತ್ತುಗಳುದುರೆ ಸೀೞ್ವನಿದಿ ।
ರಾಂತ ಕೋಡುಳ್ಳ ಮೃಗಕೆನ್ನಲುಬ್ಬಕಸೇನೆ ।
ಯಂತಕರಲಾ ಭಾಷೆನುತ್ತಲ್ಲಿಗೆಯ್ದಿದಂ ಕಾಳಮೇಘಂ ಹರ್ಷದಿಂ ॥ ೮

ಆಗಮುಕ್ಷುಪ ಶಾಬರವ್ರಾತ ಶಾಂಡಿಲ್ಯ ।
ರಾಗಿಸುವ ರೇಖಾಜಟಿವ್ರಾತ ಶಲ್ಯಾದಿ ।
ಯೋಗದಿಂ ಪೊತ್ತಗೆಗಳಂತಾದಧೀಚಿಪರಿಗಳ ಯುದ್ಧರಂಗದಂತೆ ॥
ಮೇಗೆ ಮಿಗೆ ಪಕ್ಕಣದ ದುರ್ದಿನದ ವರಗೌತ ।
ಮಾಗಾರದಂತೆ ಸುರಪುರಿಯಂತೆ ವರಮಹಾ ।
ಭಾಗಮುನಿಯಂತೆ ಕೌರವಸೇನೆಯಂತೆ ರಾಜಿಸುವ ಪೇರಡವಿಯಲ್ಲಿ ॥ ೯

ಇದೆ ಮಣಿಲೆಯೊತ್ತಿನೊಳ್ ಸಿಂಗದ ಮುಗುಗೊರ್ಸೆವಜ್ಜೆ |
ಯಿದೆ ಸೋಮವಲ್ಲಿಯಮಡೆಯೊಳ್ ಮೊಲದ ಕಾಲ್ಗುರುಹು |
ಇದೆ ರಾಜವೃಕ್ಷದ ಸಮೀಪದೊಳಗೆರಲೆಗಾಲಿಂ ತುಳಿದ ನೆಲದ ರಾವು ‖
ಇದೆ ಬಿಲ್ವಮೂಲದೊಳ್ ಪುಲಿಯು ನಖಚಿಹ್ನವಿಂ |
ತಿದೆ ಸರ್ವಮೃಗಪಕ್ಷಿಗಳ ಪಕ್ಕೆಯೊಂದು ಪು |
ದೊವಳುವಾ ಪಡೆವೆರಸಿ ಬೇಂಟೆಯಾಡುತ್ತಿರ್ದನಂದು ಶಬರಾಧೀಶನು ‖ ೧೦

ತೋಱಿ ಬೇಡಿತಿಯೆನ್ನ ಕಣ್ಗೆಸೆಯೆ ನೀವೆನು |
ತ್ತಾಱುತೆರಲೆಗಳನಿಸಲದು ತಾಗಿತ್ತಿಲ್ಲವೇಂ |
ಕಾರಣಂ ಕೇಳಬಲೆಯಾವೆಂದುದಿಲ್ಲವದು ಕವಿವಚನವೆನಲು ಮುಳಿದು ‖
ಕೂರಂಬಿನಿಂದಲೆಚ್ಚೊಡೆ ಕಣ್ಣು ತಾಗಿ ತಂ |
ದಾರಾಕ್ಷಸಾಮರ್ಷಸುಕ್ರನನಮಿಸಿಮುತ್ತಂ ವಿ |
ಚಾರಿಸ್ವನಗೊಂದು ಕಣ್ಣಿಲ್ಲವೆಂದು ದೃಷ್ಟಪಸಲ್ಲದವಳೆಂಬು ಮಸಿಯೆ ‖ ೧೧

ಈಸರಿಯ ಬೇಂಟೆಯಾಡುತ್ತುಮಿರೆ ಸಿಂಹಳ |
ದ್ವೀಪದಿಂದೆಮ್ಮ ತೋಹಿಂಗೊಂದು ಸಿಂಹನಾ |
ಟೋಪದಿಂ ಬರಲೆಮ್ಮ ಬಲಮೈದೆ ಮೋಯೊಂದು ಬೊಬ್ಬಿಟ್ಟು ಕವಿಯಲಾಗಿ ‖
ಕೋಪದಿಂದಟ್ಟಿತ್ತು ಮುಟ್ಟಿತ್ತು ಮೆಟ್ಟಿತ್ತು |
ಭಾಪುರೇ ಸಜ್ಜಿಗಿಜ್ಜಿಂದು ಸೀಳ್ವುದಱತ್ತ |
ದೇ ಪೇಳ್ವೆನರ್ಥಬಲವೆಬ್ಬಿಯೆ ಕಂಡೊಡೆಮನತಿಸರಭಸದೊಳಿವರಾದನು ‖ ೧೨

ಒಡೆಯ ಚಿತ್ತೈಸು ನಿನ್ನಯ ಬಂಟನಿದಿರಾಗೆ |
ಖಡುಗದೊಳ್ಪೊಳಗೆ ಮಿಂಚಾರಕ್ತವಾರ್ಧಾರೆ |
ವಡೆಯ ಘುಡುಘುಡಿಸಿ ಹೊಡೆಪಬ್ಬರಂ ಸಿಡಿಲು ತಲೆರನ್ನವೆಸವಿಂದ್ರಗೋಪಂ ‖
ಕೆಡೆಯಿತ್ತು ಹರಿ ಕಾಳಮೇಘನಿಂ ಭಾಪೆಂದು |
ನುಡಿಯಿತ್ತು ಸಕಲ ಪರಿವಾರವನಿತಕ್ಕೆ ಬೆಂ |
ಬಿಡವೆ ಬಂದತ್ತು ಸಿಂಹಳನೃಪನ ಸೇನೆಯಾರ್ಭಟಿಸುತಂತಾತೋಹಿಗೆ | ೧೩

ಬಂದು ನಮ್ಮಯ ಸೀಮೆಯದು ಸಿಂಹನಿಲ್ಲಿಗೇ |
ಬ್ತಿಂದುದಿದು ನಮ್ಮದೆಂದಾರ್ಭಟಿಸಲವರು ಭುಗಿ |
ಲೆಂದೆನುತ ಕಾಳಮೇಘಂ ಹರಿಯ ತಲೆಯನುಱಿ ಸೀಳ್ದು ಕೆಂಗವಿ*ರ್ಷಣಿಯನು ‖
ತಂದೆನ್ನ ಕರದೊಳಿಟ್ಟೊಡೆಯನ ಪದಾಂಬುಜದ |
ಮುಂದಿಟ್ಟು ಬಿನ್ನವಿಪುದೀಪವನನೆನುತ ಬೋ |
ಯೆಂದು ಬೊಬ್ಬಿರಿದು ಕಾದುತ್ತಿಹಂ ಕಷ್ಟವಿದು ಜೀಯ ಚಿತ್ತೈಸೆಂದನು ‖ ೧೪

ಈರತ್ನಕಗ್ಗಳದ ರಾಸಿ ಮಣಿಯುಂಟೆಂದು ।
ವಾರಿಧಿಯ ಮಧ್ಯದೊಳು ಮಲೆತನವನೆಂದನೆ ಮ ।
ಹಾರಾಯ ಕಪ್ಪವನಿಂ ಬಂದುದಿಲ್ಲೆಂದು ಕೂಡೆ ಕರಣಿಕರೋದಲು ॥
ಭೂರಮಣನನುಗ್ರದಿಂ ಗಮಿಸಲುಜ್ಜುಗಿಸೆ ಕರ ।
ವಾರಿಜವ ಮುಗಿದು ಸಚಿವಂ ಜೀಯ ನಿಮ್ಮ ಪಟು ।
ವೀರವಡಬಂಗಾತನಾಂಪನೇ ಪಕ್ಷಿಗೇತಕೆ ಪಾಶುಪತವೆಂದನು ॥ ೧೪

ಶ್ರೀಕಲಿಗಣೇಶ್ವರಂ ಸೂಳ್ ನಿಂಬಕ್ಕ ಮಹಿ ।
ಮಾಕರವೃಷಾಧಿಪಂ ಪುಸುಲೆಯಾಂಡಾರು ಸು ।
ಶ್ಲೋಕ ಭೋಗಣ್ಣರುಂ ಬಾಚರಸರೆಯ್ದೆ ಮಾರಣಮೋಹನೋಚ್ಚಾಟನಂ ॥
ಸ್ವೀಕೃತಸ್ತಂಭನಂ ಸದ್ವಶೀಕರಣಮೆಸೆ ।
ವಾಕರ್ಷಣಾದಿಷಟ್ಸಾಮರ್ಥ್ಯಮುಮನಾಪಿ ।
ನಾಕೆಗಾದೊಡೆ ನೆಗಳ್ದರವರಣುಗ ನಿನಗೆಣೆಯೆ ಧರೆಯ ನೃಪಕೀಟಕಗಳು ॥ ೧೫

ಮಂಡಲಾಧೀಶಮಣಿಮಕುಟಪದ ವೀರದೊ ।
ರ್ದಂಡನೀವರಮನೆಯ ಪೊಕ್ಕು ಸುಖದಿರಿ ನಾನೆ ।
ದಂಡೆತ್ತಿ ಪೋಗುವೆಂ ಕರಿಹಯಪದಾತಿರಥಮುಖ್ಯಚತುರಂಗಬಲದ ॥
ಮಂಡಲದಿ ನಡೆದು ಸಿಂಹಳನೃಪನನಟ್ಟಿ ಮುಂ ।
ಕೊಂಡು ಎಡಿತಂದೊಪ್ಪಿಸುವೆನೆಂದುಸಿರೆನಂಬಿ ।
ಕೊಂಡು ರಿಪುಕುಮುದಮಾರ್ತಾಂಡನಹಿತೋದ್ರೇಕಷಂಡಗಿರಿವಜ್ರದಂಡ ॥ ೧೬

ರಾಯನತಿವೈಭವದೊಳರಮನೆಯ ಪುಗಲಿತ್ತ ।
ಬಾಯ ತೆಱದಿಳೆ ಘೂರ್ಮಿಪಂತೆ ನಿಸ್ಸಾಣನಿಕ ।
ರಾಯ ಕೋಟಿಗಳ ಧಾಂಧಳರವಂ ಪೊಣ್ಮೆ ಮಂತ್ರಿಯ ಚಾತುರಂಗಸೇನೆ ॥
ಈಯವನಿಯಗಲಕ್ಕೆ ಕೆದಱೆ ಸುಭಟರ ಚರಣ ।
ತೋಯಜದ ಘಾತದಿಂ ಕೆಂಧೂಳಿ ಮಸಗೆ ಕೆ ।
ಟ್ಟಯೆಂದು ಸಿಂಹಳಪದಾತಿ ಮುಱಿದೋಡಿ ಶರಧಿಯ ದಾಂಟೆ ಬೆಂಬತ್ತುತೆ ॥ ೧೭

ಕೂರಂಬಿನಿಂದಂಬುನಿಧಿಯ ಪೂಟ್ಟಿದೆ ತಮಗೆ ।
ದಾರಿಯಾಗಲ್ ನಡೆದು ಭೋಯೆಂದು ಸಕಲಪಾ ।
ವಾರವಾಮಂತ್ರಿಯ ನಿರೂಪದಿಂದಡಿಯಿಟ್ಟು ಪೊಕ್ಕು ಬೊಬ್ಬಿಱಿಯುತಿರಲು ॥
ವೈರಿಗಳ ಪೆರ್ಬಲಂ ಬಾಳೆತ್ತಿ ಪೊಣರ್ದೊಡೆ ನಿ ।
ವಾರಣಂಗೆಯ್ದರಿಕ್ಷುರಕಾದಿಗಳ ಮುಱಿದು ।
ವೀರಭಟರಾಲಿ ಕಂಗೆಟ್ಟೋಡಿದವರು ಮಾಮಾರ್ಗಲೆತು ಬಂದಿದಿರಾದರ್ಕ್ಕ ॥ ೧೮

ಘುಡಿಘುಡಿಸಿ ಸತ್ಯೇಂದ್ರಚೋಳನ ಮಹಾಬಲಂ ।
ಕಡೆಯ ಕಾಲದ ಕಿಚ್ಚಿನಂತೆ ಯಮ ಭಟರಂತೆ ।
ಪೊಸವಿಯಂ ಬಗಿದೆ ರಕ್ಕಸರ ಪಡೆಯಂತೆ ಪ್ರಳಯದೊಳು ಧರೆಯ ಮೊಗೆದ ॥
ಕಡಲಂತೆ ಬಿರುಗಾಳಿಯಂತೆ ಯಕ್ಷಗ್ರಹದ ।
ಗಡಣದಂತಾಪ್ರಳಯರುದ್ರನುಗ್ರತೆಯಂತೆ ।
ಕಡಿದಿರ್ದು ಸಜ್ಜುಗಿಜ್ಜನೆ ಸೀಳ್ದು ದಿಗ್ಬಲಿಯ ಕೊಡುತಿರ್ದುದರಿಸೇನೆಯಂ ॥ ೨೦

ಕೆಟ್ಟೋಡಿ ಕೋಂಟೆಯಂ ಪೊಕ್ಕು ಸಿಂಹಳನೃಪಂ ।
ಕಟ್ಟರಸರೊಡನೆಮಗೆ ವೈರವೇಕೆಂದು ಗಡ ।
ಗಟ್ಟಿ ತನ್ಮಂತ್ರೀಶನಂ ಕಂಡು ತನ್ನ ಕುವರಿಯರಿರ್ವರಂ ಮಣಿಗಳ ॥
ಪಟ್ಟುವಸ್ತ್ರಗಳ ಗಜಹಯಮುಖ್ಯವಸ್ತುಗಳ ।
ಕೊಟ್ಟೊಡನೆ ಬರಲಬ್ಬಿಯಂ ಮಥಿಸಿದಿಂದ್ರನಂ ।
ನೆಟ್ಟನಪಹಾಸ್ಯಮಂ ಮಾಳ್ಪಂತೆ ಪತಿಮೋಹಿ ತಿರುಗಿದಂ ಧರ್ಮಾವತಿಗೆ ॥ ೨೧

ಕ್ಷೋಣೀಶನಂ ಕಂಡು ನಮಿಸಿ ಗಜಹಯಮಣಿ ।
ಶ್ರೇಣಿವಸ್ತುಗಳನೊಪ್ಪಿಸುತೆ ಸಿಂಹಳನೃಪನ ।
ಕಾಣಿಸಿದೊಡಾಕುಮಾರಿಯರಿರ್ವರಂ ಕಾಣ್ಕೆಯಿತ್ತಾಕುಮಾರಕರ್ಗೆ ॥
ಏಣಲೋಚನೆಯರಿರ್ವರ ವಿಭವದಿಂದೆ ಕ ।
ಲ್ಯಾಣಮಂ ಮಾಡೆಂದು ನಮಿಸೆ ಕೈಕೊಳುತಲ ।
ಕ್ಷೀಣಮೊತ್ತಿಯ ಪೊಗಟಲಾಗಿ ಕೈಮುಗಿದವಂ ಭೂಮಿಪಂಗಿಂತೆಂದನು ॥ ೨೨

ಪೊಱಮಟ್ಟೊಡೇನ್ನೂಱು ಗಾವುದದೊಳೆಡೆವಿಡದೆ ।
ಮಿಱುಪ ಮಣಿಮಕುಟವರ್ಧನರು ಸೇರಿಸುತಿರ್ಪ ।
ಕಱೆದು ಸಪ್ತದ್ವೀಪವಾಣ್ಮರಟ್ಟುವರು ಭಯದಿಂದನರ್ಘ್ಯದ ಕಾಣ್ಕೆಯ ॥
ಊಱುವ ದಿಗ್ದಂತಿಗಳ ಸೂರ್ಯನ ರಥಾಶ್ವಗಳ ।
ನಿರ್ದ ಗಣನೆಯನುಳ್ಳ ದೇಶಾಧಿಪತಿಗಳಂ ।
ಜಱಿದು ಶರಣೆನೆ ಕಾದ ನಿನ್ನ ನೇರವೆ ಮಾಡಿತಾನೇತಜವನೆಂದನು ॥ ೨೩

ದೇವ ಸಿಂಹಳನ ಸಲಹೆನಲವನ ಮನ್ನಿಸಿ ಮ ।
ಹಾವಿಭವದಿಂ ಕಮಳೆಯೆಂಬಳಂ ಪ್ರಜ್ಞರವಿ ।
ಭಾವಜ್ಞ ಮಿತವಚನನೆನಪ್ಪ ಪಿರಿಯಂಗೆ ಕುಮುದಿನಿಯನವನನುಜನಪ್ಪ ॥
ಆವಿಮಳತರಮಂತ್ರಲಕ್ಷ್ಮಂಗೆ ಕಲ್ಪಿಸುತ ।
ವೈವಾಹದುತ್ಸವಕೆ ನೃಪನಮಾತ್ಯನ ಕೂಡೆ ।
ಭೂವಳಯದಖಿಳದೇಶಾಧಿಪರ ಕರೆಸು ಸಾಧನತತಿಯ ಕೂಡೆಂದನು ॥ ೨೪

ಕಡುಚೆಲ್ವ ಮೇಲ್ವಾಲೆಗೆ ನೆಲೆಗಟ್ಟು ಗೋಡೆಗಳ ।
ಗಗನಮಂ ಧವಳಿಸಲು ನೃಪಕೀರ್ತಿ ದಶದಿಕ್ಕ ।
ನಡೆಗೆ ಕೀಲಿಸಿದ ತೆರದೊಳೆಸೆಯೆ ವೈವಾಹಮಂಟಪವಿರಲ್ ಚತುರಂಗದ ॥
ಒಡನೆ ಮಿಸುಪೆಡೆದಳವ ಪಿಡಿದಿರ್ದ ಕಡ್ಡಿಯಿಂ ।
ಕಡೆಮಾಡಿ ತೊಡೆವೆಳದು ಚಿತ್ರವೆನೆ ಬರೆದರೆಳ ।
ಯೊಡೆಯ ಸತ್ಯೇಂದ್ರಚೋಳನ ಪರಾಕ್ರಮದಂತೆ ಭಿತ್ತಿಯೊಳ್ಗತಿಕುಶಲರು ॥ ೧೫

ವೀರರೋಹಣಪರ್ವತಂಗಳಿಂತೀನೃಪನ ।
ಮಾರಕರ ಮದುವೆಯಂ ನೋಡೆ ಚತುರತೆಯಿಂದೆ ।
ಸಾರಿ ಕಂಭವ ಭಿತ್ತಿಗಳ ನೆಮ್ಮಿ ಲೋವೆಗಳ ಪತ್ತಿ ಶಿಖರಗಳ......ರ್ ॥
ಆರ್ಯೆಯೆ ಪಲವು ರೂಪಾದಂತೆ ನಿರ್ಮಿಸಿದ ।
ಕೀರಣದ ಪೊಸಪೊನ್ನ ಮಣಿಗೆಲಸದಿಂ ಮೆರೆದು ।
ದಾರತ್ನಗರ್ಭಾಧಿಪತಿಯ ಸಿರಿಯೆನೆ ಮಂತ್ರಿ ಮಾಡಿಸಿದ ಶುಭಮಂಟಪಂ ॥ ೧೬

ಕೂಡಿದರು ದೇಶಾಧಿಪತಿಗಳುಱೆ ಸಿಂಗರವ ।
ಮಾಡಿದರು ಪೊಸಲ ಶುಭವಾದ್ಯಂಗಳೊದವಿ ನಲಿ ।
ದಾಡಿದರು ವಾರನಾರಿಯರು ಮುತ್ತೈದೆಯರು ಪಾಡಿದರು ಶೋಭನವನು ॥
ನೋಡಿದರು ಸರ್ವರಾನಂದದಿಂ ಬುಧರು ಕೊಂ ।
ಡಾಡಿದರು ನೃಪನ ವಂಶಾವಳಿಯನಂತವರ್ಗೆ* ।
ನೀಡಿದರು ಚಾಗಮಂ ಗಣಪರ್ವವಂ ರಚಿಸಿ ಸೂಡಿದರು ಸತ್ಕೀರ್ತಿಯ ॥ ೧೭

ಲಾಳ ನೀಂ ಬೊಕ್ಕಸದ ಮನೆಯ ಮುದ್ರೆಗೆ ನಿಲ್ಲು ।
ಗೌಳ ನೀಂ ಸಂತೈಸು ನಾರುಕರ ತಿರ್ದಪಂ ।
ಚೋಳ ನೀಂ ಚಿಪ್ಪಿಗಳ ಗುರ್ಜರನೆ ಕಾದಿರ್ಪುದರಮನೆಯೊಳೊಳವಾಗಿಲಂ ॥
ಜಾಳೇಂದ್ರ ಭದ್ರದಪ್ಪಣೆಗೆಯ್ಯನಲಂಕರಿಸು ।
ಪೂಜೆಗವನೊಂದೊಂದ ಮಾಡಿ ನೀವಖಿಳಭೂ ।
ಪಾಳರಂದೈದೆ ನೇಮಿಸುತಿರ್ದನಾಮಂತ್ರಿವರ್ಯನ್ನೃಪನಾಪ್ತಕಾರ್ಯಕಂ ॥ ೧೮

ನೀಲಕುಂತಳದ ನವಭೂಷಾರುಣಪ್ರಭೆಯ ।
ಲೋಲಸೂತ್ರದ ಕನಕಪುತ್ಥಳಿಯ ತೆರದ ಮರ ।
ಬಾಲೆಯರು ವಿದ್ರುಮಾಧರದ ಗೋಮೇಧಾಗ್ರೆಯರು ವಜ್ರಮಾಣಿಕ್ಯದ ॥
ಹೋಲುವೆಯ ದಂತಪಙ್ಕ್ತಿಯ ಪಚ್ಚೆಪಸಿರೆಯ ।
ದಾಲಲಿತರತಿಯೆನಿಪ ಮೌಕ್ತಿಕಚ್ಛವಿಯೆಸೆವ ।
ಕಾಲುಗುರ್ಗದಿರ್ವ*ಣ್ಣಗಳೊಪ್ಪಿದರು ನವರತ್ನಮಾಲೆಗಳ ಪಾಂಗಿನಿಂದ ॥ ೧೯

ಇಂದಿನ ದಿನಂ ದೇವ ಮಂತ್ರಲಕ್ಷಗೆ ಪಿರಿಯ ।
ಕಂದ ಪಿತವಚನರ್ಗೆ ಕನಕಮೌಕ್ತಿಕಮಣಿಗ ।
ಳಿಂದೆಸೆವ ಬಾಸಿಂಗಕಳವಟ್ಟು ಸುಮುಹೂರ್ತವಾಯ್ತೆಂದು ನೃಪತಿಲಕಗಱುಹಿ ॥
ತಂದು ಕುಮುದಿನಿಯ ಕಮಲೆಯ ಸಿಂಗರಂಮಾಡಿ ।
ಹೆಂದದುತ್ಸಾಹದಿಂದಾಕುಮಾರರ್ಗೆ ಪಂ ।
ಪಿಂವ ಮದುವೆಯ ಮಾಡಿದಂ ಮಂತ್ರಿ ಸಜ್ಜನರು ಪರಸಿ ಸೇಸೆಯನಿಕ್ಕಲು ॥ ೩೦

ವೈವಾಹನಾಗವಲ್ಲಿಗಳ ಚಾತುರ್ಥಿಕ ಶು ।
ಭಾವಹಂಗಳ ಪೂರ್ಣಮಂ ಮಾಡಿ ಧನಕನಕ ।
ದೇವಾಂಬರಾದಿ ಮುಕ್ತಾಭರಣಕರ್ಪೂರವೀಟಿಕಾದಿಗಳನಿತ್ತು ।
ಓವಿ ಸಿಂಹಳಮುಖ್ಯರಂ ತಮ್ಮತಮ್ಮ ದೇ ।
ಶಾವಳಿಗೆ ಬೀಳ್ಕೊಡಲು ದಿಗ್ವಿಸರದೊಳು ಚೋಳ ।
ಭೂವರನ ಧವಳಕೀರ್ತಿ ಪ್ರಭಾಮಯಮಾಗಿ ಪರಿಕಲಿಸಿ ಮಡಲಿಱಿದುದು ॥ ೩೧

ಇದು ಸಕಲಭಕ್ತಪದಪಂಕೇಜರೇಣು ಮ ।
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ ।
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನಮಮಳಕರ್ಣ ॥
ಹೃದಯಮಸ್ತಕವದನಸರ್ವಾಂಗಸೌಖ್ಯಕಾ ।
ಸ್ಪದಮಖಿಳಸುಜನರ್ಗೆ ಪಂಚಾಕ್ಷರಿಯ ಮಹ ।
ತ್ವದ ಬೋಧೆಯೆಂದೋದಿದೊಡೆ ಕೇಳ್ದರಿಗಿಷ್ಟಸಿದ್ಧಿ ಸರ್ವರಿಗಪ್ಪುದು ॥ ೩೨

ಐದನೆಯ ಸಂಧಿ ಮುಗಿದುದು.

---

## ಆಱನೆಯ ಸಂಧಿ.

ಸೂಚನೆ ॥ ಶ್ರೀರಮಣಸತ್ಯೇಂದ್ರಚೋಳಧರಣೀಶನಾ ।
ಸಾರಮಹಿಮಾಕರನ ಶಿವನ ಕಾಲಂಗಳೊಳ ।
ಗಾರಾಧಿಸುತ್ತಿರಲು ರಾತ್ರಿಯ ವಿಹಾರಮಂ ಮಾಡಿದರು ಸುಕುಮಾರರು ॥

ಹರನೆಂದು ದುಗ್ಧವಾರಿಧಿ ವಿಚಾರಿಸದೆ ಶಂ ।
ಕರನೆಂದು ತನ್ನ ತಿಂಗಳ ಶಿಶುವ ಕೊಡಲದಂ ।
ಹರಿವ ನೀರ್ ಮೊಱೆವ ಹಾವುಱಿವ ಕಿಚ್ಚಿನ ಹೊಱೆಯೊಳಿರಿಸಲದು ಸನ್ನಿವಟ್ಟು ॥
ಶರಿರವೆಲ್ಲಂ ಕಂದಿ ಕುಂದಿತಭವಾ ನಿನ್ನ ।
ನೆರೆಯಲಿರ್ದನ್ನ ಮೆಯ್ಯರೆಯಾಯಿತೆಂದಂಬ ।
ಗಿರಿಸುತೆಯ ಮಾತಿಂಗೆ ಮೆಚ್ಚಿ ಫಲಿದಪ್ಪುದೀಶ್ವರನೆಮ್ಮ ರಕ್ಷಿಸೊಲವಿಂ ॥ ೧

ಆರಾಯುನಿಂತು ಸುಖಮಿರಲು ನಿರ್ಜರನದೀ ।
ಧಾರನಂತತಿಚಪಲನಂದದಿಂ ಮುದುಮೆಯಾ ।
ಗಾರದಂತಾಮುಸಲಿಯಂತೆ ವತ್ಸರದಂತೆ ಭೈತ್ರವಾಣಿಜ್ಯದಂತೆ ॥
ಪೇರಳ್ಗೆಯ ತೇಜದೆ ಜಲಪುಂಜದಿಂ ಮಿಂಚಿನಿಂ ।
ಸಾರವೊಲಗಿಂದೆ ನೀಲಾಂಬರದೆ ವರ್ಷಮಯ ।
ಧಾರೆಯಿಂದಿಂದ್ರಗೋಪಗಳಿಂ ಘನೋಪಲಗಳಿಂದ ಮುಂಗಾರ್ ಬಂದುದು ॥ ೨

ವಿವರಗೆಟ್ಟಂದು ಮಿತ್ರನ ಮೇಲೆ ಪಗಲು ಸಂ ।
ಗವನೆಸಗಿ ದೋಷದೊಡನೊಂದಿಮದಱಿಂದಾಳ್ದ ।
ಭುವನನಿಧಿಯಲ್ಲಿ ವಿಷಮಂ ಕುಡಿದು ಬಂದು ಕಣ್ಣೀರನಡೆಪಿಡದೆ ಕಳ್ದು ॥
ತವಕದಿಂ ಘನಘೋಷದಿಂದಟಲು ಪದ್ಮಿನೀ ।
ಯುವತಿಯರು ಮುಖಸುಗಿದು ಮಧುಕರಧ್ವನಿಗಳಿಂ ।
ತವೆ ಪಲುಂಬುವೊಲೆಸೆದುದಿದುವೆ ವರ್ಷಾಕಾಲವಾಹಾಹ! ಒರವ ಶೂಲಾ ॥ ೩

ಶ್ರೀವಿಯತ್ತಳವೆಂಬ ಸೀಮೆಗಿರುಳೊಳ್ ಪಗಲು ।
ಬೇವಸದೆ ಹಾಱಿ ವರ್ಷಾಂಬುಪೂರ್ಣತ್ವವೆ ।
ತ್ತಾವಿಭಾಕರನೆಂಬ ಕರಗವಂ ಪೊತ್ತುತ್ತರಾಸೆಯಿಂ ನಡೆಯಲೊಡೆದು ॥
ತೀವಿದುದಕಂ ಸುರಿವವೊಲು ಕಳ್ಯೆ ಮುಟ್ಟೆಯಿಱಿದ ।
ರಾವಿನರುಣಾಂಬುವೆನಿಸುವ ಸಂಜೆಗೆಂಪಿನೊಳು ।
ಸಾವನ್ನೆದಲ್ ದಿನಪನೊಳ್ ಪಗಲು ತದ್ರಾಜ್ಯವಡೆದುದನಿಸುವ ನಿಶೆಯೊಳು ॥ ೪

ಆರಾತ್ರಿಯೊಳು ಜಲಂಧರನ ಮುಖಶಶಿಗೆ ಮಾ।
ರಾರಿಯಿಕ್ಕಿದ ಚಕ್ರಮೆನಲು ತೇಜಂಗುಂದಿ ।
ವಾರಿಜವಿರೋಧಿಯಾಪರಿವೇಷದಿಂದೊಪ್ಪುತಿರ್ಪ ವೇಳೆಯೊಳು ಚೋಳ ॥
ಭೂರಮಣನೊಂದಿ ಚಿಚ್ಛಂದ್ರಪ್ರಕಾಶದಿಂ ।
ದಾರ್ಶ್ಯೆದು ಕರದ ಲಿಂಗವನ್ನೆದೆ ಪೂಜಿಸುತ ।
ಕಾರಣಾತ್ಮಕಪುರಾತನಗಣಂಗಳನಲ್ಲಿ ಪಾಡತೊಡಗಿದನಟ್ಟಿಯಿಂ ॥ ೫

ಪಿತನಟಿದೊಡನುಜಂಗೆ ಭಾಗೆಗೊಟ್ಟುಟಿದರ್ಥ ।
ತತಿಯೊಳನುಜೆಯ ಜಂಗಮಾರ್ಚನೆಯ ಮಾಡೆಂದು ।
ಸಿತಗಳನ ಪಕಿತ್ತು ಪಡಗೇಱುತಗ್ರಜಂ ಶರಧಿಯೊಳು ಮಡಿಯೆ ತಮ್ಮಂ ॥
ಅತಿಬಾಧೆಯಿಂ ಬೇಡೆ ಧನವನವರಣ್ಣನಾ ।
ಕೃತಿಯೊಳೈತಂದವನ ಭಕ್ತಿಯಾ ತರುಗೋಲೊ ।
ಳತನುರಿಪು ಸದೆದು ಬಯಲಾಗೆ ಮೊಱೆದಾಶಿವಪ್ರಿಯನಾಚಿಯಡಿಗೆ ಶರಣು ॥ ೬

ಹರನ ಪೂಜಾಬಲಕೆ ಕೊಂಡಾಡುತಿರೆ ಶರಣ |
ಸುರಭವದ್ವೇಷಿಗೊಲಿದಿಷ್ಟವೇನೆನಲು ಶಂ |
ಕರನಿಂದೆ ಶಾರ್ದೂಲಪದನಖಂಬಡೆದು ಸಂಪಗೆಯ ಮರನೇಱಿ ಬೞಿಕಂ ||
ಶರಿರದ ಲಘುತ್ವಮಂ ಬೆರಲ್ಗೆ* ಕಂಗಳ ಪಡೆದು |
ಮರಸಿ ತಪದಬಲೆಯಂ ಜನಿದಣ ಗಂಗವೃತ |
ಶರನಿಧಿಯನೆಱ್ದಗೆ ತಪನಿಧಿಯು ಮೆಚ್ಚಿತ್ತು ಮೆಱೆದ ಪುಲಿದೊಡೆಯ ಶರಣು || ೭

ವೈರದೊಡೆಯರ ಮುಷ್ಟಿಹತಿಗಂಗವಿತ್ತು ಮದ |
ನಾರಿಯೊಳಗೊಣಗುತಿರೆ ಕಾಪಿನಾಳ್ಗಳ ಕದ್ದು |
ಸಾರಿಯಾಲದ ಮರನ ಕೊಂಬೇಱಿ ಧುಮ್ಮಿಕ್ಕಲಾಗಿ ಪಿಡಿಮುಯ್ಯ ಚೋಳ ||
ಭೂರಮಣನೀಶಂಗೆ ನೀಂ ನಿನಗೆ ತೋಱುತ್ತವಂ |
ತಾರೆಂದು ಬಾಯ ತಂಬುಲಮಂ ಮೆಲಲ್ಕೀಯಲು |
ತಾರಾಯ್ದೊಡನೆ ಹರನೊಳು ಪೊಕ್ಕು ಮೆಱೆದ ಭವಭಕ್ತರಡಿಗಳಿಗೆ ಶರಣು || ೮

ಭೂಲೋಕಲನಣುಗನಾನೆಗಳ ದಾಂಟಿಪ ಬಾಲ |
ಲೀಲೆಯುವನೀಪಟ್ಟಮುಕುಟಮಂ ಧರಿಸಿ ನೃಪ |
ಜಾಲವಳ್ಕುತಲೊಡೆ ಕೇಳ್ ಧರೆಯಂ ಬಿಸುಟು ಪೊನ್ನಾಂಬಲಾಧೀಶನಾ ||
ಆಲಯದೊಳಂತಧವವೇಷದಿಂ ರಜವುತುಗು |
ತೋಲ್ಯೈಸಿ ಬಲಿಗೆದಱಿದಾ ಪ್ರಸಾದಂಗೊಳ್ಳಲು |
ಶೂಲಿ ಮುಱಿಟ್ಟೊಳಗುಮಾಡಿಕೊಂಡಾ ಭಕ್ತನೈಮಡಿಯನಾರ್ಗೆ ಶರಣು || ೯

ಹಾಳೆಯೊಳಗಣ ಶೇಷಮಂ ಶ ನಕನುಣಲ್ಕೆಯ್ದು |
ಕೈಲಾಸದಿಂದಿೞಿದು ಶಿವನ ಕರುಣದ ಸಿರಿಯು |
ಚೋಳನಾಗಿರ್ದಱಿದು ಬಂದೆಱಗೆ ತಿಳಿದು ಶಂಕರನಿಳಯಕ್ಕೈದಿ ಕರೆದು ||
ಕೇಳ ಭವ ಕೋಟಿಪ್ರಸಾದಿಗಂ ಭವವನಿ |
ತನವೇನೆಂದು ಮುಖವ ತಿವಿದೊಡೆ ಹರಂ |
ತೋಳೆರಡಱಿಂದಿರ್ದಱಪ್ಪಿಯೆಱೆದೆಸೆದನೈಯಿಶನಾರಡಿಗೆ ಶರಣು || ೧೦

ಈತೆಱದ ಮರುಷಕಾಲದೊಳು ಹರ್ಮ್ಯಂಗಳೊಳು |
ಭೂತಳಾಧೀಶ್ವರಂ ಸಕಲಮಾಹೇಶ್ವರ |
ವ್ರಾತಕ್ಕೆ ದಿವ್ಯಭೋಗಂಗಳಂ ಸಲಿಸುತಂ ತತ್ತ ಪ್ರಸಾದಸುಖದಿಂ ||
ಶೀತಕರಧರನ ಪೂಜಾಸೌಖ್ಯದಿಂ ಘನಪು |
ರಾತನರ ವಚನಾಗಮಾರ್ಥಮಂ ಚಿತ್ತರಿಪ |
ಗೀತಗಳ ಸೊಗಸಿನಿಂದಿರೆ ಬಂದುದಾ ಶರತ್ಕಾಲ ದಿಗ್ವಿಜಯಮೂಲ || ೧೧

ಕಾಲರಜಕಂ ಮಲಿನದಿವಸಾಂಬರವನಾವಿ ।
ಕಾಲ ಸಾತಿಯು ಮುಚ್ಚಿಯೊಳೊಗೆದು ದಕ್ಷಂಗೀಯು ।
ಲಾಲೋಕಿಸುತ್ತೈದೆ ಬೆಳಗಳಂ ಸಲಹಿವಳಿಯುಂಗೆ ಧವಲಾಂಬರವನು ॥
ಮೂಲವೈರಂ ಪೋಗೆ ದೀವಳಿಗೆಯೊಳು ಕರೆದು ।
ಮೇಲವಂ ಪೊದಿಸಿ ಪರಸುತ್ತಕ್ಷತೆಯನಿಟ್ಟ ।
ವೋಲೊಪ್ಪಿದಂ ಶರನ್ಮೇಘದೊಳ್ ಚಂದ್ರನುಂ ತಾರಕಾನೀಕದಿಂದ ॥ ೧೨

ಧಾವಲ್ಯದಂಬರವನುಟ್ಟು ಮುತ್ತಂ ತೊಟ್ಟು ।
ತೀವಿ ಮುಡಿಯಲ್ಲಿ ಮಲ್ಲಿಗೆಗಳಂ ಶಾರದಾ ।
ದೇವಿಯುಂ ಪೋಲ್ವಿಂದುಮುಖಿಯರಧರಾಮೃತಂಗಳ ಚಕೋರಂಗಳಂತೆ ॥
ಸೇವಿಸಿ ಸುಖಂಬಡೆವ ಕುವರರಂ ನೋಡಿ ಶರ ।
ಕಾವಳಿಯು ಭಕ್ತಿಯಿಂ ಶೋಷಿಸುತ ಪಾಪಮಂ ।
ಕಾವಳಿಯನಿಂತು ಸುಖದೊಳಿರೆ ಮಹಿಪಾಲನೈತಂದುದಾಹಿಮದಕಾಲಂ ॥ ೧೩

ಗಂಗೆಯುಂ ಪಣೆಯೊಡ್ಡಿ ಮುಂಡಾಡಿಯಾಲಿಕರ ।
ದಿಂ ಗಿರಿಜೆಯುಂ ತಡರಿ ಜಲಜಭವಮಾರಿಶಯ ।
ನಂ ಗೋತ್ರಭಿನ್ಮೇಘವಾಹನಾದಿಗಳ ಬರ್ಹಿಮುರ್ಖರ ಮಾಡಿ ಮಹಿಯ ॥
ಪೊಂಗಿ ತಲೆಕೆಳಗುಮಾಡಿದ ಹಿಮದ ಮುಷ್ಟಿಭಾಪು ।
ಪಿಂಗಿಸಿದನಭವನಂತಾರಾಹು ಹಿಮಕರನ ।
ನುಂಗಲಹಿಗಳು ರಸಾತಳಕಿಳಿದರೆಂದೊಡಾಹಿಮರಾಜನೇಂ ವೀರನೋ ॥ ೧೪

ಅಂಜನದ ಸಿರಿಯಂತೆ ವರ್ಷದಾಗಸಪೊಂಗಿ ।
ನಿಂ ಜಲಧಿಶಯನ ವಿಷ್ಣುವಿನಂತೆ ವನಿತೆಯುರ ।
ಮಂಜುಳಪಯೋಧರಂಗಳ ಸಾರ್ವ ಬಗೆಯಲ್ಲು ಸೌಂದರಂಗಿಷ್ಟವಿತ್ತು ॥
ರಂಜಿಸುವ ಶಿವಲಿಂಗದರ್ಶನಸ್ಪರ್ಶನಸ ।
ಮಂಜಸದ ಧೂಪದೀಪಾದಿಕಂ ನೈವೇದ್ಯ ।
ದಿಂ ಜಂಗಮುವನರ್ಚಿಸುತ್ತರಸನಿರೆ ಒಂದುದಂತಲ್ಲಿ ಶಿಶಿರಕಾಲಂ ॥ ೧೫

ಶಶಿ ಶಿರವನೇಱಿದಂ ಗಂಗೆ ತಲೆಯುಡರ್ದಳಾ* ।
ನೊಸಲಗ್ನಿ ಗೇಣ್ಣು ತಂಪಾದುದೆರಡಚ್ಚಿತ ।
ಣ್ಣು ಸದಿಂದೆ ಸಮವಾದುದೆಂದು ಮಾನವ ಹೆಸರ ಹಿಡಿಯುದಗಜೆಯು ವಾಮದ ॥
ದೆಸೆಗೆ ಸಾರ್ಚಿದ ಶಿವನ ಶರಣಪ್ರಭಾಮಯುದ ।
ಬಿಸಿಲಿಂದಲುಪಚರಿಸಿ ತತ್ಕಾಲವಂ ಕಳೆದು ।
ವಸುಧಾಧಿಪತಿ ಸುಖದಿನಿರಲೊಂದು ದಿವಸಮಿನನಸ್ತಾದ್ರಿಯಂ ಸಾರ್ದನು ॥ ೧೬

ಅಂದೆನ್ನ ಕಣ್ ಪೋಯ್ತು ಪಲ್ಗಳುದಿರ್ದುವು ಮುಪ್ಪಿ |
ನಿಂದೀಗ ನವೆದೆನಿನಿಯಳ ಪದ್ಮಿನಿಯುನದೇ |
ನೆಂದು ನಾಂ ನೋಡಿ ಚುಂಬಿಸಿ ನೆರೆವೆನೆಂದಿನಂ ನಾಣ್ಚಿ ಶರಧಿಯೊಳು ಬೀೞ್ ||
ನೊಂದು ಹೃದಯದೊಳು ಶೋಕಂ ತುಂಬಿ ಬೆನುಗಿ ಕಾ |
ಯ್ಪಿಂದೆ ನೀರ್ವೊಕ್ಕು ಕಮಲಿನಿ ಪಲುಂಬಲು ಜಗಂ |
ಕಂದಿತೋ ಕರುಣದಿಂದೆಂಬಂತೆ ಪರ್ವಿ ದಟ್ಟೈಸಿದ ತಮಂಧದೊಳಗೆ || ೧೭

ಭೂಮಿಯಂ ಸುರುಳ್ದು ಕದ್ದೊಯ್ದು ನರಕಾಸುರಂ |
ಗಾಮಾಧವನ ದೆಸೆಯೊಳಾಯ್ತು ಭಂಗಂ ಸುರಪ |
ಗಾಮುನೀಶನ ಪತ್ನಿಗಳುಪೆ ಭಾಂಡಿಕದೇಹಮಾಯಿತದಱಿಂ ಕಳ್ಳರು ||
ಕಾಮಿ ಪಾವರಿಗರೇತಕ್ಕೆ ಗುಹನಂ ಪ್ರಣವ |
ಸಾಮರ್ಥ್ಯಚೋರನಂ ಮಾನಕಂಜಾರನಂ |
ಪ್ರೇಮದಿಂ ನೆನೆದಿಂದುಧರನ ಪೂಜೆಯ ಭಕ್ತರೆಸಗುತಿರೆ ಚಂದ್ರನೊಗೆದಂ || ೧೮

ಮಾಸಿದಂಬರವುೞಿದು ಧವಳಾಂಬರವನಾಂತು |
ಲೇಸೆನಿಪ ತಾರಹಾರಂದೊಟ್ಟು ಲಾವಣ್ಯ |
ಭಾಸುರಸಮುದ್ರಮಂ ಪೆರ್ಚಿಸುತುಮಿಂದು ನೈದಲ್ಗಳಂ ನೆಱೆ ನೋಡಲು ||
ಆಸಮಯದೊಳು ಸೌಮ್ಯರಾಜಪುತ್ರರ್ ಮಿಂಗೆ ವಿ |
ಲಾಸದಿಂ ಸಿಂಗರಿಸಿ ರಾತ್ರಿಯ ವಿಹಾರಕೆ ಮ |
ಹಾಸಬರೊಳೆಯ್ದೆ ಪೊಱಮಟ್ಟು ಗಣಿಕಾವೀಧಿಯಲ್ಲಿ ಬರುತಿರೆ ಬರ್ದಿನಿಂ || ೧೯

ರತಿಯ ಕಡೆಯಲ್ಲಿ ನಲ್ಲರ್ಗೆ ಸೊಗಸೀವ ಸ|
ನ್ನುತಮನೋರಥದ ಮದಕುಂಭಿಕುಂಭದ್ವಯೋ|
ನ್ನತಕುಚಂಗಳ ಸಂಪದಾತಿಶಯಮೆಸೆವಾಜಿತೇಂದ್ರಿಯರ ಗೆಲ್ವೆನೆಂಬ ||
ಅತಿವೀರದಂಗನೆಯರೆಸೆದರಾಮನ್ಮಥನ |
ಚತುರಂಗಸೇನೆಯೆಂಬಂದದಿಂ ಚೋಳಭೂ |
ಪತಿಯ ಸುಕುಮಾರರೈತರ್ಪೆಡೆಯೊಳಾಸ್ಯೆಪುಗಱಿದು ಸಿಂಗರವ ಮೆಱೆದು || ೨೦

ನಡೆಯೆಂದು ಕಳುಪುತುಂ ದೀಹದಂಚೆಯನೆಮ್ಮ |
ನಡುವಿರ್ಪುದೆಂದು ಹರಿಯಂ ತುಂಬಿಗಳ ಸಾಲ್ಗೆ |
ಕೊಡುತೆ ಬಾಸೆಯ ಬೞಿಕಲೆಣೆವಕ್ಕಿಗಳನೆರ್ದೆಯೊಳಪ್ಪಿಯರಗಿಳಿಯನೆನ್ನ ||
ನುಡಿಯ ಮೀಱದಿರೆಂದು ಮೀನನಮಳ್ಗಣ್ಣೊಳಳ |
ವಡಿಸಿ ನವಿಲಂ ಮುಡಿಯೊಳಿಟ್ಟು ರತಿಯಂ ಸಂತ |
ಪಿಡುವೊಲಿನಿಯನ ಸೆಜ್ಜೆವನೆಯ ಪುಗುವೊರ್ವ ಜಾಣೆಯ ಕಂಡರಾಕುವರರು || ೨೧

ನಡುವೊಂದು ಪಿಡಿಯೊನಲು ಜವ್ವನದ ಸೊಕ್ಕಾನೆ |
ಯಿಡುಕುಱಿನ ಮೊಲೆವೆಟ್ಟನೊಳು ತನ್ನತಲೆಯನಿ |
ಟ್ಟೊಷನಳುಪೆ ಪುರುಷಸಿಂಹಂ ಮಧ್ಯದಲ್ಲಿರುತ್ತುಗುರ್ಗೊನೆಗಳಿಂ ಪೊಡೆಯಲು ||
ಪಿಡಿದೂರ್ಧ್ವಕಿಕ್ಕೆಲಕೆ ಸಾಲಿಟ್ಟ ಮೌಕ್ತಿಕದ |
ಗಡಣವೆನೆ ರಾಗಾಧರೆಯ ಕಂಠಮಾಲೆ ಚೆ |
ಲ್ವಡೆಯೆ ಮನ್ಮಥಯುದ್ಧಕುಜ್ಜುಗಿಸುವೊರ್ವ ಬಾಲಕಿಯೆಸೆದಳಾನೆಲೆಯೊಳು || ೨೨

ಮೊಗಸಸಿಯ ಕಲೆಗಳುಱ್ ಮುತ್ತುಬಿತ್ತಾಗಲವ |
ನಗೆವೊಯ್ದೊಡಾದಮೃತಬಿಂಬಫಲಮಂ ಸವಿವ |
ಬಗೆಯದಲ್ತಲ್ತಮರ್ದುಗೆಱಿಗೆ ಬಜ್ಜರವರಲ್ ಸೇರುವೆಯ ಮಾಣಿಕ್ಯದ ||
ಸೊಗಸುವೇಱಿಯೊಳುಕ್ಕುಪನಿದುಗೊಂಬಂತೆ ನಾ |
ಲಗೆಜಂತಗಳ ಭಾಗ್ಯವೆನಿಪಧರಮಂ ಪೀರ್ವ |
ಸುಗುಣರೆಸೆದರು ವನಿತೆಯರ ಮನೆಗಳೊಳು ರಾಜಪುತ್ರರ್ಯೈತಪರ್ಗಳು || ೨೩

ಉನ್ನತಪ್ರೌಢನಂಗನೆಗೆ ವಿತ್ತಂಗುಡದೆ |
ಚೆನ್ನನುಡಿಗೂಟಂಗಳಿಂದೆ ಕಾಲಂ ಕಳೆವು |
ದನ್ನೋಡಿ ಕಾಯ್ದು ದೂದವಿ ಸಂಕಟಂಗೊಂಡು ಮಗಳ ಕೂಡಿಂತೆಂದಳು ||
ನಿನ್ನ ನೀನಱಿಯಲಾ ಕುಚಯುಗ್ಮವೆಂದೆಂಬ |
ಹೊನ್ನಕರಡಿಗೆಯ ಬಿಡಬೇಡ ಮಱೆಮಾಡಿಕೊ |
ಳ್ಳನ್ನಲಂತದನಱಿದು ತಳರ್ವ ಚದುರನ ಕಂಡು ನಡೆದರಾಕುವರರ್ಗಳು || ೨೪

ಹೆಣ್ಣೆ ಕೇಳಾಬರ್ಪ ಚದುರನೇ ನಿನಗೆ ಕಡೆ |
ಗಣ್ಣ ಧಾಳಿಯನಟ್ಟಿದಪನೆಂದೊಡವನಳ್ಕ |
ಸಣ್ಣನಡುವಿನ ಚೆಲ್ವಿನತ್ತಿಗೆಯವಂಗಿದಿರ್ನಡೆದು ಮನ್ಮಥಯುದ್ಧಕೆ ||
ತಿಣ್ಣವೆನ್ನದೆ ನಿಂದಳೇಕೆಂದೊಡಿವಳ ತಾಯ್ |
ಹಣ್ಣ ಹದುಳದೊಳಿವನ ಪಿತನೊಳಿರ್ದಪಳೆಂದು |
ಬಣ್ಣದುಟಿಯಬಲೆಯರು ಬಿತ್ತರಿಸೆ ನಗುತೆ ಸತ್ಯೇಂದ್ರನಣುಗರು ನಡೆದರು || ೨೫

ಎರಳೆಗಣ್ಣಳೆ ಸಗ್ಗವೆಣ್ಗಳ ಶಿರೋರತ್ನೆ |
ಪರಿಕಲಿಪ ನಱುಸುಯ್ಯ ಕಂಪನುಳ್ಳವಳೆ ಬಂ |
ಧುರಶಿಖಿಯ ಪೋಲ್ವ ಮುಡಿಯಳೆ ಶಿಥಿಲಮಧ್ಯಳೇ ಭಾಸ್ವಚ್ಚಕೋರನಯನೇ ||
ಉರುತರವಿಲಾಸವಿಭ್ರಮೆ ಸಕಲರಲ್ಲಿ ನಿ |
ಷ್ಠುರವಚನದಾರಿದ್ರಸೌಖ್ಯಪರವಶೆ ನಿನ್ನ |
ವರಿಸದನೆ ನಿರ್ಜೀವಿಯೆಂದು ನುತಿಸಿದಳಬ್ಬೆ ಸೂಚಿಸಿ ದಶಾವಸ್ಥೆಯಂ || ೨೬

ಇನಿಯನನಗಲ್ದು ವಿರಹಾಕುಲದಿ ನಾಂ ಚೆಲ್ವ |
ಬನವ ಪುಗುತಿರಲು ಪುಯ್ಯಲ್ಚೆ ಪರಪುಟ್ಟಂಗ |
ಳನಿತಕೆ ಬಸಂತನಾಸಹಕಾರರೂಪನಾಗಿರ್ದು ಚೆಂದಳಿರ್ಗಳನಿಪ ||
ಪೊನಮುಪ್ಪ ಮೊಗಕಿಚ್ಚ ತಾಳಿದಂ ಮುಂಗಯ್ಯೊ |
ಳನವರತಮಿರ್ದು ಸಾಗಿಸಿಕೊಂಬ ಗಿಳಿಗಳೆ |
ಮ್ಮನೆ ಕಂಡು ಮೂಗ ಕಿಚ್ಚನೆ ಮಾಡಿ ತೊಂಡುಗೆಡೆದಪವೆಂದಳೊರ್ವ ವನಿತೆ || ೨೭
ಕೇಳು ನೀನೆನಗೋಪ ವನಿತೆಯೆಂದೆನ್ನದೀ |
ಚಾಳಿಯೇತಕ್ಕೆ ಯನುಕಂಪೆ ಮಲಯಜಗಂಧಿ |
ಯಾಳೋಚನಂ ಬೇಡವಂಗವೆರಡಲ್ಲದಿನ್ನೊಳಗೆಯಸು ನಿನ್ನದೆಂದು ||
ಬಾಳಮೀನ್ಗಣ್ಣಬಳೆ ಮುಳಿಯದಿರು ನೀನೆನು |
ತ್ತಾಳಿಗೊಳುತುಂ ಚದುರನಂಗನೆಯ ಬುಜ್ಜವಿಸಿ |
ಮೇಳವಂ ಮಾಡುತಿರೆಯಾಲಿಸುತೆ ನಸುನಗುತೆ ನಡೆದರಾಕುವರರ್ಕಳು || ೨೮
ಮತ್ತವಿಟನೊರ್ವಂಗೆ ದೂತಿ ನುಡಿದಳ್ ನಿನ್ನ |
ಚಿತ್ತದನ್ನಳ ಮಿಸುಪ ಸೊಬಗಿನೊಳ್ಗಡಲೊಳೊ |
ಪ್ಪುತ್ತಿರ್ಪ ಚೆಲ್ವ ಮೊಗವೆಂಬ ದೀವಿಯೊಳು ನೀಂ ಬಯಸಿದೀವ್ಯವಹಾರದ ||
ಮುತ್ತುಂಟು ವಜ್ರಮುಂಟೈ ಪವಳಮುಂಟೆಲ್ಲೈ |
ಮತ್ತಲ್ಲಿ ನೀಂ ಗಳಿಸೆ ನೀಲಮುಂಟೀಗ ನೀಂ |
ಹತ್ತುಸಾವಿರ ಹೊನ್ನ ಕೊಟ್ಟಾದೊಡಂ ಕೊಂಬುದುಚಿತವೆಂದಳ್ ಬರ್ದಿನಿಂ || ೨೯
ಪಱಿಮೆಗಳ ಕಡುಚೆಲ್ವ ಮಱಿ ಮಿಸುಪ ತಾವರೆಯ |
ನಱುಗಂಪಿಗೆಳಸಿ ಮೇಲಱಿಯದೊಳಪುಗಲು ನೇ |
ಸಱು ಮುಳುಗಿ ಮುಗಿಯಲಾಂ ಪೊಱಮಡುವೊಡಿನ್ನಾವತೆಱನೆಂಬವಮಾಳ್ಕೆಯಿಂದೆ ||
ಮೆಱೆವೀಭುಜಂಗರಾಸಱಿಮಿಂಡಿಯರ ಕಾಂತಿ |
ಗೆಱಗಿ ಬಿಡಲಳವಲ್ಲದೊಱಲಿ ಕಾಲ್ಗೆಟ್ಟು ಬಾ |
ಯ್ದಱಿದು ದೈನ್ಯಂಬಟ್ಟು ಮಱುಗುತಿರೆ ನೋಡಿ ನೆಲದೆಱೆಯನಣುಗರು ನಡೆದರು ||೩೦
ನಡುವೆ ಬಡತನವಾಯ್ತು ನಿನಗೆಂದು ಚುನ್ನವಂ |
ನುಡಿವ ಮೊಲೆಗಳ್ಗೆ ನಡುವೆಂದುದಂದೆಲೆಲೆ ಪೊಂ |
ಗೊಡನೆಂಬ ಬಗೆಯನಱಿದರ್ಥವಿತ್ತರ್ ಪಿಡಿವ ಕತ್ತುರಿಯ ಕೆಸಱ ಕೂಡಿ ||
ನಿಡುಗಲ್ಲ ಹೇಱಲದು ಕೊರಲ್ಹಾ*ರವಾಗಲಿ |
ಟ್ಟೆಡೆಗೊಂಬ ನಿಮ್ಮ ಕುಂದಱಿಯಿರ್ಪೆ ಬಾಸೆಯಂ |
ಬಿಡೆವೆಂದು ಜಱಿವಿರೆಂಬಂತೆಸೆವ ನಡುವಿನಬಲೆಯರು ಕಣ್ಗೆಸೆದಿರ್ದರು || ೩೧

ಈತೆಱದ ಗಣಿಕೆಯರ ಕೇರಿಗಳ ಸೊಬಗಿನ ನಿ ।
ಕೇತನಂಗಳ ಸಿಂಗರಂಗಳಂ ರಚಿಪ ಸು ।
ಪ್ರೀತಿಗಳ ನುಡಿಗಳಂ ವಿರಹಿಗಳ ಕೂಟಗಳ ಜಾಣ್ಕೆಗಳ ಸೌಂದರ್ಯವ ॥
ಭೂತಳಾಧಿಪನ ಕುವರರು ನಾಗರೀಕನೆಂ ।
ಬಾತನಿಂ ಕೇಳಿಯೊಡವಂದರಂ ಕಳುಪಿ ವಿ ।
ಖ್ಯಾತತರರಮನೆಯ ಪೊಕ್ಕೆಡೆಯೊಳಾಚಂದ್ರಂಗೆ ಬೀತುವು ಲಸತ್ಕಲೆಗಳು ॥ ೧೦

ಪೊನ್ನ ಬೆಟ್ಟವ ಬಳಸಿದಂ ಸಜ್ಜನರ್ಗೊಂದು ।
ಪೊನ್ನೊರೆಯನಿತ್ತುದಿಲ್ಲೀತಱರವೆಂದು ಮಿಗೆ ।
ಪನ್ನತಿಕೆಯಿಂ ಪೂರ್ವಗಿರಿದುರ್ಗಮಂ ಕೊಂಡು ಬಯಲ ನಾಡಂ ಸಾಧಿಸಿ ॥
ದಿಙ್ನಿಚಯದೊಳು ಹಿಮಕರಂಗಳಂ ಬಿಟ್ಟೆತ್ತಿ ।
ಜೊನ್ನವಕ್ಕಿಗಳಂಬ ವಿಬುಧರ್ಕಳಂ ತಣಿಪಿ ।
ದನ್ನಾಡೆ ಜಲದುರ್ಗಮಂ ಪೊಕ್ಕ ರಾಜನೆನಲಿಂದು ಪಡುಗಡಲ ಸಾರ್ದಂ ॥ ೧೧

ದೇಹಕಾಂತಿಗೆ ಮುಳಿದ ತರಣಿಸತಿಯಂ ಪಿಡಿದು ।
ಕಾಹನಿಟ್ಟನುಜೆ ಲಕುಮಿಯನೊಳಗೆ ತುಂಬಿ ಪಡೆ ।
ಮೋಹಿಕೊಂಡಿರೆ ಮುದ್ರೆಯಿಟ್ಟು ರಾಜಂಗೆ ಕೈಸೆಕೆಯ ತೋಱುವೆನೆನುತ್ತೆ ॥
ಆಹ ಚಕ್ರಂಗಳಂ ಜೋಡಿಸುತ್ತಂ ರಥಾ ।
ರೋಹನಾಗುತ್ತೆ ದಱಿವಂ ಕೆದಱಿ ಹುಡಿಮಾಡಿ ।
ಬೇಹರಂ ಮನ್ನಿಪಂತಂಬುಜವನಲರಿಸುತುಮಿನನುದಯ ಗಿರಿಯನಡರ್ದಂ ॥ ೧೨

ಇದು ಸಕಲಭಕ್ತಪದಪಂಕೇಜರೇಣು ಮ ।
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ ।
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಳಕರ್ಣ ॥
ಹೃದಯಮಸ್ತಕವದನಸರ್ವಾಂಗಸೌಖ್ಯಕಾ ।
ಸ್ಪದವಖಿಳಸುಜನರ್ಗೆ ಪಂಚಾಕ್ಷರಿಯ ಮಹ ।
ತ್ವದ ಬೋಧೆಯಿಂದೋದಿದೊಡೆ ಕೇಳಿದರ್ಗಿಷ್ಟಸಿದ್ಧಿ ಸರ್ವರ್ಗಪ್ಪುದು ॥ ೧೩

ಆಱನೆಯ ಸಂಧಿ ಮುಗಿದುದು.

## ಏೞನೆಯ ಸಂಧಿ.

ಸೂಚನೆ ‖ ಶ್ರೀಚೋಳರಾಯನೋಲಗಗಾಣ್ಕೆಯೆಂದು ಬಂ |
ದಾಚಮತ್ಕೃತಿಯೈಶ್ವರ್ಯಯುಗ್ಮಮಂ ಕೊಟ್ಟೊಡಾ |
ಲೋಚನಾಧಿಕ್ಯವೈಹಾಳಿಯುಂ ಪೋಗಲುಜ್ಜುಗಿಸಿದರು ಸುಕುಮಾರರು ‖

ಬೆಟ್ಟಣಾಗಿಯೆಡಮೆಯ್ಯನಡಸಿರಲ್ ನೀರ್ವೆಣ್ಣು |
ನಟ್ಟನಡುದಲೆಯೊಳಿರೆ ಮೀನೆೞೆಯ ಪೆಲರುಣಿಗ |
ಳಿಟ್ಟ ತೊಡವುಗಳಾಗೆ ದುರ್ಧರಪಶುಪ ನೋಡುತಿರಲು ಬಲದೊಡೆಯನೇೞು ‖
ಬಟ್ಟಲೊಳ್ ಪಾಲ್ತಂದ ಪಸುಳೆವೆಣ್ಗೊಲಿದೆರ್ದೆ*ಯ |
ಕೊಟ್ಟೆಸೆವನೆಂದು ನಿನ್ನಂ ಶರಣರೊಳಗೆ ದೂ |
ಱಿಟ್ಟೊಡೇಗೆಯ್ವೆ ಶಿವ ಪೆರ್ಮೆಗಿಡದಿರ್ಪುದಳವಟ್ಟೆನ್ನ ಹೃದಯದೊಳಗೆ ‖ ೧

ಆಗಳಾಕುವರರಧಿಕಸ್ನಾನಮಂ ಮನೋ |
ರಾಗದಿಂ ಮಾಡಿ ಚೆಲ್ವಿಂದೆಸೆವ ಶತದಳದ |
ಪೂಗಳಿಂ ಷಡ್ವಿಧಾನದೊಳ್ ಲಿಂಗಾರ್ಚನೆಯನೆಸಗಿ ಪರಿಮಳಚೂರ್ಣದ ‖
ಯೋಗಮಿಶ್ರದೆ ತತ್ಪ್ರಸಾದತಾಂಬೂಲಕರ |
ರಾಗುವನಿತಕ್ಕರಸನೆಯ್ದೆ ಪೊಱಮಟ್ಟನೆನೆ |
ಕೈಗೊಟ್ಟು ಕೆಲಬಲದೊಳೋಲೈಸೆ ಬರೆ ನಡೆದನಲ್ಲಿ ಚೋಳಾಧೀಶನು ‖ ೨

ವೈರಿಧರಣೀಪಾಲಸಂದೋಹಮೆಂಬ ಕಂ |
ಠೀರವಕೆ ಶರಭ ಮಱುಭಾಪು! ಮೇಲುಪ್ಪರ ಮ |
ಹಾರಾಯ ರಾಯಪರಮೇಶ ಜಯಜೀಯಯೆಂದುಲಿಯೆ ಕಂಚುಕಿಗಳಲ್ಲಿ ‖
ಭೂರಮಣಸತ್ಯೇಂದ್ರಚೋಳನಾಸಿಂಹಾಸ |
ನಾರೂಢನಾದನಂದಷ್ಟ ಸಂಪದವ ಕಾ |
ಲಾರಿಯಿಂ ಪಡೆದನೋಲಗವನಾಂ ಬಣ್ಣಿಸುವೊಡಳವೆ ಬಲ್ಲಂತೊಱೆವೆನು ‖ ೩

ಸಾರಮಂತ್ರೀಶರಿಂ ಕಾರಣಪ್ರಾಜ್ಞರಿಂ |
ವೀರಭಟರೊಗ್ಗಿನಿಂ ಪ್ರೇರಕಾಧೀಶರಿಂ |
ಚಾರರಿಂ ಮಣಿಮುಕುಟಧಾರರಿಂ ಸುರವೃಕ್ಷದೋರಣದುದಾರಗುಣರಿಂ ‖
ಧೀರನರಮುಖ್ಯರಿಂ ಮಾರತಂತ್ರಂಗಳ ವಿ |
ಚಾರದ ಭುಜಂಗರಿಂದಾರಯ್ಯದೀಮರ್ತ್ಯ |
ವಾರಸಾತಳಸಭಾಕಾರವಾದಂತೆಸೆದುದಾರಾಯನೊಡ್ಡೋಲಗಂ ‖ ೪

ಪರಮ ಮೈತ್ರೇಯರಿಂ ಪುಂಡರೀಕಾಕ್ಷಿಯರ ।
ತರದಿಂದೆ ಸೂತರಿಂ ಮತ್ತೆ ತತ್ಕ್ರತುಕರ್ತೃಗ ।
ಪುರುಷರಿಂ ತಳ್ತಲಗುಗಳ ಮರೀಚಿಗಳಿಂದಲೆಸೆವ ಸಂಗರದಕ್ಷರಿಂ ॥
ಮರಳಿ ನಿರ್ಜರಗುರುವ ಪೋಲ್ವ ವಿಬುಧರ್ಕಳಿಂ ।
ವರಮುನಿಯ ಸಭೆಯಂತೆ ತದ್ಬ್ರಹ್ಮಸಭೆಯಂತೆ ।
ಸುರಪತಿಯ ಸಭೆಯಂತೆ ಮೆಱೆದುದಾರಾಯನೊಡ್ಡೋಲಗಂ ಸೈಪಿನಿಂದೆ ॥ ೫

ಮಱೆಯದಿರು ಜೀಯ ಪಂಚಾಕ್ಷರಿಯ ಪಾರಮಂ ।
ಮಱೆಯದಿರು ಮುರಂಗರಿಪ್ಪವನಿತ್ತು ಕೂರ್ತುದಂ ।
ಮಱೆಯದಿರು ಭಯಮುಮಂ ತೀರ್ಚಿಯುಪಮನ್ಯುವಂ ಶಿವನಸಾರ್ಚಿದಮಂತ್ರಮಂ ॥
ಮಱೆಯ ಬೇಡಯ್ಯ ಪಿಳ್ಳೆಯನಾರ ಮಹಿಮೆಯಂ ।
ಮಱೆಯದೆ ನಮಶ್ಶಿವಾ ಎಂಬುದೆಂದನುತಲೆ ।
ಚಿಕ್ಕಱಿಸಿ ಭಸಿತದ ಪುಟ್ಟಿಗೋಲ್ಗಳಿಂದಡಿಗಡಿಗೆ ತಿವಿವರಿರ್ವರು ಚೋಳನ ॥ ೬

ಪರುಷದಂತಾವೇದದಳತೆಗೋಲಂತೆ ನಿ ।
ರ್ಜರಧೇನುವಂತೆ ಪತಿಭಕ್ತಿಯಂತಮೃತಸಾ ।
ಗರದಂತೆ ಮುಟ್ಟಲೊಡನಾಸುವರ್ಣತ್ವದಿಂ ಶ್ರುತಿಕಾಷ್ಠಜೀವಾಳದಿಂ ॥
ಸೊರೆವಾತಿನಿಂ ಕಟ್ಟ ಬಾರಿಸಿದೊಡೊಳ್ನುಡಿಯ ।
ಪುರುಷನೊಳ್ ನುಡಿವ ದಾರದ ತೆಱದಿ ರಂಜಿಸುವ ।
ಕರಮಾಪ್ರವಾಳದಿಂದೆಸೆವ ದಂಡಿಗೆವಿಡಿದು ಜಾಣಗಾಣಂ ಪಾಡಿದಂ ॥ ೭

ಪಾಲ್ಗಡಲ ಚೆಲ್ವ ಬಂಬಲ್ದೆರೆಯನೀಱೆಕ್ಕಂಡು ।
ನಲ್ಗೆಯ್ದ ತವರಾಜದೊಡವೆರಸಿದಿನಿದದೇಂ ।
ಸಾಲ್ಗೆ ಜೇನೆಯ್ಯ ಕಂದಲ್ ಸೊಗಸು ಸಾಟಿಯೇ ಸಗ್ಗಿಗರ ಪೊಂಗೊಡನೊಳು ॥
ಮೇಲ್ಗುಕ್ಕುವಮರ್ದೆ*ಣೆಯೆ ಪೂರ್ವದಃಪೂತಿಯರ ।
ಕಾಲ್ಗೆಱಗಿ ಪಡೆದನೋ ಭಾಪುಭಾಪೆಂದು ಪೊಗ ।
ಳಿಲ್ಗರುವ ಗಾಣನಂತಾರಾಜಸಭೆ ಲೆಪ್ಪದೊಲ್ ಗಾಡಿವೆತ್ತಿರ್ದುದು ॥ ೮

ರವಿವಂಶರತ್ನಪ್ಪಯದಗೆಗಳೋ ನಾಡೆಯೊ ।
ಪ್ಪುವ ರೋಹಣಾದ್ರಿಗಳ ಗಂಡಶೈಲಂಗಳಿಂ ।
ದಿವರ ಮಸ್ತಕದೆಡೆಗೆ ಬಂದ ಮಣಿಪುಂಜಗಳೊ ಪೆರ್ಚುಕುಂದಿನ ಶರಧಿಯ ॥
ನವರತ್ನರಾಶಿಗಳು ಗಾಂಭೀರ್ಯನಿಧಿ ಚೋಳ ।
ಭುವನಾಧಿಪನ ಸಭೆಯ ಸಾರ್ದುವೋ ಪೇಱೆವೆಂ ।
ಭವೊಲಿರ್ಪ ಮಣಿಮಕುಟವರ್ಧನರಸಂಖ್ಯಾತರಿರ್ದರೊಡ್ಡೋಲಗದೊಳು ॥ ೯

ಗಾಯಕರು ಪಾಡಿದರು ನೋಡಲಾವಾಗ್ಮಿಗಳು ।
ಬಾಯ ತೆರೆದಾಡೆ ಶಿಕ್ಷಿಪವರ ಕೂಡೆ ಮ ।
ತ್ತೀಯವನಿಪರು ಕಪ್ಪವಂ ತಂದು ಮುಂದಿಟ್ಟು ಬಿನ್ನವಿಸಿಯುತ್ತಿವಟ್ಟು ॥
ರಾಯನಂ ನಿರಘನಿರ್ಮಾಯನಂ ನೈರ್ಮಲ್ಯ ।
ಕಾಯನಂ ಸಂತತಾಜೇಯನಂ ನಿರ್ಜಿತಾ ।
ಪಾಯನಂ ಕಾಣ್ಬುದೋಕೋಯೆನುತ್ತಿರ್ದರು ನ್ಯಾಯದಿಂ ದಂಡಧರರು ॥ ೧೦

ಆರಾಯನಿಂತು ವೈಭವದಿಂದಲೋಲಗವ ।
ಸಾರಸುಖದಿಂದೊಪ್ಪುತಿರೆ ಸಿಂಧುದೇಶದ ಮ ।
ಹೀರಮಣನಖಿಳಸಂಪತ್ತಿನಿಂ ನಡೆತಂದು ಗಜಮಸ್ತಕದಿನಿಳಿಯುತೆ ॥
ತೋರಮುತ್ತುಗಳ ರನ್ನಗಳನಂಜುಳಿಗೆದತ್ತಿ ।
ಸೇರಿ ಸಾಷ್ಟಾಂಗದಿಂ ನಮಿಸಿ ನಿಂದಿನಕುಲಮ ।
ನೋರಥಸಹಾಯಂಗಳಪ್ಪ ತೇಜಿಯನೆರಡ ತಂದು ಕಾಣ್ಕೆಯನಿತ್ತನು ॥ ೧೧

ದುರ್ವಾಸಮುನಿಶಾಪದಿಂದಂದು ಪೋದ ಸುರ ।
ರರ್ವವಂ ಬೇಡಿ ಮಥಿಯಿಸಿದೊಡಂ ತತ್ಸಿಂಧು ।
ಪೂರ್ವಾಮರಾಮರರ ಬಲ್ಪಾವ ಪಿಡಿಸುತುಚ್ಚೈಃಶ್ರವವೆನಿಪ್ಪ ಹಯವ ॥
ಸರ್ವಬಾಧೆಯೊಳಿತ್ತನಂತಲ್ತು ನಿಜಹರ್ಷ ।
ದುರ್ವಿನಿಂದೀಸಿಂಧುನೃಪನೆರಡು ಕುದುರೆಗಳ ।
ನುರ್ವರಾಧಿಪಗೀಯಲರರೆ! ಭಾಪೆಂದೆನುತ ಸರ್ವರಾನಂದಿಸಿದರು ॥ ೧೨

ಆನೆರೆದ ಸಭೆಯು ಬೇಬ್ರೊಕ್ಕಟ್ಟಣುಗರಿರ್ವರ್ಗೆ ।
ಯೂನೆರಡು ಕುದುರೆಗಳ ಕೊಡುವೆನೆಂದಿತ್ತರಸ ।
ನಾನೇಹದಿಂ ಸಿಂಧುನೃಪನ ಕಳುಹಿದೊಡಾತನಾನೆಗಳಿಗಧಿಕವಸ್ನ ॥
ಆನೆಯ ಶಿರಸ್ಥಲವ ಸಿಂಧುಭೂಮಿಪನಡರ್ದು* ।
ತಾನೆಯ್ದಿ ಪುಗಲು ಚೆಲ್ವಿನ ಸೌಖ್ಯಮಂದಿರವ ।
ನಾನೆಗಟ್ಟಿ* ಸಿಂಧುವಂ ಪೊಕ್ಕನಿನನನ್ಯೋನ್ಯದಾನೇರ್ಪಿನೊಲ್ಮೆಯಿಂದ ॥ ೧೩

ಪಗಲು ಕಡೆಗಾಣೆ ತಮವೆಂಬ ಗಿಡುಗಂಗಳ್ಗೆ ।
ಖಗದ ಮಱಿಗಳು ಬಿಗುತೋರ್ಪಡಿ ಮನೆಮನೆಯ ಗೂ ।
ಡುಗಳ ಪೊಕ್ಕುದೆ ದಿಗಿಲನುರಿಯುಲಂಕ್ಯದ ಗುಣವ ಸಾಜತಸ್ಪೃಶ್ಯವಾಗಿ ॥
ಮೊಗವೆಯ್ದೆ ಪೊತ್ತಿ ಹೊಗೆವಂತುರಿಯುತಿರ್ಪ ದೀ ।
ಪಗಳ ಸಂತೈಸಲೈತಂದಂದದಿಂ ಪೂರ್ವ ।
ನಗದಗ್ರದೊಳಗುದಯವಾದನಾತರಣಿ ಕಣ್ಗಾಲ್ಗೆ ಹರವರಿಯು ಸರಣಿ ॥ ೧೪

ಲೋಕಬಾಂಧವನುದಯವಾಗಲುಪ್ಪವಡಿಸುತ ।
ಲಾಕುಮಾರಗು ನಿತ್ಯಕೃತ್ಯಂಗಳಂ ರಚಿಸಿ ।
ಭೂಕಾಂತನಿತ್ತ ಖಾಸ್ವತ್ತುರಂಗದ್ವಯುಗಳಂ ತನ್ನಿಕಾಂತದಲ್ಲಿ ॥
ಟೋಕೆಯಿಂದಿರ್ದವಂ ತರಿಸೆ ರಥ್ಯಸ್ಥಲಕ ।
ನೇಕ ಮನ್ನೆಯ ಮಕುಟವರ್ಧನರು ಸಹಿತಮಾ ।
ಲೋಕನಂಗೆಯ್ದರಾನಂದದಿಂ ನಲಿದು ಕೊಂಡಾಡಿ ಹರ್ಷವನ ಸೂಡಿ ॥ ೧೫
ಜಾಣರೆನಿಸುವ ಕುಮರರಾಮಾಜಿಶಾಸ್ತ್ರಪ್ರ ।
ವೀಣರಂ ಕರೆದಿವಂ ಪಠಿಕಿಸುವುದೆನೆ ಜೀಯ ।
ಕಾಣೆವೀಧರೆಯೊಳಿಂತಪ್ಪ ಸೌಖ್ಯಗಳನಿಂತಿವಱ ಹೃತ್ಕಮಲದೊಳಗೆ ॥
ಮೇಣು ಸಿರಿ ಸತ್ಯಂಗಳೊಳವು ಮನವದಱನಿಂ ।
ದೇಣಂಗೆ ಮಾರುತಂಗತಿವೇಗ ಪಂಚಕ ।
ಲ್ಯಾಣವಿದೆ ದೇವಮಣಿ ದೊರೆ ಸುಜಿಗಳಿವೆಯೀಸುಲಕ್ಷಣವನಱಿವರಾರು ॥ ೧೬
ಎಂದ ಮಾತಂ ಕೇಳುತಾಮಂತ್ರಲಕ್ಷನಾ ।
ನಂದದೆ ಮನೋಜಮಾರಣಸೌಮ್ಯಗಮನೆ ನೇ ।
ಹಂದಳೆದು ಮೆಲ್ಲರಿದು ಬರೆ ತುಡುಂಕುವ ಬರ್ದಿನಿಯನ ವಿಲಾಸದಂತೆ ॥
ಮುಂದುವರಿವಾತವಕದಿಂದೆ ಮಿತವಚನನೊಡ ।
ನೆಂದನಣ್ಣಯ್ಯ ಕೇಳಿರ್ವರಿವನಡರಿಯಾ ।
ವಿಂದು ಮೈಹಾಳಿಯಂ ಮಾಡಮೇಲ್ಕೊಂಡು ಕಿಱುನಗೆ ಮೊಗದೊಳೆಸೆಯೆ ನುಡಿದಂ ॥ ೧೭
ಆನುಡಿಯ ಕೇಳ್ದು ಮಿತವಚನನೆಂಡಂ ತಮ್ಮ ।
ನೀನಱಿಯಲಾ ಮುಂದಣಾಗುಹೋಗಂ ತಂದೆ ।
ಯೇನುಱಿದ ನೃಪರಂತೆ ನಾರಿಸುತಮೋಹಿಯೇ ಸಕಲಸೌಭಾಗ್ಯಮಿರಲು ॥
ಜ್ಞಾನಿ ಶಂಕರಭಕ್ತವರ್ಗಕೆಮ್ಮಂದೆ ನೋ ।
ವೇನಾನುಮಾದೊಡಾತ್ಮಜರೆಂದು ಮನ್ನಿಸುವ ।
ನೇ ನವ್ಯಘೋಟಕಂಗಳನೆಮ್ಮ ತೊಡೆಮಡಂಗಳ್ಗೆ ತಿರ್ದಿಸಲೆ ಮೇಲ್ಕಂ ॥ ೧೮
ಕೋರಿಮೆಣ್ಣಂ ಕುಮರನಂ ರನ್ನಮಂ ಕೃಷೆಯ ।
ವಾರುವಂಗಳ ನವ್ಯಕೂಟದೊಳು ಬಾಲ್ಯದೊಳು ।
ಚಾರುಸುಪ್ರಭೆ ಮಸುಳಿಸಿಪ್ಪೆಡೆಯೊಳೈದೆ ತತ್ಕಾಲದೊಳ ಪಲ್ಲಣಿಸುತ ॥
ಭೂರಮಣನಡರಲಂತಾಸ್ಪರ್ಶಕೋಪಶಾ ।
ಣಾರಚಿತಕರ್ತೃದರ್ಶನಶಿಕ್ಷೆಗಳಿನುಱೆ ವಿ ।
ಚಾರದಿಂದೊಳಗು ಮಾಡಲ್ಪೇಹುದೆನಲಣ್ಣನೊಳ ಮಾತ್ರಲಕ್ಷನೆಂದಂ ॥ ೧೯

ನಱುಗಂಪನೆಣ್ದೆಸೆಗೆ ಬೀಱುವಲರ್ವಂಡುಣ್ಬ |
ಪೞಮೆಗಳಿಗೇಂ ವಿಚಾರಮೆಯುಮರ್ದೆ ಮಾಂಬಣ್ಣೆ |
ಗೆಱಗಿ ಸೋರ್ವಿನಿದುವಮಂ ಹೀರ್ವಲ್ಲಿ ಕೀರಂಗೆ ಬೆಜ್ಜರೋದಿನ ಮಾಲೆಯ ||
ಸಱಿವಿಂಡಿ ಸೆಜ್ಜೆವನೆಯಿನಿಯನಾಲಿಂಗನಕೆ |
ನಿಱಿ ಸೋಂಕಲಿದಿರಾಗೆ ಬೇಡುವಜ್ಜರ ಬೋಧೆ |
ಯಱಿಪ್ಪುದೇ ಕೇಳಣ್ಣಾ ತಂದೆಯೋಗೆಯ್ವನೆಱ್ತಿಯ ಕಿಡಿಸದೇಱೆಂದನು || ೨೦

ಎಲೆ ತಮ್ಮ ಕೇಳು ಧರ್ಮಜನುದಕಮಂ ಗಗನ|
ದೊಳುಹಿಂಗೆ ಬಿಟ್ಟನುಜರಂ ಪಡೆದನದುಬೇಡ |
ಮಲುಹಣನಗಲ್ದವಸ್ಥೆಯೊಳ್ಳೈಯ್ದಲಾಭೀರು ಮಲುಹಣಿಯ ನುಡಿಯ ಕೇಳೆ ||
ಮಲಹರಸ್ತೋತ್ರದಿಂ ಕೈಲಾಸಮಂ ಪುಗನೆ |
ಸಲೆ ಸೌಖ್ಯರೂಪ ಕೇಳೆ ನೀನು ಧೈರ್ಯಂಗಿಡದೆ |
ನಿಲೆ ಸೈರಿಸೆನಲಯ್ಯ ಮುನಿವನಲ್ಲೆನೆ ಮಂತ್ರಲಕ್ಷಗಗ್ರಜನೆಂದನು || ೨೧

ಪಿತನ ಕಾಲ್ದರಿಯನೇ ಚಂಡೇಶ್ವರಂ ತನ್ನ |
ಸತಿಯ ಪೊಡೆಯುಂ ಸೀೞನೇ ಚೋಳನಂಗನೆಯ |
ನತಿಕೋಪದಿಂ ಕೈಗಳರಿಯನೇ ಕಲಿಕಂಬನಯ್ಯನ ಕೊರಲ್ ಪಱಿಯನೆ ||
ನುತಿಗೊಲ್ಲಳಾನಿಂಬಿ ಮಗನ ತಲೆಯೊಡೆಯಳೇ |
ಸಿತಕಿರಣಜೂಟನಸಿತಗ್ರೀವನಭಯಕರ |
ಯುತಜಗತ್ಸಾಕ್ಷಿ ಹರಿನೇತ್ರಾಂಘ್ರಿಯಭವನಣುಗರ್ಗೆಂಟಿ ತನ್ನವರ್ಗಳು || ೨೨

ಅದು ಕಾರಣಂ ವಿಚಾರಂ ಬೇಹುದೆನಲಣ್ಣಾ |
ಯಿದಱೊಳೇಂ ಸಂದೇಹಮೋ ಶಿವಂ ಯಕ್ಷರೂ |
ಪದಿನಿಟ್ಟ ಹುಲ್ಲನಜಹರಿಸುರಪ್ರಮುಖರೇಂ ತಮ್ಮ ಯುಕ್ತಿಯ ಬಲ್ಮೆಯಿಂ ||
ಅದನೈದೆ ತೊಲಗಿಸಿದುದಿಲ್ಲವಾವ್ಯಾಘ್ರಚ |
ರ್ಮದ ವಿಯದ್ಗಂಗಾಧರಂ ಯಮಧ್ವಂಸಿ ಮಾ |
ಱಿದ ಬಾಧೆ ತಪ್ಪ್ರೀತಿಯಲ್ತೆ ತಾಪತ್ರಯಂ ಪೊರ್ದದೆಂತುಂ ಭಕ್ತರಂ || ೨೩

ವರಮಲ್ಲಿಕಾಸ್ಮೇರಫಲ್ಗುನೇಷ್ಟದ ಭವೋ |
ತ್ಕರವೈದ್ಯ ವಿಶ್ವತಶ್ಚಕ್ಷು ರೂಪಂಗೆ ಬಂ |
ಧುರಸುಕೇಶಿಪ್ರಣುತಶಶಿಧರವಿಶ್ವಪತಿಯಣುಗರ್ಗೆ ಸಹಜಲಿಂಗ ||
ಚಿರವಿಶ್ವತೋಮುಖಸಖರ್ಗೆಯಾರಾಧ್ಯರ್ಗೆ |
ನಿರುಪಮಿತದಣ್ಣಾಯಕರ್ಗೆ ಚಿಕ್ಕಯ್ಯಂಗೆ |
ಹರನ ಮಹಿಮೆಯ ಕಾರ್ಯವೆಂದರಂದಾಚಿಕ್ಕದಣ್ಣಾಯಕಾರಾಧ್ಯರು || ೨೪

ಎಂದು ನಿಶ್ಚೈಸಿ ಕೇಳಣ್ಣ ವೈಹಾಳಿ ಬೇ ।
ಹೆಂದೊಡಾಂ ನಿಲ್ಲೆಂ ಭವಿಷ್ಯತ್ಪದಂಗಳಾ ।
ವೆಂದಂಗಳಪ್ಪುವೆಂಬುದನಱಿಯಬಾರದಾ ಕಂದರ್ಪಹರನೆ ಬಲ್ಲಂ ॥
ಇಂದು ನಿನ್ನಿಂದಾದ ತಪ್ಪೆನ್ನದಾಯ್ತು ಕೇಳ್ ।
ಸಂದೆಗಂ ಬೇಡವೇಳೆಂದೊಡಂಬಡಿಸಿಪರ್ ।
ರೊಂದು ಚಿತ್ತದೊಳೆ ಗಂಭೀರಭೇರಿಗಳೊದಱಲೆಂದಲ್ಲಿ ನಿರವಿಸಿದರು ॥ ೨೪

ಇದು ಸಕಲಭಕ್ತಪದಪಂಕೇಜರೇಣುವೆ ।
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ ।
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಳಕರ್ಣ ॥
ಹೃದಯಮಸ್ತಕವದನಸರ್ವಾಂಗಸೌಖ್ಯಕಾ ।
ಸ್ಪದಮಖಿಳಸುಜನರ್ಗೆ ಪಂಚಾಕ್ಷರಿಯ ಮಹ ।
ತ್ವದ ಬೋಧೆಯೆಂದೋದಿದೊಡೆ ಕೇಳ್ದವರಿಗಿಷ್ಟಸಿದ್ಧಿ ಸರ್ವರಿಗಪ್ಪುದು ॥ ೨೫

ಏೞನೆಯ ಸಂಧಿ ಮುಗಿದುದು.

## ಎಂಟನೆಯ ಸಂಧಿ.

ಸೂಚನೆ ॥ ಜೋಕೆಯಿಂ ವೈಹಾಳಿವೋಗಿ ಕುವರರು ತಿರುಗ ।
ಲಾಕಾಲದಲ್ಲಿ ಮಿತವಚನನಶ್ವದ ಖುರದಿ ।
ಶ್ರೀಕಂಠವರಿಕಂಠರವೆನಲು ಶಂಕರನಳಿದುದಂ ಕೇಳಿದಂ ಚೋಳನು ॥

ಚರಣಕ್ಕೆ ಸುತನೆಱಗೆ ಶಿಖಿಗೆ ಹಸ್ತಶ್ರವಣ ।
ದುರಗತತಿ ತಲೆಯೆತ್ತೆ ಶೂಲದೆರೆವೇಣಿಗಂಗೆ ।
ಳಿರದಹಿಫಣಾಮಣಿಗಳೊಳು ಗಂಗೆಯೊಳಗಲ್ಲಿ ಫಣಿದೃಷ್ಟಿಗಳ್ ಬಿಂಬಿಸೆ ॥
ಕರಪದನಖಂಗಳೊಳಗಹಿಗುಹಾಕ್ಷಿಗಳಸೆಯೆ ।
ಶಿರದಿ ಹತ್ತುಂಗುರದ ಕೈಯಲ್ಲಿ ಹತ್ತುಸಾ ।
ಸಿರವಂಘ್ರಿಗಳೊಳೆ ನೂಱಿಪ್ಪತ್ತು ಕಣ್ ಪೊಳೆಯಲೆಸೆವ ಗಂಗಾಧರ ಜಯ ॥ ೧

ಆಸಮಯದೊಳು ಕಾಳಹಸ್ತಿ ಬಱಿಕಾ ಮಾರ |
ಣಾಸಿಮಯಮೆನಿಸುವಾನೆಯ ಪೌಜೆನಿಂ ಪರ್ವ |
ತಾಸಮೀಚೀನಧಾನುಷ್ಕೋಟಿರೌದ್ರ ಪಾದಾತಿಬಲದೇೞ್ಗೆಯಿಂದ ||
ಭಾಸುರದ ಚಕ್ರಗಂಧರ್ವರಣಾಂಗರ ವರಮಿ |
ಲಾಸದಾರಥಹಯಂಗಳ ಚಾತುರಂಗಬಲ |
ಮೀಶಭಕ್ತರ ಪೆಂಪಿನಿಂ ಭಾಪು! ಕೂಡಿತ್ತು ಭೂಮಿ ಬೆಸಲಾದಂದದಿಂ || ೨

ತಡಿಯೆಂಬ ಕರೆಯಿಂದಲೆವೆದೆರೆಗಳಿಂದಲು |
ಗ್ಗಡದ ಝುಲ್ಲರಿಫೇನದಿಂದಲುರಗೆಜ್ಜೆಕಾ |
ಲ್ಗಡಗ ಬೊಬ್ಬುಳಿಕೆ ಮೊರಹುಗಳಿಂದಲಲಗುಮೀನಿಂದೆ ಹಲ್ಲಣೆವೆನಿಪ್ಪ ||
ಹಡಗಿನಿಂ ಕಿರಣಗಳ ನವರತ್ನದೇೞ್ಗೆಯಿಂ |
ಕಡಲೆಂಬ ಸಂಜೋಗದಮಳಸೈಂಧವಗಳಿಂ |
ಪಿಡಿದರಿಕ್ಕೆಲದಲ್ಲಿ ಸಾಣಿಗಳು ಸಿಂಗರಿಸಿ ಪೂಜಿಮುಟ್ಟಿರಾಕುಮರರು || ೩

ನುಣ್ಗುರುಗಳ ಪೊಸವರೆಯದಂಬುಜಾಸ್ಯದ ಸೂಳ |
ವೆಣ್ಗಳೊಡನೈದಲುಜ್ಜುಗಿಸೆ ಪಡೆ ಮೋಹರಿಪ |
ಜಾಣ್ಕೆ ಸಂತೋಷಿಸುತ ವಂದಿಗಳು ಜಯ ಜೀಯ ಭಲರೆ ಭಾಪೆಂದುಲಿಯಲು ||
ನಾಣ್ಣಾದೆಯಲ್ತು ಕಪ್ಪುರವರಲ ಸೇಸೆಗಳ |
ತಣ್ಗಂಪಿನಿಂ ಹರಿಗಳಂ ಕುಮರರೆಯ್ದೆ ಮೇ |
ಗಣ್ಗೆ ಭೋಂಕೆನಲಡರಿ ಬಿದಿಯನಲ*ರ್ಪೊಡೆಯ ಮೆಯ್ಗಣ್ಗುರುವರಂ ಜಱ್ದರು || ೪

ಕಂಗಳಸಿಗಳ್ ಮೀಂಗಳಾ ಕುಚರಥಂಗಳು |
ತ್ತುಂಗಛತ್ರಗಳು ಭೂಪನ ಬೊಬ್ಬೆಯುಬ್ಬರರ |
ವಂಗಳು ನಿತಂಬಗಜಗಳು ಗಿರಿಗಳಾಗುವತಿಹಸನಹಯಗಳು ತೆರೆಗಳು ||
ಪೆಂಗಳಿಟ್ಟಹ ಬಟ್ಟದುಱುಬು ಪರಿಗೆಗಳು ಕಮ |
ಠಂಗಳಾಶೃಂಗಾರ ವೀರರಸ ವಾರ್ಧಿಗಳ |
ಪಾಂಗು ಬೆರೆದಂದದಿಂದೈದಿದರು ಕುಮರರೊಡನಂಗನೆಯರತಿಸುಭಟರು || ೫

ಅಂದೆನ್ನ ಸುತ ಭೀಮನಂ ಮುಳಿದು ಬಿಲ್ಗೊಪ್ಪಿ |
ನಿಂದಿಱಿದ ಕರ್ಣನಯ್ಯನನಿಂದು ಕಾದಬೇ |
ಕೆಂದಿಳೆಯ ರಾಜಾಳಿಯಂ ಕೂಡಿ ದಾಟಿಟ್ಟು ವಾಯು ಸೂರ್ಯನ ಮುತ್ತಿದ ||
ಚಂದದಿಂ ಪದಧೂಳಿ ರವಿಯ ಮುಸುಕಲು ಬೆಳಗು |
ಕುಂದೆ ತದ್ವಂಶಜರು ಬಲಶಸ್ತ್ರಕಿರಣಂಗ |
ಳಿಂದುಂಟುಮಾಡಿದನಲಾ ಭಾಪನಲ್ಕೆ ಪೆರ್ಚಡೆ ನಡೆದುದೇನೆಂಬೆನು || ೬

ಕೂಟದರಸರ ಮಣಿಕಿರೀಟಸಾಮಗ್ರಿಯು |
ಕೋಟಾನುಕೋಟಿಗಳ ಮಾಟದಾಪ್ರಭೆಗಳಿಂ |
ಮೀಟಪ್ಪ ಭೇದದಾನೋಟದಬಲೆಯರ ಹೃತ್ಕೋಟರದ ಸಂತೋಷದ ||
ಆಟದಿಂ ದಾನಾರ್ದ್ರದೂಟದಳಿಗಳ ಸಮು |
ಚ್ಚಾಟನದ ಶ್ರುತಿಯುಗಾಸ್ಫಟನದ ಕರಿಗಳಿಂ |
ಘೋಟಕಂಗಳನಡಾಯೋಟಗಳಿನೆಯ್ದೆ ಶಶಿಜೂಟನ ಭುಜಾದಂಡರು || ೭

ಸೋಮಸೂರ್ಯರ ವೀಧಿಯಲ್ಲಿ ಬರುತಿರೆ ಸಾರ್ವ |
ಭೌಮನಣುಗರು ಮುತ್ತುರನ್ನಗಳ ದಿವ್ಯಪ್ರ |
ಭಾಮಯದ ನೆರೆ ನೋಟ್ಪ ವನಿತೆಯರ ಹೃದ್ವದನಕುಮುದಕಮಲಂಗಳಲರೆ ||
ಶ್ರೀಮನ್ಮಹಾನೇತ್ರವೆನಿಸುವ ಚಕೋರತತಿ |
ರಾಮಣೀಯಕಮಿಥುನಕುಚಕೋಕಗಳು ನಲಿಯೆ |
ಮಾಮಝುರೆ ಭಾಪಿರುಳು ಪಗಲೊಂದುಗೂಡಿದಂತಿರ್ದವಾಸಮಯದಲ್ಲಿ || ೮

ಸೌರಂಭದಿಂ ನಡೆದ ಭೂರತೀಶ್ವರರೂಪ |
ರಾರವಾಕರಪುರದ್ವಾರವಂ ತಳರ್ದು ಗಂ |
ಭೀರವಾದ್ಯಂಗಳ ಮಹಾರವಂಗಳು ಪೊಣ್ಮಲೋರಂತೆ ನಡೆದು ಬಂದು ||
ಸಾರತರವೈಹಾಳಿಯಾರವ್ಯಸುಸ್ಥಳವ |
ಸೇರಲಿಕ್ಕೆಲದಲ್ಲಿ ಪೌರಜನವೀಕ್ಷಿಸೆ ಕು |
ಮಾರಕರ ಬಲದ ವಿಸ್ತಾರಮೆನಿತುನ್ನತಿಯನಾರಯ್ಯು ಬಣ್ಣಿಸುವರು || ೯

ಗಜಘಟಾಕೋಟಿ ನಿಂದುವು ಮುಡುಲೊಳು ರಥ |
ವ್ರಜವಿನವರೂಥಾಭಿಮುಖವಾದ ಪಕ್ಕಿವದ |
ನಿಜದಿಕ್ಕಿನಲ್ಲಿ ಮೇಳೈಸಿದುವು ವಾಜಿಗಳ ಥಟ್ಟು ಕವಿದುತ್ತರದೊಳು ||
ಭುಜಬಲದ ರಾವುತರನುಜ್ಞೆಯಿಂದೊಪ್ಪಿ ಗಜ |
ಬಜಿಪ ಕಾಲಾಳ್ಗಳಂತಾತೆಂಕಣಾಧಿಕದಿ |
ಗ್ವಿಜಯುರಾಗಿದರ್ರೆನಲಾ ಕುಮಾರರ ಬಲವನಿಳೆಯೊಳಾವಂ ಬಣ್ಣಿಸಂ || ೧೦

ತರಣಿ ಲೋಕಾಲೋಕಪರ್ವತಾಗ್ರಮನಿಂತು |
ತಿರುಗುವಂ ತದ್ವಂಶಭವರಾಮೆನುತ್ತೆ ಬಿ |
ತ್ತರಿಪಂತೆ ಜಲಧಿಪರಿವೃತಧರಾಮಂಡಲಾಧೀಶತೆಯ ತೋಱುವಂತೆ ||
ಹರನ ಕೈಲಾಸಮಂ ಪೊಕ್ಕಲ್ಲಿ ಮೆಱೆವ ಶಂ |
ಕರನ ಬಲಗೊಂಬಂತೆ ವಾಜಿಗಳು ತಿಱ್ರಿಂದು |
ತಿರುಗುವೆಡೆಯವನಿಕ್ಕ್ತೆಸೆದಿರ್ದರಾಕುಮಾರರು ಲೋಕೈಕತಿಧೀರರು | ೧೧

ಗಮ್ಮನಿಕ್ಕೆಲದಲ್ಲಿ ಸೇನೆ ಪೌಜಿಪ್ಪಣ್ಣ |
ತಮ್ಮಂದಿರಿದಿರಾಗಿ ಬೋಯೆಂದು ಸಕಲವಾ |
ದ್ಯಮ್ಮೊಳಗೆ ಬೊಬ್ಬಿಡುತೆ ರಥರಥಕೆ ಕರಿ ಕರಿಗೆ ಹಯ ಹಯಕೆ ಭಟಭಟರ್ಗೆ ‖
ತಮ್ಮೊಳಗೆ ತಾವು ಪೆರ್ಗಳಗದ ಮಾೞ್ಕೆಯಿಂ |
ದಮ್ಮಮ್ಮ ಪೊಣರ್ದ*ರಿಳೆ ಕಮಠಫಣಿರಾಜಾಳಿ |
ಬಿಮ್ಮಗಿಡಲಲ್ಲಿ ಮಱೆದುದು ಭಾಪು ಚತುರವೈಹಾಳಿ ಹರ್ಷದ ಭಡಾಳಿ ‖ ೧೨

ಕಡುಪಿನಿಂ ವೇಡೆಯದೆ ಬೀದಿಯಿಂ ತೀವ್ರದು |
ಗ್ಗಡದ ಬಹುಗಮನದಿಂ ಲಂಘಿಸುತೆ ಬಳಸುತ್ತೆ |
ಬಿಡೆ ಸರಿಸದಿಂದೋಡಿ ಚಾರಿವರಿದಾಡಿಸುತೆ ಹರಿಣವಾಯುಗಳ ಬೞಿಕ ‖
ಬಡನೆಸುಗೆಯುಂಬ ಮೀಱುವ ದಿಟ್ಟಗಳ ಮನದ |
ನಿಡುವೇಗಮಂ ಜಱಿಯುತಿರ್ಪತಿತುರಂಗಮಂ |
ಪೊಡವಿಪಾಲಕನಣುಗರೇಱುತ್ತೆ ವೈಹಾಳಿಯುತ್ಸಾಹಮಂ ತಳೆದರಾಗ ‖ ೧೩

ತಿರುಗಿದರು ವೈಭವದೊಳಾಕುಮಾರರ್ಕಳಾ |
ಶರಣತತಿ ನೋಡಿ ಹಾರೈಸಿ ಮೆಚ್ಚುಭಾಷಿಪರ |
ತುರಗಂಗಳಾಮಂದರಾದ್ರಿಯಂ ಮೆಟ್ಟಿ ಕನಕಾಚಲಕ್ಕಡರಿ ಬೞಿಕ ‖
ಹರನ ರಾಜತಗಿರಿಯು ಪೊಕ್ಕು ಶಾಂಭವಲೋಕ |
ದುರುಗಣಾಡಂಬರದೊಳಿಂತಿವರನೀಡಾಡ |
ದಿರವೆಂದು ಪೊಗೞ ಚೋದ್ಯಂಗಳಿಂ ನೋಡುತಿರೆ ಬಂದು ಪುರಮಂ ಪೊಕ್ಕರು ‖ ೧೪

ಲೋಕನೇತ್ರನ ಕುಲೋದ್ಭವಕುಮಾರರ್ಕಳಂ |
ಕೋಕಕುಚೆಯರು ಕನಕಹರ್ಮ್ಯಂಗಳೆಡೆಯೊಳಾ |
ಲೋಕಿಪರು ಕೆಲರು ಜಾಳಕದೆಡೆಗಳೊಳು ಕೆಲರು ಸಾಲಭಂಜಿಕೆಗಳೆಡೆಯ ‖
ಚೋಕೆಯೊಳು ಕೆಲರುಱಿದ ಮಱಿಗಳೊಳು ಕೆಲಕೆಲರ |
ನೇಕಪ್ರಕಾರದಿಂ ನೋಡುತಿರ್ಪೆಡೆಯೊಳಾ |
ನಾಕಾಧಿಪನ ಸಿರಿಯು ಜಱಿದುದಂದವರ ವಾಹಿನಿ ಸಕಲಜನಮೋಹಿನಿ ‖ ೧೫

ತಾವೆ ನೋಡುವ ದಿಟ್ಟಿಗಳು ಕುಮಾರರ ದೇಹ |
ಲಾವಣ್ಯರಸದೊಳಗೆ ಮಾರ್ಪೊಳೆಯುತಿರೆ ಚೋಳ |
ಭೂವರಂಗೊಗೆದು ದೇವೇಂದ್ರನತಿಶಯಭೋಗದಿಂದಲಿಮ್ಮಯ್ಯಾವನೋ ‖
ಆವಿಚಾರಮದಲ್ತು ಬೆಂದ ಕಾಮಂ ತನ್ನ |
ಭಾವದಿಂದೊಗೆದು ಸಾಕ್ಷಾದಮಳರೂಪಾದ |
ನೋ ವಿಚಾರಿಪೆವೆಂಬವೋಲೀಕ್ಷಿಸುತ್ತಿರ್ದರಾ ಪುರದ ನಲ್ಲೆಯಂದಿರು ‖ ೧೬

ಗಂಗಾಧರನ ಭಕ್ತೆ ತಿರುಕೊಳವಿನಾಚಿಯುಂ |
ಬಂಗನೆ ಪವಿತ್ರಜಲಘಟವನುರೆ ಪೊತ್ತು ಪೆಱ |
ಪಿಂಗದಾಪಂಚವರ್ಷದ ಕುಮಾರಂಬೆರಸು ಮುನ್ನ ತಾಂ ನೀರಡಕುವ ||
ಲಿಂಗವಂತರ ಮನೆಯ ಪೊಕ್ಕು ಕರವಿಯನಿೞುಪ |
ಲಂಗಳದೊಳಿರ್ದ ಮಗನಾರಾಜವೀಧಿಯೊಳು |
ಮುಂಗುಡಿಯೊಳೊದಗಿ ವಾದ್ಯಂಗಳಿಂ ಬರ್ಪ ಸೇನೆಯ ನೋಡೆ ಪೊಱಮಟ್ಟನು || ೧೭

ನಡುಬೀದಿಗೈದಿ ಬಾಲಕನೀಕ್ಷಿಪಲ್ಲಿ ಪೆ |
ರ್ಗಡೆ ಕವಿಯೆ ಬೆಱಗುವಟ್ಟಿರಲು ದೋಃಪೌಜು ಬಂ |
ದೊಡನೊದಗಲಿಟ್ಟಣಿಪ ಜನದ ಕಡೆಗಾಲ್ಗಳಿಂದಾಸುತಂ ಪೊಡೆಗೆಡೆಯಲು ||
ಕಡುತವಕದಿಂ ಬರ್ಪ ಮಂತ್ರಲಕ್ಷ್ಮಂ ಕಂಡು |
ನಿಡುದನಿಯೊಳೊದಱಿ ತೆಱೆಯ ದಾಂಟಿದನಾಹ |
ತೊಡರರರಭವನ ಶರಣಾಚತುರ್ವಿಧಪದಕ್ಕೆಂಬಂದದಿಂ ತಪ್ಪುತೆ || ೧೮

ನೋಡಿ ಕೈಯೂಱ ಬಾಲಕನೇಱುತಿರ್ಪಲ್ಲಿ |
ಕೂಡೆ ಬಂದೊದಗಿತ್ತು ಮಿತವಚನನಶ್ವಮುರೆ |
ಜೋಡಿಸುತ್ತಾಹ ಪಾಂಟಮುದದೇಂ ಸಿಕ್ಕಿದಂ ಹರ ಮಹಾದೇವ ಯೆಂದು ||
ಆಡೆ ಸರ್ವರು ಖುರಂ ತನಯನ ಕೊರಲ್ದಾಗ* |
ಲೀಡಾಡಿದೊಲು ಪಱಿದು ಪುಟನೆಗೆಯೆ ದೊರೆಯಿಟ್ಟ |
ಗಾಡಿಯಹ ತಾರಹಾರಂ ಕಿಱುತ್ತಗಲು ಧರೆಗೆ ಬಿರ್ದುದು ಶಿರಶ್ಚಂದ್ರಮಂ || ೧೯

ಕಂಡು ಹರಹರ ಮಹಾದೇವಯೆಂದಲ್ಲಿ ಭೂ |
ಮಂಡಲಾಧಿಪನ ಕುವರರು ಮಕುಟವರ್ಧನರ |
ತಂಡಸಹಿತಕ್ಕಟ ಇದಾರೊ ಕಲಿಗಣವರಂ ಖಂಡೆಯದೊಳೆಂದು ಹೊಡೆದ ||
ತುಂಡವೆನಲಿದೆ ಶಿವನ ಭಕ್ತವಧೆಯಾದುದಿದ |
ಖಂಡಪರಶುವೆ ಬಲ್ಲನೇನಾಯ್ತು ಫಡಫಡಾ |
ಗಂಡರಾವಲ್ತೆ ಮೀಱಿದೊಡೆ ಕೈಲಾಸಮಂ ಸೂಱೆಯಂ ಕೊಂಬೆವೆನುತೆ || ೨೦

ಸೂರರಾಧೃತಕಿರಣಸಂಗದಿಂ ನಿಜಹೃದಯ |
ವಾರಿಜಮನಲರಿಸುತೆ ನಡೆದು ರಾಜಾಲಯ |
ದ್ವಾರದೊಳು ನಿಂದು ನಿಶ್ಚಯಿಸಿ ಸರ್ವರ ಯಥಾಕ್ರಮದಿಂದ ಬೀೞ್ಕೊಡುತ್ತ ||
ವಾರುವಂಗಳನಿೞಿದು ಚೋಳಭೂಮೀಶನ ಕು |
ಮಾರರರಮನೆಯ ಹೊಕ್ಕಿರಲಿತ್ತಲತ್ತಲಾ |
ಪೌರಜನಮಾರುಂಡಮುಂಡಮಂ ಕಂಡು ಕಡುಮೆಱುಗಿ ನುಡಿಯುತ್ತಿರ್ದರು || ೨೧

ಅಂದು ಭಕ್ತನ ಬಡಿದ ಮಾರುಡಿಗೆಯಾ ನಾಚಿ ।
ತಂದೆಯಂ ನೀಗಿ ಬತ್ತಲೆಗ ಸವಣರ್ ಕೆಟ್ಟ ।
ರೊಂದಲನ್ಯಾಯಮೆಲೆ ನಾಥ ಚೋಳಂ ಬಿಜ್ಜಳಂ ಬಳಿಕಲುದಯಭೂಪಂ ॥
ಮುಂದುಗೆಟ್ಟಳಿದರಿಂತಲೆ ನಿಮ್ಮ ಭೂಮೀಶ ।
ನಿಂದುಧರಭಜಕನಿಂದೀಶಿವದ್ರೋಹಮೆ ।
ತಂದುದಿದಕೇಳಲೇಂಗೆಯ್ವನೋ ಶಿವಶಿವ ಮಹಾದೇವಯೆನುತಿರ್ದರು ॥ ೨೨

ಈವಿಧದೊಳಖಿಳಜನಮಳಲುತಿರಲಿತ್ತಲಿ ।
ನ್ನೀವೇಳ್ವೆನತ್ತಲವರಮ್ಮನಿರ್ದಂಗಣದ ।
ತಾವಿನೊಳು ಸುತನ ಕಾಣದೆ ಹೆದಱಿ ನಾಲ್ದೆಸೆಗಳಂ ನೋಡಿ ಹಮ್ಮೈಸುತ ॥
ಜೀವನವನುಳಿದ ಘಟಸಹಿತ ಪೊಱಮಟ್ಟುಶೋ ।
ಕಾವಸ್ಥೆಯಿಂದೆ ಪೆಸರಂ ಪಿಡಿದು ಶಂಕರನೆ ।
ಯಾವೆಡೆಗೆ ಪೋದೆ ಮಗನೇ ಮಗನೆ ಯೆನುತೆ ಪರಿದಾಡಿ ಕರೆಯುತ್ತಿರ್ದಳು ॥ ೨೩

ನಾರಿ ಕಂಗೆಟ್ಟು ಬಾಯ್ಬಿಡುತಿರ್ದೊಡಿವಳಾಕು ।
ಮಾರಕನ ತಾಯಲ್ಲದಿರಳಿದಂ ಕಾಣುತಾ ।
ಮಾರುಮಕಟಾ ಜೀವಮಂ ಕೊಂಡು ಬದುಕಬಹುದೇ ಶಿವಂ ಬಲ್ಲನೆನುತೆ ॥
ಪೌರಜನನಿಂತೆಂದುದೆಲೆಯಮ್ಮ ನೀನದೇಂ ।
ಕಾರಣಂ ಪಂಬಲಿಪೆಯೆನಲೆನ್ನ ಕಂದನಿಂ ।
ತೀರಾಜಪಥದೆಡೆಗೆ ಬಂದನಾತನನರಸಿ ಕಾಣೆನಯ್ಯೋ ಎಂದಳು ॥ ೨೪

ಮುಂದುಗೆಟ್ಟಳಲುವಾಕೆಗೆ ಕೆಲಂಬರು ಪೇಳ್ದ ।
ರಿಂದೀಗಳರಸುಗುದುರೆಯ ಪದಖುರಾಗ್ರಹತಿ ।
ಯಿಂದೊರ್ವ ಸುತನಳಿದನದೆ ನೆರವಿಯೆನೆ ಕೇಳಿ ಹಾ! ಮಹಾದೇವಯೆನ್ನ ॥
ಕಂದನಂ ಕಲ್ಪಕುಜದಂದನಂ ವಿಮಲಗುಣ ।
ವೃಂದನಂ ಸಾಕ್ಷಾತುನಂದನನನುವಿಚಾರ ।
ದಿಂದಾವ ಕೊಂದನೋ ಎಂದು ಪರಿದಾಜನಂ ನಿಂದಲ್ಲಿಗೈತಂದಳು ॥ ೨೫

ಮುತ್ತಿದ್ದ ಜನಮನುರೆ ಬಗೆದೊಳಪುಗುತ್ತಲಾ ।
ನೆತ್ತಱಿಂ ರುಂಡಮಂ ಮುಂಡಮಂ ಕಂಡು ಹಾ!
ಮತ್ತನುಜ! ಹಾ ಕಂದ! ಹಾ ಮುದ್ದುಮಗನೆ! ಹಾ! ಹಾ! ಕೆಟ್ಟೆನೆಂದೊಱಲುತೆ ॥
ಎತ್ತಿಕೊಂಡಾತಲೆಯನೆ*ರ್ದೆಯ ಗುಂಡಿಗೆಯೊಳಮ ।
*ರ್ದೊತ್ತಿ ಶಿವಧೋಯೆಂದು ತನುವನಿಳೆಗೀಡಾಡಿ ।
ಮತ್ತೆಬ್ಬಿ ಬಿಬ್ಬಿ ಹೊರಳುತ್ತೆ ದುಃಖದ ಕಡಲೊಳೀಸಾಡುವಂತಿರ್ದಳು ॥ ೨೬

ತೋಱಿದ ಜಲಂ ತಾಯ ತಲೆವೆಟ್ಟನಲ್ಲಿ ಕಾ ।
ಲೂಱಿ ಕುವರನ ಕಂಧರಸ್ಥಲದೊಳಾಕುದುರೆ ।
ಯೇಱಿದನ ಕರವಾಳಿನೊಳು ಮಿಂಚುವವನ ಕಂಠದ ಸರಂ ಪರಿದು ಬಿೞ್ದು ॥
ಬೇಱೊಂದು ತಾವಿನೊಳು ಗಾಲಿವರಲುಗಳಾಗೆ ।
ಚೀಱುವಂಗನೆಯಬ್ಬರದೊಳೊಡವೆ ಸಿಡಿಲಱುವ ।
ಮಾಱುದನಿಯವಳ ಕಣ್ಣೊಳು ಕೞೆಯೆ ಮೞೆ ಶೋಕ ವರ್ಷಮತುವೆನಲೆಸೆದುದು ॥ ೧೮

ಎಲೆ ಮಗನೆ ನಿನ್ನಯ ವಿಲೋಚನಂ ಕಂದಿದುವೆ ।
ಸಲೆ ಶಶಿಯ ಪೋಲ್ವ ಮುಖವೆಯ್ದೆ ಕೊರಗಿತ್ತು ಮಂ ।
ಗಲಸಾವ್ಯವಱತುದೇ ಗುರುಕೃಪೆಯದೇನಾಯ್ತು ಸಕಲಕಾವ್ಯಂಗಳೊಳಗೆ ॥
ಸುಲಭಸಾರಿಗಳು ಪುತ್ರನೆ ಮೋಹತಮವೆಂಬ ।
ರೊಲವಿನೆಂದೀಭೂಮಿಯಿರಲು ಸಾಕೇ ತುರಗ ।
ದಲಘುಚರಣಕ್ಕೆ ಬಲಿಯಾದೆಲಾ ಗ್ರಹಬಲಂ ತಪ್ಪಿತಕಟಾಯೆಂದಳು ೧೮

ಜಾಣ ನಂಬ್ಯಣ್ಣನಣುಗನ ಮೊಸಳೆ ನುಂಗಲಾ ।
ಯೇಣಲೋಚನೆ ನಂಗೆಯಱುವಂತೆ ಕಿನ್ನರನ ।
*ಪ್ರಾಣವಂ ಶಂಭು ತನ್ನೊಳಗುಮಾಡಲು ಬಸವರಾಜನೊಱಲುವ ಮಾಱ್ಕೆಯಿಂ ॥
ಮೇಣು ವೃಡಶಿಶುವಿಗಮ್ಮವ್ವೆ ಶೋಕಿಪ ತೆಱದಿ ।
ಮಾಣದಂಗನೆ ಮಕರಕೇತನಧ್ವಂಸಿಯ ।
ಕ್ಷೀಣಭಕ್ತರ ನಿಧಾನವೆ ಮರಣರಹಿತ ಸ್ಮರಿಸಲಾರೆನೆಂದತ್ತಳು ॥ ೧೯

ಚೀಱಿ ಬಿದ್ದೊಱಲಿ ಪಿಂದಕ್ಕಱಿದ ತನ್ನ ಸುತ ।
ನಾ ರುಂಡ ತಾಣದೊಳಗಾರುಂಡವಂ ಬೈತು ।
ನೀಱನೇ ! ಸುಕುಮಾರನೇ ! ಚೆಲ್ವಕಂದ ! ಹಾ ! ಹಾ ! ಕೆಟ್ಟೆನೆಂದೊಱಲುತ ॥
ಸೀಱುತಳವೞಿಯುತ್ತ ಸರ್ವಗೆ ಕರುಣವಂ ।
ತೋಱುತರಮನೆಯ ಬಾಗಿಲ್ಗಾಗಿ ನಡೆದು ನೆರೆ ।
ಗಾಱಾಗಿ ಸತ್ಯೇಂದ್ರಚೋಳನರನಾಥ ಶಿವಧೂಯೆಂದು ಮೊಱೆಯಿಟ್ಟಳು ॥ ೨೦

ಈಪರಿಯ ದುಃಖವಾರ್ಧಿಯ ಮೊಱೆಯ ಕರ್ಣಾಧ್ವಾ ।
ರಾಪೂರ್ಣಮಪ್ಪಂತೆ ಕೇಳಿ ಶಿವಶಿವಯೆನುತ ।
ಭೂಪಾಲನಿದು ಶಿವನ ಭಕ್ತರ್ಗೆ ಬಂದ ವಧೆಯಪ್ಪುದೆಂದಱಿದು ನೊಂದು ॥
ಕಾಪಾಲಿಯೇ ಬಲ್ಲನಿಂತಿದಱ ಬಗೆಯ ನಾ ।
ವೇ ಪರೀಕ್ಷಿಸಬೇಹುದೆಂದಧಿಕರೋದನಾ ।
ಲಾಪವೆಲ್ಲಿಯದೆಂಬ ಮಾತ್ರಕ್ಕೆ ಬಂದು ದೌವಾರಿಕಂ ಕೈಮುಗಿದನು ॥ ೨೧

ಜೀಯ ಬಿನ್ನಪವೆಂದ ತಲೆಯ ಪಿಡಿದೊರ್ವಬಳೆ |
ಕಾಯಜವಿನಾಶನಂ ನೆನೆದು ಮೊಱೆಯಿಟ್ಟಂಜಲಿ |
ಬಾಯಬಿಡುತ್ತೈದಳೆ ದಯಾಭರಿತಯೆಂದು ನೃಪನಾಣತಿಯೊಳಾಸೇವಕಂ ||
ಆಯುವತಿಯಂ ಸಭಾಮಂಟಪಂಬುಗಿಸಲಾ |
ರಾಯನಿದಿರೊಳಗೆ ಕಂದನ ತಲೆಯ ತಂದಿಟ್ಟು |
ಹಾಯೆಂದು ಬಿದ್ದೊಱಲುವಾಕೆಯಂ ಕರುಣದಿಂ ಬೆಸಗೊಂಡನಾ ಭೂಪನು || ೩೨

ಆರು ನೀನೆಲೆ ತಾಯೆ ಪಱಿದಿರ್ದ ತಲೆಯಾತ |
ನಾರು ಚೆಲ್ವಣುಗನಂ ಕೊಂದ ದುಷ್ಕೃತಕರ್ಮಿ |
ಯಾರು ಶಿವಶಿವ ಪೇಳ್ವುದೆನಲೆದ್ದು ಭೂಪಂಗೆ ಕರಕಮಲಮಂ ಮುಗಿಯುತ ||
ನಾರಿ ತೊಡಗಿದ ಕೋಟಿದುಃಖದಿಂ ನುಡಿದ ನುಡಿ |
ಕೂರಂಬಿನಂದದಿಂ ಹೃದಯಮಂ ತಟ್ಟುಗಿಯು |
ಲಾರಾಯನಾಲಿಸುತ್ತಿರೆ ಸಭಾಜನವೈದೆ ಮಲಮಱುಗಲಾಯೆಂದಳು || ೩೩

ದೇವ ನಿಮ್ಮಯ ಪಿರಿಯ ಪಟ್ಟಣದ ಸಕಲವಣಿ |
ಜಾವಳಿಗಳೊಳಗಾದ ಮಾರ್ತಂಡನಾಮಯುಹೆ |
ಶೈವಸಂಪನ್ನನಾದಾಸೆಟ್ಟಿಯಖಿಳಸಂಪತ್ತಿಯಿಂ ಶಿವಭಕ್ತರ ||
ಸೇವೆಯೇ ಪ್ರಾಣವಾಗಿಹನು ತತ್ಸತಿಯಾನು |
ಜೀವಸುತೆ ಗಂಡುಮಕ್ಕಳನಱುವರಂ ಪಡೆದೆ |
ನಾನಶೇಷದ ಭಾಗ್ಯಭೂಚಕ್ರವರ್ತನೆಯ ಸಿರಿಯೆನಲು ಸುಖವಿರ್ದೆನು || ೩೪

ಎನ್ನ ಪತಿ ಮಾರ್ತಂಡಮಣಿಜಾತನೊರ್ಮೆ ಸಂ |
ಪನ್ನಮಹ ಭೈತ್ರದೊಳು ವಸ್ತುಗಳ ತನಗುಳ್ಳ |
ಪೊನ್ನೆಲ್ಲಮಂ ತುಂಬಿ ಜಲಮಾರ್ಗದೊಳು ಪೋಪ ಕಾಲದೊಳು ಪಡಗೊಡೆಯಲು ||
ಮುನ್ನೀರೊಳಸ್ತಮಯವಾದನಾರ್ಜಿಸಿದ ಸಿರಿ |
ತನ್ನಯ ತವರ್ಮನೆಯ ಪುಗುವಂದದಿಂ ಮುಳುಗ |
ಲಿನ್ನೆಮ್ಮ ದೌರ್ಭಾಗ್ಯದಗ್ಗಳವ ದುಃಖಮಂ ಚಿತ್ತೈಸು ಚೋಳಭೂಪ || ೩೫

ಲೋಕಕ್ಕೆ ಕಣ್ಣಾಗಿ ಬಾಳ್ವೆಮ್ಮ ಮಿತ್ರನಾ |
ನಾಕಸ್ಥನಾದನೆಂದಾಪ್ತರಱಲುತ್ತಿರ್ದ |
ರಾಕುಮಾರಕರಱುವರಂ ನೋಡಿ ಜೀವವಿಡಿದಿರಲು ಪತಿಯಱಿವಂದಿನ ||
ಆಕಾಲಕೊದವಿರ್ದ ಮೂಱುತಿಂಗಳ ಗರ್ಭ |
ನೂಕಿತ್ತು ಬಱಿಕದಧಿಕ ದಾರಿದ್ರ್ಯವಡಸಿತ್ತು |
ಭೂಕಾಂತ ಕೇಳೈಯ ಮೇಲೆ ಬಱಿಸಿಡಿಲಂತೆ ಬರ್ಪೆನ್ನ ಬಹುದುಃಖವ || ೩೬

ಆಱುಮಕ್ಕಳುಗಳೆಲ್ಲಂ ಮಡಿದರ್ಕೆಯು ಕೇ ।
ಳಾಱುತಿಂಗಳ್ ದಿನಕೆಯೊರಲಿ ಬಾಯ್ವಿಡುತಿರ್ದೊರ್ ।
ಡಾಱುಮೊಗನ್ನೈಯುನೆನ್ನಯು ಕನಸಿನೊಳ್ ಬಂದು ತಿರುಕೊಳಪಿನಾಚಿ ಕೇಳು ॥
ನೀಱನಹ ಸುಕುಮಾರನುದಯಿಪಂ ನಿನಗವಂ ।
ತೋಱಿಪಂ ಮುಕ್ತಿಯಂ ಚಿಂತಿಸದಿರೆನಲು ನಲ ।
ವೇಱಿ ಬೆಸಲಾದೆನೀಪುತ್ರನಂ ನಿರ್ಮಲಚರಿತ್ರನಂ ಶುಭಗಾತ್ರನಂ ॥ ೪೭

ಕಡಲ ಮಧ್ಯದೊಳಾತ್ಮನಱಿದ ಚಿಂತೆಯು ಧನಂ ।
ಗಿಡಲು ದಾರಿದ್ರ್ಯಮಾದಱಲನಾಸುತರಾಱು ।
ಮಡಿದ ಬೇಗೆಯನು ಮಱಸಿದನಾಗಿ ಶಂಕರನೆನಿಪ್ಪ ನಾಮವನೆ ಕೊಟ್ಟು ॥
ಕೊಡನೀರ ಪೊತ್ತು ಪೊರೆವವಳ ನಿನ್ನಯ ಕುವರ ।
ರಡರಿ ಬಿಸದಿಪ ತುರಂಗದ ಕಾಲ್ಗೆ ಬಲಿಯು ಬಿದಿ ।
ಪಡೆದನೇ ಮುದ್ದುಮಗನಂ ಶಿವಾ ಯೆಂದೊಱಲುತಿರಲು ಭೂಭುಜನೆಂದನು ॥ ೪೮

ಮನುಚೋಳನರಿಸನೆ ರಥಾಂಗದಿಂ ಪಶುವಧೆಯು ।
ತನಯನಂ ಕರುವೂರ ಚೋಳನಿಭವರಿದ ಭ ।
ಕ್ತನಿಗೆ ತಲೆಗುಡನೇ ಪಗಲ್ಕೋಳನೀಯನೇ ಜಡೆದಲೆಗೆ ಮುಡಿದಲೆಯನು ॥
ಘನ ಭಕ್ತವಾತ್ಸಲ್ಯ ಭಕ್ತಾಂಗ ಸದ್ಭಕ್ತ ।
ಜನ ಶಿರೋರತ್ನವಣುಗನ ಮರಣವಕಟ! ಸು ।
ಮ್ಮನೆ ಪೋಗದಬಲೆ ಕೇಳೆಂದಾಗಳರಸಂ ಕುಮಾರರಂ ಬರವೇಳ್ದನು ॥ ೪೯

ಶಾತಾತಪಾದಿಸುಶ್ರೋತಾಳಿಸಂವಿನುತ ।
ಶೀತಾವನೀಧ್ರಜಾಮಾತಾತ್ಮಭೂಸುಪುರು ।
ಹೂತಾಸುರಾರಿಮುಖಮಾತಾಪ್ತಲಪನವರಭೇತಾಳವೃಂದಮಧುರ ॥
ಗೀತಾದಿವಾದ್ಯಸುವ್ರಾತಾಗ್ರನಾಟ್ಯ ವಸು ।
ರೇತೋಬ್ಜಕಾಂಬಕ ಪ್ರೇತಾಧಿಪಾಂತಕ ವಿ ।
ಧೂತಾಘಗುರುಭಕ್ತಪೂತಾತ್ಮವಂಶಾಂಬುಜಾತಾರ್ಕ ವರಶಿವ ಜಯ ॥ ೫೦

ಇದು ಸಕಲಭಕ್ತಪದಪಂಕೇಜರೇಣುವು ।
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ ।
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನಮಮಳಕರ್ಣ ॥
ಹೃದಯಮಸ್ತಕವದನಸರ್ವಾಂಗಸೌಖ್ಯಕಾ ।
ಸ್ಪದಮಖಿಳಸುಜನರ್ಗೆ ಪಂಚಾಕ್ಷರಿಯ ಮಹ ।
ತ್ತ್ವದ ಬೋಧೆಯೆಂದೋದಿದೊಡೆ ಕೇಳ್ದರಿಗಿಷ್ಟಸಿದ್ಧಿ ಸರ್ವರಿಗಪ್ಪುದು ॥ ೫೧

# ಒಂಭತ್ತನೆಯ ಸಂಧಿ.

ಸೂಚನೆ ॥ ಅಮ್ಮನಣುಗನ ಪೞಿಗೆ ಸುತನ ಕೊರಲಂ ಪಱಿದ ।
ಸಮ್ಮಂಧಿಕರಿದು ತಲೆಗಳೊಳಿತ್ತು ನಿಜಶಿರವ ।
ನುಮ್ಮಹದಿ ಪಡೆದಷ್ಟಮೂರ್ತಿಯೊಡನೈದಿದಂ ಕೈಲಾಸಕಾ ಚೋಳನು ॥

ಅಂಗಭವನಿಂ ತ್ರಿಪುರದಿಂ ಭಸಿತರುದ್ರಾಕ್ಷೆ ।
ಸಾಂಗವಾದುವು ನಿನಗೆ ಕಂತೆ ಕಟ್ಟಿಗೆ ಕಪ್ಪ ।
ರಂಗಳನಿಭಾಸುರನ ವಿಷ್ಣುವಿಧಿಗಳ ಸದೆದು ಬಲ್ಪಿನಿಂ ಸೆಳದುಕೊಂಡೈ ॥
ತಿಂಗಳಿಂದಿತ್ತಿತ್ತಲಾದ ಜಡೆ ಭಕ್ತಹೃದ ।
ಯಾಂಗಣದ ಸುಳುಹು ಗಣಸಂಸಾರಿಯುಪ್ಪರ್ಧ ।
ಜಂಗಮಂ ನಿನ್ನೀನುಹತ್ತಿಗೆಣೆಯಲ್ತು ಮರಗುಂಡವರಮಲ್ಲಿನಾಥ ॥ ೧

ನೈಜಕರ ಮೀಱದೆ ಕರೋಟಿಮಾಲಾಧರನ ।
ಪೂಜೆಯಂ ಮಾಡಿ ಬೋಜಿಮುಟ್ಟು ಕುಮರರು ನಡೆದು ।
ರಾಜಸಭೆಯಂ ಪೊಕ್ಕು ಕರಕಮಲಮಂ ಮುಗಿಯೆ ನೃಪನ ಹೃದಯದೊಳುಗ್ರದ ॥
ಬೀಜವಗೆದೋಱುತಿರಲೇನಿದೆಲೆ ದುಷ್ಕೀರ್ತಿ ।
ಮೂಜಗವ ಪರ್ಬುವಂತೀಜವ್ವನದ ಸಿರಿಯು ।
ತೇಜದಿಂ ಶಿವಭಕ್ತನಂ ಕೊಂದಿರೆಂದು ಘುಡಿಘುಡಿಸಿ ಬೞಿಕಿಂತೆಂದನು ॥ ೨

ಚಿಲುಪಾಲಿನೊಳು ವಿಷಂ ತವರಾಜನೊಳು ಕೃಪೆ ।
ಸುಲಲಿತಸುಮುತ್ತಿನೊಳು ಭಿನ್ನ ಪೊಪ್ಪುವ ಗುಣಾ ।
ವಲಿಯಲ್ಲಿ ಲೋಭವೆಸೆದಿಹ ಸತ್ಯದೊಳಗನೃತಮರೆವಿಱದ ನಱುಗಂಪಿನ ॥
ಅಲರಿನೊಳು ಪುೞು ಶಿವಾಚಾರದೊಳು ದುರ್ನೀತಿ ।
ನೆಲಸಿದಂತೊಗೆದಿರ್ದೈ ಮತ್ಕುಲದೊಳಂದರಸ ।
ನೊಲೆಯೆ ಮಣಿಮುಕುಟವದು ಹೃದಯಕೋಪಾಗ್ನಿ ತಲೆದೋಱಿತೆನಲಿಂತೆಂದನು ॥

ಚಾರುಶಶಿಧರಭಕ್ತಪದನಖಂ ಪೋಪಲ್ಲಿ ।
ವಾರಿಜಭವಾಂಡಕೋಟಾಕೋಟಿ ಮಡಿವುದು ತು ।
ಷಾರಕಣಕೋಟಿಯಂಶಕೆ ಸಾಟಿಯಲ್ತು ಗಡ ನಿಮ್ಮಱಿವು ತನ್ಮರಣದ ॥
ಓರಗೆಯೆನಲ್ಕೆ ನರಕಂ ಪೋಗದಿಂದೀಕು ।
ಮಾರಕನ ತುರಗಖುರಹತಿಯಿಂದ ಕೊಂವಾತ ।
ನಾರೆಂಬ ಮಾತ್ರಕ್ಕೆ ಮಿತವಚನನಕ್ಕಱಿಂದಯ್ಯನೊಡನಿಂತೆಂದನು ॥ ೪

ಜೀಯ ನಾಮಿರ್ವರುಂ ವೈಹಾಳಿಯಂ ಪೋಗಿ ।
ರಾಯರಾವುತರೊಡನೆ ಬರ್ಪೆಡೆಯೊಳೀಕ್ಷಿಸು ।
ತ್ತೀಯಣುಗನೆಡಹಿ ಬಿೞ್ದೊಡೆ ದಾಂಟಿತನುಜನಶ್ವಂ ಮತ್ತುರಂಗಖುರದ ॥
ಗಾಯದಿಂ ಮಡಿದನದಱಿಂ ಬಂದುದೆನಗಿಂದ ।
ಪಾಯಮೆನ್ನಯ ತಲೆಯನರಿವುದೇ ಧರ್ಮವೆಂ ।
ದಾಯತಿಕೆಯಿಂ ಪ್ರಮಾಣದಪ್ಪದಾಡಿದಂ ಮಿತವಚನನಾಭೂಪಗೆ ॥ ೫

ಆದೊಡೀಪಱಿಗೆ ಮಿತಿವಚನನುತ್ತಮಶಿರ ।
ಶ್ಛೇದನಂ ಮಾಡಬೇಕೆಂದರಸ ನುಡಿಯಲಾ ।
ಹ್ಲಾದದಿಂ ಮಂತ್ರಲಕ್ಷಂ ತನ್ನ ಕರಕಮಲವಂ ಮುಗಿದು ಬಿನ್ನವಿಸಿದಂ ॥
ಆದರಿಸು ಬೊಪ್ಪಯ್ಯ ಯೆನಗೆಯಣ್ಣಂಗೆ ಸಂ ।
ಪಾದನೆಗಳುಂಟನೃತವೆನ್ನ ಜಿಹ್ವೆಗೆ ಪೊರ್ದ ।
ಭೂದೇವಿಯುಂ ಬಿಟ್ಟಗಾಸೀಯೆನಾಂ ಭೋಗಿಯೆಂದು ಫಣಿಪತಿ ಮುಳಿಯನೆ ॥ ೬

ಭೂಪ ಚಿತ್ತೈಸಯ್ಯ ತಾಪಸರು ದಾರುವನ ।
ದಾಪವಿತ್ರಸ್ಥಲದೊಳೋಪ ತಮ್ಮಾಗಮಾ ।
ಲಾಪದಿಂ ತಿಳಿದಖಿಳಪಾಪಕ್ಕೆ ಪುಸಿಯೊಂದನೇ ಪರೀಕ್ಷಿಸಿ ತೊಗಲು ॥
ಆಪಾತಕಂಗಳಂ ತಾಂ ಪೞಿದುದನೃತಮೆನ ।
ಲೇಪರಿಯ ತಪ್ಪುವೆಂ ಹಾ ಪರೇತಾಧಿಪತು ।
ಲಾಪಾದಪಾಲಂಬನಾಪಘನನಪ್ಪನೇ ಕಾಪಾಲಿಯೇ ಬಲ್ಲನು ॥ ೭

ಇಂದು ವೈಹಾಳಿಯಂ ಪೋಪಲ್ಲಿಯಣ್ಣ ನಿಂ ।
ನಿಂದೆ ಬಂದಪರಾಧಮೆನ್ನದೆಂದಾಡಿದಂ ।
ಬಂದಹಿತಮಾದ ತಪ್ಪೆನ್ನದಿದು ನಿಶ್ಚಯಂ ಶಿವಭಕ್ತಿಶರಧಿಯಪ್ಪ ॥
ಕಂದ ಶಂಕರನ ಶಿರಕೆನ್ನರಿದ ತಲೆರನ್ನ ।
ದಿಂದ ಸತ್ಕರಿಸಬೇಕೈಯ ಬೊಪ್ಪಯ್ಯ ನೀಂ ।
ಸಂದೆಗಂಮಾಡಲನುಚಿತವೆನ್ನಮಸ್ತಕವ ಪಱಿದು ಪಱಿಗೀಯೆಂದನು ॥ ೮

ಎಂದು ಕುವರಂ ಹರಣದಾಸೆಯಂ ಬಿಟ್ಟು ಧೃತಿ ।
ಯಿಂದಾಡೆ ಮನದೊಳಗೆ ಪರಿಣಮಿಸಿ ತಪ್ಪಿವಗೆ ।
ಬಂದುದಂ ತಿಳಿದು ಸತ್ಯೇಂದ್ರನುರೆ ತನ್ನ ಜೀವಸ್ವರೂಪದ ಮಂತ್ರಿಯ ॥
ಅಂದುಗ್ರದಿಂ ನೋಡುತಿವನ ತಲೆಯಂ ಪೊಡೆದು ।
ತಂದು ಪೞಿಗೀಯೆನೆ ಹಸಾದವೆನುತರಮನೆಯೊ ।
ಳಿಂದುಧರಪೂಜೆಯಂ ಮಾಡೆಂದು ಸುಕುಮಾರನಂ ಕಳುಪುತಾಸಚಿವನು ॥ ೯

ಕಳುಪಿ ಸುಕುಮಾರನಂ ಪತಿದ್ರೋಹಿ ಸನ್ಮಂತ್ರಿ ।
ಗಳಗಳನೆ ನಡೆದು ತನ್ನಾಲಯಂಬೊಕ್ಕು ನಿ ।
ರ್ಮಳರಾಜಪುತ್ರನೇ ಕಟ್ಟೊಡೆಯನವನ ತಲೆಯಱಿವುದಕೆ ಮುನ್ನ ತಾನೆ ॥
ಅಱಿವೆನೆಂದೆನುತ ಸತ್ಯೇಂದ್ರನ ಮವೇಭನಿ ।
ರ್ಮಳಭಸಿತಗಾತ್ರನಲಗಂ ಪಿಡಿಯೊಳಳವಡಿಸಿ ।
ತಳತಳಿಸಿ ತನ್ನ ಕಂಠಕೆ ಹೂಣಿಸುತ್ತ ಶಿವಶಿವ ಕೊರೆಯಲನುಗ್ಗೈದನು ॥ ೧೦

ಬಿಡೆ ಚೋಳರಾಯನ ಶಿರಃಪ್ರಧಾನಂ ಶಿಖಿಯು ।
ಪಿಡಿದನೆರಡಿಲ್ಲದಿಹ ಪತಿದ್ರೋಹಿಯೆಂಬಂತೆ ।
ಜಡಿದು ಪೂಣಿಸಿ ಕೈಯ ಖಡ್ಗದೊಳು ಘರಿಘರಿಲನರಿದನಾ ಮಸ್ತಕವನು ॥
ಒಡೆಯನಾಜ್ಞೆಯ ಮೀಱಿದಾಣ್ಮನಣುಗನ ತಲೆಯ ।
ಕಡಿಯಲಾಱದೆ ಸತ್ಯವಂ ಕುಱಿತು ತನ್ನ ತಾಂ ।
ಮಡಿದನೈ ಮಾಝುಭಾಪೆನುತ್ತ ಕೀರ್ತಿಸಿ ಮಱುಗುತಿರ್ದರೆಲ್ಲಾ ಸುಜನರು ॥ ೧೧

ಶ್ರೀಕಶ್ಯಪನ ಕಾಂತೆ ಶಿವನ ಲೋಚನಸೂರ್ಯ ।
ರಾಕೇಂದುಗಳಿಗೆಱಗಿ ವಿನತೆಯಾದಳು ಪಡೆದ ।
ಸ್ತೋಕಾಭಿಧಾನವಂ ಖಗರಾಜನೆಂದಿಡಲವಂ ತನ್ನ ಪಸರೊಡೆಯುತ ॥
ಆಕರಿಪ ರಾಹುಕುಲವಂ ಕೊಲ್ವರೆಂತಂತೆ ।
ಭೂಕಾಂತರಿಪುಗಳಂ ತಡೆಗಡಿಯದೊಡೆಯನ ಮ ।
ಹಾಕುಮಾರನ ಕೊಲ್ಲಲಾಱೆನೆಂದಱಿದ ಮಂತ್ರೀಶನೇಂ ಕೃತಪುಣ್ಯನೋ ॥ ೧೨

ಎಂದು ಸರ್ವರು ಮಱುಗುತಿರಲತ್ತಲಿತ್ತಲೈ ।
ತಂದು ಚೋಳನ ಕುಮಾರಂ ಭಸಿತರುದ್ರಾಕ್ಷಿ ।
ಯಿಂದಲಂಕರಿಸಿ ಕಾಪಾಲಿಯುಂ ಶೂಲಿಯುಂ ದಕ್ಷಯಜ್ಞಾಪಹರನಂ ॥
ಹೊಂದದುತ್ಸಾಹದಿಂ ತಲ್ಲಿಂಗವಂ ನೋಡಿ ।
ಕುಂದದಿರ್ಪಷ್ಟವಿಧಪೂಜೆಯಂ ಮಾಡಿಯಾ ।
ನಂದದಿಂದೊಡವೆರಸಿ ಕೊಂಡಾಡಿದಂ ಮಂತ್ರಲಕ್ಷ ಶಂಕರನ ಪಕ್ಷಂ ॥ ೧೩

ಮಾದೇವನಂ ಕುವರನರ್ಚಿಸುತ ಸನ್ನದ್ಧ ।
ನಾದ ಕಾಲದೊಳಿತ್ತಲರಸುಗುವರನ ಶಿರ ।
ಛೇದನಂ ಗೆಯ್ಯಲಾಣತಿಯಿತ್ತವಾರ್ತೆಯಂ ಕೇಳ್ದು ಪರಿತಂದವಮ್ಮನ ॥
ಪಾದಕ್ಕೆ ನಮಿಸಲಡಿಗಡಿಗೆ ಬರೆಸೆಳೆದಪ್ಪಿ ।
ಮೋದದಿಂ ಮೊಗನೋಡಿ ನುಡಿದನೆನ್ನಯ ಕೊರಲ್ ।
ಕೊಯ್ದೊಡೆಯೊಳ್ಮೃದುವೆಡೆಯೊಳಗಮೃತವತಿ ತಾಯೆ ಪಿನ್ನನಾನೇ ಮಱೆವೆನೇ ॥ ೧೪

ಹಿಂದಣುಗರಿಲ್ಲದಾಯುಸವಟ್ಟು ಗುರುಕರುಣ ।
ದಿಂದೆನ್ನ ಪೆತ್ತು ಬಾಲ್ಯದ ಮುದ್ದು ನಡುಹರೆಯ ।
ದಿಂದೆಸೆವ ಸಿರಿಯು ನಡೆನೋಡಿ ದಣ್ಣನೆ ದಣಿವ ಕಾಲದೊಳು ನುಡಿದಪ್ಪಿಗೆ ॥
ತಂದೆ ತಾನೇ ಕೊರಲ್ಗೊಯಿಸಿದಪನೆಂದು ನೀಂ ।
ನೊಂದೊಡೀ ಧರ್ಮವತಿ ಪಿತೃಪತಿ ಮಹೋಗ್ರನಿಂ ।
ಬೆಂದಂದಮಪ್ಪುದದಱಿಂ ಮಱುಗಬೇಡಮೆಲೆ ತಾಯೆ ಚಿತ್ತೈಸೆಂದನು ॥ ೧೫

ನುಡಿದ ಕುವರನ ತೆಗೆದು ತಕ್ಕೈಸಿ ಕೇಳೆನ್ನ ।
ಕಡವರಮೆ ಚಿಂತೆಯೆನಗೇಕೆಯೆನ್ನಾಣ್ಮನು ।
ಗ್ಗಡದ ಸತ್ಯವ ಕುಱಿತು ಭಕ್ತಂಗೆ ನಿನ್ನ ತಲೆಗುಡುವೆಡೆಯೊಳೆನ್ನ ಚಿತ್ತಂ ॥
ಪಡೆದ ಕಂದನನಾಪ್ತರೊಡನೆ ತವರೂರ ತಾ ।
ಯೆಡೆಗಟ್ಟುವಂದವೈ ಪೆತ್ತಬ್ಬೆ ಪಾರ್ವತಿಯು ।
ತೊಡೆಯೇಱಿ ಮುದ್ದುಗುಡುಪೋಗೆಂದು ಬೀೞ್ಕೊಡುವಮಾತೆಯೇಂಕೃತಕೃತ್ಯೆಯೋ ॥

ಮನಶುದ್ಧವಹ ನಿಂಬಿಯಕ್ಕನಂ ಹಾಸವಾ ।
ನನಧ ಬಲ್ಲಯ್ಯಂಗಳರಸಿಯುಂ ದೇಶದೇ ।
ಶನಿಕಾಯದೊಳ್ ವಿನುತ ಚೀಲಾಳನಂ ಮನವನಿತೆಯುಣ್ಣಲದೇವಿಯುಂ ॥
ನೆನೆಯುತಿವರಾದಿಲಿಂಗಾರ್ಚನಾಶಕ್ತಿಯಿಂ ।
ತನುಜನಱಿವಂ ಲೆಕ್ಕಿಸದ ಮಾೞ್ಕೆಯೇ ಮಂತ್ರ ।
ವೆನುತಮೃತವತಿಯೆ ಬೀೞ್ಕೊಟ್ಟಳಂದಾಕುಮಾರನ ಮೋಹನಾಕಾರನಂ ॥ ೧೭

ಸುತನಿಂತು ವಧ್ಯಸನ್ನದ್ಧನಾಗುತ್ತೆ ನಿಜ ।
ಪಿತಗೇಱಗಲಿವನ ತಲೆಯರಿವುದಕೆ ಮಂತ್ರಿಗಾ ।
ಣತಿಯಿತ್ತವೇಗೆಯ್ದನೆನೆ ಜೇಯ ನಿಮ್ಮಾಜ್ಞೆಯಿಂ ವಿಱಿದೀಕುವರನ ॥
ಹತಿಸದೀಶ್ವರಪೂಜೆಗೈದು ಬಹುದೆಂದು ಕಳು ।
ಪುತೆ ಶೀಘ್ರಗತಿಯೊಳಾಲಯಕೈದಿ ಕಂಧರ ।
ಕ್ಕತಿಮುಳಿದು ನಿಜಮಸ್ತಕಂದರಿಮುಕೊಂಡಱಿದನವನೆಂದರಾಸಭ್ಯರು ॥ ೧೮

ಎಂದೊಡದಕೇನು ನಾವಿರ್ದಪೆವೆನುತ್ತಲ್ಲಿ ।
ಮುಂದಿರ್ದ ಸಂದಾಯಿಯೆಂಬ ಲೆಂಕನ ಮುಖವ ।
ಮಂದಹಾಸದಿ ನೋಡಿ ನೀನೀಗ ಮಂತ್ರಲಕ್ಷನ ಶಿರೋಬ್ಜವನು ಪಱಿದು ॥
ತಂದು ಶಂಕರನ ತಲೆಗೀವುದೈ ಪೞಿಯನಾ ।
ನಂದದಿಂದೆನೆ ಹಸಾದಂ ಜೀಯಯೆಂದು ನೃಪ ।
ನಂದನನ ತೋಳ್ಪಿಡಿದು ಜಡಿದು ಖಂಡೆಯದೊಡನೆ ನಡೆದನಾಹಾ ಭೃತ್ಯನು ॥ ೧೯

ಪೇೞ್ ನರಮೃಗರಾಜಚರ್ಮಾಂಬರನ ಭಕ್ತ ।
ಚೋೞನಣುಗನ ತಲೆಯು ಹೊಡೆಯಲ್ಕೆ ಬೀದಿಯೊಳು ।
ತೋೞ ಪಿಡಿದುಯ್ವಾಗಳಜನಸಂಬಂಧ ಲಿಖಿತಪ್ರಮಾಣದ ಜೇವಿಯೋ ॥
ಆಳೋಚನದಿನಣ್ಣ ನೀಂ ಬಂದ ತಪ್ಪ ವೈ ।
ಹಾಳಿಯೊಳಗೆನ್ನದೆಂದಾಡಲಿಂತಾಯ್ತೆಂದು ।
ಗೋೞಿಟ್ಟು ಪುರಜನಂ ಪರಿಜನಂ ಶಿವಶಿವಾಯೆಂದು ಮಱುಗುತ್ತಿರ್ದರು ॥ ೨೦

ಬಱಿದೆ ಸೈಂಧವನೃಪಂ ಬರಲೇಕೆ ಸಭೆಯೊಳಿಳೆ ।
ಯೊಱೆಯುಗಾಣ್ಕೆಗೆ ತುರಂಗಗಳೇಕೆ ವಸುಧೇಶ ।
ನೆಱಕದಿಂ ಕುವರರ್ಗೆ ಕುಡಲೇಕೆ ರಾಗದಿಂ ಮೈಹಾಳಿವೋಗಿ ಸೊಬಗ ॥
ಮೆಱೆವ ಕೋಟಲೆಯೇಕೆ ಜವ್ವನಿಗನಶ್ವದಿಂ ।
ಕಿಱುಗೂಸು ಮಡಿಯಲೇಕಾಬಸವರಾಜನೇ ।
ಅಱಿಪಿದಱಾದಿಯಂ ಕುವರಂಗಿಂತಾಯ್ತೆಂದು ಮಱುಗಿದರು ಸುಜನರ್ಕಳು ॥ ೨೧

ಆಸೆಱಿಂ ನಡೆದು ಬಹಿರುದ್ಯಾನದೊತ್ತಿನೊಳ ।
ಗಾಸುತಂ ತತ್ಪುರುಷಮೂರ್ತಿಯಂ ನೋಡಿ ಪ ।
ದ್ಮಾಸನೊಳಾಪರಬ್ರಹ್ಮಮಂ ನೆನೆದು ಕುಳ್ಳಿರಲು ಸುದಾಯಿ ಸಾರ್ದು ॥
ಓಸಱಿಸಿ ಕರವನವನಿಯೊಳುರ್ದಿ ಖಂಡೆಯವ ।
ನಾಸುರದಿ ಜಡಿದು ಹೆಡತಲೆಗೆ ಮೋಹಿಸುತೆತ್ತಿ ।
ಯಾಸುಭಟನಾರ್ದು ಸುಕುಮಾರಂಗೆ ಬಿನ್ನೈಸುತಿರ್ದನೇಂ ಬಣ್ಣಿಸುವೆನು ॥ ೨೨

ದೇವ ಚಿತ್ತೈಸಯ್ಯ ಪರಮಪಂಚಾಕ್ಷರಿಯ ।
ನೀವು ಮಱೆಯದಿರಟ್ಟೆಯಿಂ ಪಱಿದು ತಲೆ ಬೀೞು ।
ಮಾವೇಳೆಯವಧಾನವೇ ಬೇಹುದದು ದೋಷಕರಿಪಂಚವದನವೆಸಲು ॥
ಆವಚನಮಂ ಕೇಳ್ದು ನಸುನಗುತ್ತಲವೊ ಕೇ ।
ಳೈ ವರ್ಣಪಂಚಕದ ಮಂತ್ರಮಂ ಮಱೆದಾದೊ ।
ಡೇವೇಳೆಯೂವು ನುಡಿವವರಲ್ಲವೆನೆ ಜೀಯ ನುಡಿಯದಿರಲೇಕೆಂದನು ॥ ೨೩

ಶ್ರೀಮಂತ್ರಿಯೆನ್ನ ಪಿತನಾಜ್ಞೆಯಂ ಮನ್ನಿಸದೆ ।
ತಾ ಮಡಿದನಯ್ಯನಾಣತಿ ನಿನ್ನ ಲೆಂಕತನ ।
ಮಾಮೂಱ್ಕೆಯುಪ್ಪುದೆಂದೆಚ್ಚಱಿಸಲೆಲೆ ಜೀಯ ಹಾನಿಯೇಕಪ್ಪುದೆನ್ನ ॥
ಸ್ವಾಮಿಯ ನಿರೂಪಕ್ಕೆ ನನ್ನ ಭೃತ್ಯತೆಗೆಂದ ।
ನೀಮಂತ್ರಮಖಿಳಮೂಲಸ್ತಂಭಮಿಂತಿದಱ ।
ಸಾಮರ್ಥ್ಯದಿಂ ಖಡ್ಗ ಪುಟನೆಗೆವುದಲ್ಲದೊಡೆ ಪೂಮಾಲೆಯಪ್ಪುದೆಂದು ॥ ೨೪

ಆದೊಡೆಲೆ ಜೀಯ ನನ್ನೊಡೆಯನಾಜ್ಞೆಗೆ ಹಾನಿ ।
ಯಾದೊಡೆನ್ನ ಭೃತ್ಯತೆ ಕೆಟ್ಟೊಡೇನಯ್ಯ ।
ಮಾದೇವನಂ ನೆನೆಯದಕಟ! ಬಱಗಾಯದಿಂ ನೀನಱಿಯಲೇಕೆಂದೆನೆ ॥
ಗಾದೆ ಬೇಡಂತಾಗೆ ಮಂತ್ರಲಕ್ಷಕನಾವು ।
ಪಾದುದಂ ಕೈಯೊಡನೆ ತೋರ್ಪೆನೆನಗೊಂದರಿದೆ !
ಭೇದವೇ ಹೊಯ್ದು ನೋಡೆನ್ನ ಸಾಮರ್ಥ್ಯಮಂ ಎಂದನಾಸಂಮಾಯಿಯು ॥ ೨೫

ಅದೆಯದೆ ಮಹಾದೇವ! ಹೊಯ್ದನಾ ಹೊಯ್ದನ ।
ಗ್ಗದ ಚೆಲ್ವಕುವರನಾ ತಲೆ ಬಿದ್ದುದಯ್ಯಯ್ಯ ।
ಮದನಾರಿ ಕೈಯ ಪಿಡಿಪಿಡಿ ನಿನ್ನ ರೂಪುದೋಱೆಂದಗಜೆಯಾಗಸದೊಳು ॥
ಬದಱಿ ಹೋ ಹೋ! ತವಕಮೇತಕೆ ಮುಂದೆ ಕಾ ।
ರ್ಯದ ನಿಷ್ಠೆಯುಂಟಬಲೆಯೆಂದು ಮಣಿಮಯವಿಮಾ ।
ನದೊಳಭವನಿರ್ದು ಸಂತೈಸೆ ಸಂದಾಯಿ ಖಡ್ಗವ ಹಿಡಿದು ಬೊಬ್ಬಿಱಿದನು ॥ ೨೬

ಹರಹರ! ಮಹಾದೇವ! ಹೊಡೆಯೆ ಕಂಧರಮಱಿದು ।
ಶಿರವಂಬರಕ್ಕೆ ಪುಟನೆಗೆಯೆ ಕುಂಡಲಿಯ ಪಿರಿ ।
ಯುರುಗನ ಫಣಾಮಣಿಪ್ರಭೆಯೊ ಹೃದ್ದೀಪಪ್ರಕಾಶಮೋ ಎನಲಟ್ಟೆಯಿಂ ॥
ಸ್ಫುರಿಸಿ ರಕ್ತದ ಧಾರೆ ಪೊಣ್ಮೆ ಭೃತ್ಯಂ ವಾಮ ।
ಕರಮನೊಡ್ಡಲ್ಕಲ್ಲಿ ಮಂಡಿಸದೆ ಮಸ್ತಕಂ ।
ಭರದಿಂ ನಮಃಶಿವಾಯೆಂದು ಪಂಚಾಕ್ಷರಿಯನಡಿಗಡಿಗೆ ಬಿಡದೊದಱಿತು ॥ ೨೭

ಅರರೆ! ಹೊಡೆದೂರ್ಧ್ವಕಿಟ್ಟಾಯುಧಂ ಶಿವಪುರಕೆ ।
ಕರವಾಳನುತ್ತಾಗಲಾಗಸಕ್ಕೆದ್ದು ಶಂ ।
ಕರನ ಪಱೆಗೆಂದಿಱಿದ ಮಸ್ತಕಮನೆಡಗೈಯೊಳಾಂತು ದಕ್ಷಿಣಕರದೊಳು ॥
ಸ್ಫುರಿಪ ಖಂಡೆಯವಾಂತು ಪಂಚಾಕ್ಷರಿಯನೊದಱು ।
ಮರಿದ ತಲೆಯಂ ಕಂಡು ಪುರಜನಂ ಪರಿಜನಂ ।
ಶರಣೆಂದು ಮಱುಗಿ ಕೀರ್ತಿಸುತಿರಲು ನೃಪಸಭೆಗೆ ಬಂದನಾಗಳ್ ಭೃತ್ಯನು ॥ ೨೮

ಕರದೊಳು ನಮಃಶಿವಾಯೆಂಬ ತನ್ನೃಪಸುತನ ।
ಶ್ಶಿರಗಾಣುತೆರ್ದೆ* ಬಿರಿದು ಪಾದಿ ತಲ್ಲಣಿಸೆ ಭಾ ।
ಪುರೆಯೆಂದು ಪುರಜನಂ ಪೊಗಳೆ ಹರಹರವುಘೇ ಜಾಳಬೊಲ್ಲನೆ ಶರಣರು ॥
ಗಿರಿಜೆ ಗಣನಿಕರದಿಂ ಸುರದುಂದುಭಿಯೆ ಮೊಱೆಪ ।
ಲರಲ ಸರಿಮಳೆಗಱೆಯಲುಜ್ಜುಗಿಸುವಮರರಿಂ ।
ಪರಮೇಶನಾಗಸದೊಳೀಕ್ಷಿಸುತ್ತಿರೆ ಸಭೆಗೆ ಬಂದನಂದಾಭೃತ್ಯನು ॥ ೨೯

ಬಾಯಿದಲೆ ಸಹಿತ ನಡೆತಂದು ಭೃತ್ಯಂ ಶಿರವ |
ಚೋಳರಾಯನ ಬಲದ ಕಯ್ಗೆ ಕುಡೆ ಸಂಸಾರ |
ತೊಳದವಶಿಖಿಯೆನಿಪ ಕೇಶಮಂ ಪಿಡಿದೆಡದ ಕರದೊಳಳವಡಿಸಿಕೊಂಡು ||
ಕೇಳು ಸಂದಾಯಿ ಪಂಚಾಕ್ಷರಿಯೊಳಿವನಸುವ |
ಮೇಳಿಸದೆ ನೀನಿದಿರೊಳಿಟ್ಟು ಮನದಿಂದೆ ಪಱು |
ದೇಱುತ್ತೆ ಮಂತ್ರಲಕ್ಷನ ಮಸ್ತಕಂ ಜಪಿಸುತಿದೆ ಪೊಡೆದ ಬಗೆವೇಱಿನೆ || ೩೦

ಮೊದಲೆಯ ಮಾತಾದುದಿನ್ನೇನು ದೇವ ನೀ |
ನಾದರಿಪುದೆನುತ ಕುವರನ ಕರೆದುಕೊಂಡು ತಾಂ |
ಹೋದುದನವಂ ಕುಳಿತುದಂ ತನ್ನ ನುಡಿಯನಾತನ ಮಾರ್ನುಡಿಯ ನಿಶ್ಚಯಾ ||
ಭೇದವಂ ತೋಱಿ ಸಂದಾಯಿ ಬೊಬ್ಬಿಡೆ ಸಭೆ ಮ |
ಹಾದೇವಯೆನಲಾರ್ದು ತನ್ನ ತಲೆಯಂ ಹೊಡೆದು |
ನಾದಿಸುತೆ ತನ್ನೆಡಗಯ್ಯೊಳಾನಲು ಶಿರಂ ಪಂಚಾಕ್ಷರಿಯನೊದಱಿತು || ೩೧

ಕಡುಚೆಲ್ವಕುವರನಂ ಕೊಲ್ಲಲಾಱದೆ ಮಂತ್ರಿ |
ಮಡಿದನೈಸಲೆಯರಸನಾಜ್ಞೆಯಂ ಮೀಱದಿಂ |
ದೊಡೆಯನ ನಿರೂಪದಿಂದಣುಗನಂ ತಲೆಯರಿದು ತನ್ನ ಶಿರಮಂ ಭೃತ್ಯನು ||
ಪೊಡೆದು ಕೊಂಡನು ಭಾಪೆನುತ್ತೆ ಸಭೆ ಕೊಂಡಾಡೆ |
ನಡೆದಟ್ಟೆ ಮಸ್ತಕವ ನೃಪನ ಬಲಗೈಗೆ ಕೊ |
ಟ್ಟೆಡೆಯೊಳಾವೇಶದಿಂ ಘೋಷದಿಂದುಚ್ಚರಿಸಿತಮಮ ! ಪಂಚಾಕ್ಷರಿಯನು || ೩೨

ನೋಡಿ ಕಲಿಭೃತ್ಯಶಿರಮಂ ಗಣೇಶ್ವರರ ಕೂ |
ಡಾಡುವ ಕುಮಾರಮಸ್ತಕಮಂ ಮಹೇಶ್ವರಂ |
ಗಾಡಿಯಿಂ ನುಡಿದನಂಗನೆ ನಿನ್ನ ಮಗನ ತಲೆಯೊಂದಕೆರಡೆಂದಿರಿಸಲು ||
ರೂಡಿಸಿದ ಕಲಿಗಣೇಶ್ವರನಂದು ದೀಕ್ಷೆಯಂ |
ಮಾಡಿ ಶಂಕರಗೊಱಿದ ಕರ್ಣಮಂತ್ರಂಗಳೋ |
ಪಾಡೆ ಶಿವನೂರ ಸೂಱಿಯಗೊಳುವ ಸೂಚನೆಗಳನಲೆಸೆದುವಿಕ್ಕೆಲದೊಳು || ೩೩

ಎರಡುತಲೆ ನುಡಿವ ಮಂತ್ರಾಮೃತದಿನಲ್ಲಿ ಶಂ |
ಕರನ ತಲೆಗಸು ಬಂದು ಪಂಚಾಕ್ಷರಿಯನೊದಱಿ |
ಯರಸುತನವೇ ಚೋಳ ಎನ್ನವನ ತಲೆಗೆಣೆಯಲ್ಲೆ ನಿನ್ನ ಮಗನ ರುಂಡ ||
ವರಭೃತ್ಯನೇ ನಿನಗೆ ಸಂದಾಯಿ ! ಮನ್ಮಹೇ |
ಶ್ವರನವನ ತಲೆಗೆನ್ನ ತಲೆಯೆ ಪಡಿಯೆಂದರಿದು |
ತಿರುಕೊಳವಿನಾಚಿ ಮಡಗಿದರೆ ಮುತ್ತಲೆಯೊಡನೆಯೊದಱಿತ್ತು ಶಿವಮಂತ್ರವ || ೩೪

ಆನಾರಿ ಭಕ್ತಂಗೆ ತಲೆಗುಡಲು ಬೋಧೆಯಿದು ।
ತಾನೆನಗೆ ತಲೆಯೀವೆನೆಂದು ತರಿಸಲ್ಕಾ ಪ್ರ ।
ಧಾನಿಯು ಶಿರಕ್ಕೆಯಸು ಬಂದು ನಾಲ್ದೆಸೆಗೆ ಕಳಸಂ ನಾಲ್ಕು ತಲೆ ನಡುವಣ ॥
ಜ್ಞಾನಿಶಂಕರನ ತಲೆ ಗುರುಕಳಶವೆನ್ನತಲೆ ।
ಯೀ ನವ್ಯಕಳಶಕ್ಕೆ ಕಾಣ್ಕೆಯೆಂದಾಚೋೞೆ ।
ಭೂನಾಥನರಿದಿರಿಸಿದಂ ಮಂತ್ರದುಚ್ಚರಣೆಸಹಿತ ನಿಜಮಸ್ತಕವನು ॥ ೩೭

ಆಱು ತಲೆಗಳ್ ಕಂಡು ಮಿತವಚನನಕ್ಕಟಾ ।
ನೀಱನಂ ಕೊಂದವಂ ನಾಂ ಮಂತ್ರಲಕ್ಷಂಗೆ ।
ದೂಱು ಬಯಲಿಂಗಾಯ್ತು ಲೋಕಕ್ಕೆಯತಿಹಿತವನಪ್ಪ ಸತ್ಯೇಂದ್ರನಣುಗಂ ॥
ಬೇಱುಱಿಯೆನಿನಿಬರ್ಗೆ ಯೆನ್ನಹರಣವನಿಂದು ।
ಮಾಱುವೆನೆನುತ್ತೆ ತನ್ನಯ ತಲೆಯನರಿದು ನಲ ।
ವೇಱಿ ಪಂಚಾಕ್ಷರಿಯ ಘನಘೋಷಸಹಿತ ನಿಜಮಸ್ತಕವ ತಂದಿರಿಸಿದಂ ॥ ೩೮

ಹರನೊಡನೆ ಶಂಕರನ ಮನವೊಂದುತಲೆ ಮಂತ್ರಿ ।
ವರನ ಸುಮಹೇಶನಿತ್ತಲೆ ಮಂತ್ರಲಕ್ಷನೀ ।
ಶ್ವರನ ಕೈಲಾಸಮಂ ಮುತ್ತಲೇ ಸಂದಾಯಿ ನಿರುತನಾಗುತಲೆ ಶಿವನ ॥
ತಿರುಕೊಳವಿನಾಚಿಯೈದುತಲೆ ಸತ್ಯದ ಸುಖವ ।
ನರಸನುಱೆ ಬಯಸಿ ಬಾಯೂಱುತಲೆ ಮಿತವಚನ ।
ನುರು ಚಿದಂಬುಧಿಯತ್ತ ಮುೞುಗುತೇೞುತಲೆ ನಿಶ್ಚೈಸಿ ತಲೆಗಳ್ ಕೊಟ್ಟರು ॥ ೩೯

ರಾಣಿಯಂತಃಪುರದೊಳಿರ್ದು ಕೇಳ್ದಳು ಪೞಗೆ ।
ಗೋಣನರಿದವರೆನಿಬರೆನೆ ತಾಯೆ ಚಿತ್ತೈಸು ।
ಮೋಱು ಶಂಕರಗೆ ನಿನ್ನಣುಗನೆವರಮ್ಮಂಗೆ ಸಂದಾಯಿ ಪತಿವೋಹಿಗೆ ॥
ಕ್ಷೋಣೀಶ್ವರನ ಪಱಿದ ತಲೆ ಸಮದೊಳಿರ್ದಪುವು ।
ಕಾಣೆವಾಮಿತವಚನಮಸ್ತಕಕ್ಕೆಣೆಯನೆಂ ।
ದೇಣನಯನೆಯರು ಶಶಿಮುಖದಮೃತವತಿಗೆ ಬಿನ್ನವಿಸಲು ಯಥಾಸ್ಥಿತಿಯನು ॥ ೪೦

ಏೞುತಲೆಗಳ ಬಗೆಯ ಕೇಳುತಲೆ ನಡೆತರು ।
ತ್ತೇೞು ತಲೆಗಳ ಕಾಣುತಾೞುತಲೆ ಸಂತಸದೊ ।
ಳೇೞುತಲೆಗಳ ಕುಳಿಕೋರ್ಗಳುತಲೆ ಬರ್ದಿನಿಂದೇೞುತಲೆ ಚಿತ್ಕಾಂತಿಯ ॥
ಆೞುತಲೆ ಮೆಱೆಯುತಿರಲೇೞುತಲೆ ಮಂತ್ರಮಂ ।
ಪೇೞುತಲೆ ಬೋಧಿಸುತ್ತೇೞು ತಲೆ ರಾಜಿಸಲು ।
ಬಾೞುತಲೆಯನಲೊಪ್ಪವೇೞುತಲೆಗಳ ಗುಣವನೀೞುತಲೆ ಸತಿ ನಿಂದಳು ॥ ೪೧

ಲೋಕವಱಿವಂತೆ ಸತ್ಯೇಂದ್ರಚೋಳನ ರಾಣಿ ।
ಯೀಕೆ ಮಿತವಚನನ ಶಿರಕ್ಕೆ ಪೞಿಗೊಡದಿರ್ದ ।
ಳೇಕೆನ್ನರೇ ಶರಣರೆಂದು ನಿಶ್ಚೈಸಿ ಖಡ್ಗವ ಪಿಡಿದು ಜಡಿದು ನಿಂದು ॥
ಶ್ರೀಕಂಠನೊಡನೆ ಚಂಡಿಕೆ ಭೂಪಸುಸ್ನತಿಯು ।
ನೇಕಾಂತವಂ ಮಾಡಲೆಳಸಿದಳೊ ಮುಕ್ತಿಯು ಮ ।
ಹಾಕವಾಟದ ಬೀಯಗದ ಕಯ್ಯೊ ಎನಲಮೃತವತಿ ಕೊರಲ್ಗಮರಿಸುತ್ತ ॥ ೪೦

ವೀರದ ಪಗಲ್ಬೋಳಭೂರಮಣ ನಿಜಲಿಂಗ ।
ಧೀರಚಿಕ್ಕಯ್ಯ ಸುಕುಮಾರಚೇಲಾಳ ಗಂ ।
ಭೀರದಪ್ಪಣ್ಣಂಗಳಾರಾಮತಂದೆ ಜಂಬೂರ ಮೋಕಾಳದೇವ ॥
ಸಾರಗೋವಿಂದ ಭಟ್ಟಾರಕರ ಶಿವಕ್ಷೀರ ।
ಧಾರಾಭಿಷೇಕದಾಚಾರಬಂಕಣ್ಣಂಗ ।
ಳಾದವ್ಯಾವಹ ಪಾದಸಾರಸಂಗಳ ನೆನೆಯುತಾರಾಣಿ ಶಿವನ ಭಜಿಸಿ ॥ ೪೧

ಪಱಿದಿರ್ದ ಕಂಠಸರವಂ ಪಡೆವ ಗುಣಿ ಕೊರ ।
ಲ್ಗಱಯುತಿರೆ ಕೈವಿಡಿದು ಕೆಂಜೆಡೆಯ ಪೆಱೆಯ ಬಾಂ ।
ದೊಱೆದಲೆಯ ಸರ್ಪಕುಂಡಲದ ಪಣೆಗಣ್ಣ ಪೊಸಬಿಸಗೊರಲ ಪಂಚಮುಖದ ॥
ಮೆಱೆವರ್ಧದೇಹದಗಜೆಯ ಗಜಾಜಿನವಸನ ।
ದುಱುವ ದಶಭುಜದುಡೆಯ ಪುಲಿದೊವಲ ತೊಡವಿನೊ ।
ಳೊಱಕದಾಯುಧದ ಕಾಲ್ಗಣ್ಣ ನಂದಿಯನೇಱಿದ ಭವ ಪ್ರಸನ್ನನಾದಂ ॥ ೪೨

ಕೋಟಿಕಾಮರ ಗೆಲ್ವ ಶಂಭು ಮುಕ್ತ್ಯಂಗನೆಯ ।
ಬೇಟದವರಿಗೆ ಕುಸುಮಸರಗಳಂ ಕಱೆವಂತೆ ।
ಮೀಟಪ್ಪ ಶರಣರಿವರಿದಿರು ಫಲಂಗಳ ಬಗೆವರಲ್ಲ ಪುಷ್ಪಂಗಳಿಪ್ಪ ॥
ಕೋಟಲೆಗಳೇಕೆ ಕೈಲಾಸದೊಳಗೆಂದು ಗಣ ।
ಕೂಟಂಗಳೆಯ್ದೆ ಚೆಲ್ಲಿದರೊ ಪೇೞೆನಲು ಶಶಿ ।
ಜೂಟಪ್ರಸನ್ನಕಾಲದೊಳು ಸುರದುಂದುಭಿಗಳೊದಱೆ ಪೂಮೞೆಗಱೆದುವು ॥ ೪೩

ಪೆಱೆದಲೆಯನಡಿಯನೋಲೈಸುತಿರ್ದರು ನಾಡೆ ।
ನಱುಗಂಪಿನಲರಂಬನಯ್ಯ ಬಿದಿಯುಮ*ದರ್ಕಾಂಬು ।
ರೆಱೆಯ ದೆಸೆಯಾಣ್ಮ*ರೆಲರ್ವಾಟ್ಟಿಗರು ಕರಿಗ*ಱೆವ ಪೆಡೆಮಣಿಯ ಬಿಸದಳದರು ॥
ಉಱುವಭೇದದ ಬಟ್ಟೆಯಱಿದ ಜತಿಗಳು ಸೊಬಗ ।
ಮೆಱೆವ ಸಗ್ಗದ ಚೆಲ್ವ ಸಱಿಮಿಂಡಿಯರು ಪಲ್ಲ ।
ವೊಱೆವೊಗಪ ಮಾದೇವಿಯೊಱಕದಱುವೊಗನೊಡನೆ ಕಱೆಗೊರಲನೊಪ್ಪಿರ್ದರು ॥ ೪೪

ಶ್ರೀನಂದಿನಾಥ ಭೃಂಗಿರಿಟಿ ವೀರೇಶ್ವರ ಮ ।
ಹಾನಂದಮುಖ್ಯಸತ್ಪ್ರಮಥರಿಂದಧಿಕ ರು ।
ದ್ರಾನೀಕದಿಂ ಪುರಾತನವರ್ಗದಿಂ ಸಿದ್ಧಸಾಧ್ಯರ ವಿಲಾಸದಿಂದೆ ॥
ತಾನೊಪ್ಪುತಿರ್ಪ ಸರ್ವೇಶ್ವರಂ ಸದ್ಭಕ್ತ ।
ಮಾನಿನಿಗೆ ಧರ್ಮಸಾಲೋಕ್ಯಾದಿಗಳೊಳಿಷ್ಟ ।
ಮೇನನಾದೊಡೆ ಕೊಡುವ ಕಾರುಣ್ಯದೇಳ್ಗೆಯಿಂ ಸವಿನುಡಿಯೊಳಿಂತೆಂದನು ॥ ೩೩

ಸತಿ ಕೇಳುವಾವಿನಿಬರೊಳಗೊರ್ಪನಸುಗೆಯಾ ।
ಣತಿಯಿತ್ತವಮ್ಮ ನಿನಗಾರ ಬಯಸ್ಬೇಕೆನಲು ।
ಪತಿಪುತ್ರಮುಖ್ಯರಟ್ಟಿದಿರ್ಪುದಂ ಲಕ್ಕಿಸದೆ ತಿರುಕೊಳವಿನಾಚಿಯಾತ್ಮ ॥
ಸುತಶಂಕರಂಗೆ ಹರಣಾಮನೀಯೆ ದೇವ ನಮ ।
ಗತಿಶಯದ ಸುಖವಲಾ ಭಕ್ತಸಂತೋಷದು ।
ನ್ನತಿ ನಿಮ್ಮನಲ್ಲದೆಳಸೆವು ನಮಗೆ ಭೋಗ ಮೋಕ್ಷಗಳ ನಿಮ್ಮಡಿಯೆ ಸಾಕ್ಷಿ ॥ ೩೪

ಎಂದ ವನಿತೆಯ ನುಡಿಗೆ ಪರಿಣಮಿಸಿ ಮೊದಲಾತ ।
ನಿಂದಿನಿಬರಟ್ಟಿಯ ಬೇಕಾಯ್ತು ತಾಂ ಬದುಕೆ ಮೋ ।
ಕ್ಷಂದೇಬ್ಬಿರಿವರೆಣಿಸು ನೀನಬಲೆ ಶಂಕರನ ತಲೆ ಮೊದಲುಗೊಂಡು ॥
ಒಂದೆರಡು ಮೂಱು ನಾಲ್ಕೈದಾಱು ಕೂಡಲೇ ।
ಟೆಂದಮಾತ್ರದೊಳೇಟಿಲುಜ್ಜುಗಿಸೆ ಬೞಿಕ ಭೋ ।
ರೆಂದುಲಿವ ದೇವವಾದ್ಯಂ ಶರಣತತಿಜಯಧ್ವಾನಂಗಳುಂ ಮೊಱೆದುವು ॥ ೩೫

ಅಲ್ಲಲ್ಲಿ ಬಿರ್ದಟ್ಟೆಗಳು ನೋಡೆ ತಮತಮಗೆ ।
ಯುಲ್ಲಾಸದಿಂ ಬಂದು ತಲೆಗಳಂ ಕೈಯೆರಡ ।
ಱಲ್ಲಿ ಪಿಡಿದೆತ್ತಿ ನಿಜದೇಹದೇವಾಲಯದ ಹೃದಯಾಬ್ಜಪೀಠದೊಳಗೆ ॥
ಸಲ್ಲಲಿತಸತ್ಪ್ರಾಣಲಿಂಗಮಂ ಬಯ್ತು ಸ ।
ತ್ಫಲ್ಲದ ಶಿರಃಕಮಳಕೋಟಿಯಿಂದರ್ಚಿಸಿದರ್ ।
ತೆಲ್ಲರು ಮಹಾಮಸ್ತಕಂಬಡೆಯೆ ಗಣತತಿಯಹೋ ಎಂದು ಕೀರ್ತಿಸಿದರು ॥ ೩೬

ಧರೆಗೆ ಶಿವಶಂಕರಂ ಸುಗುಣವಾರಿಧಿ ಮಂತ್ರಿ ।
ಯುರುದೋಷವನವಹ್ನಿ ಮಂತ್ರಲಕ್ಷಂ ಭಾವಿಯು ।
ಹರಣ ಸಂದಾಯಿ ಚಿದ್ವ್ಯೋಮ ಸತ್ಯೇಂದ್ರಚೋಳಂ ಚಂದ್ರವದನೆಯುಪ್ಪ ॥
ತಿರುಕೊಳವಿನಾಚಿ ರವಿಕುಲದೀಪ ಮಿತವಚನ ।
ವರಮಾತೆಯಮೃತವತಿಯರು ಕೂಡೆ ಸಾಷ್ಟಾಂಗ ।
ವೆಱಗಿ ದಂಡಪ್ರಣಾಮವ ಮಾಡಿ ಕೀರ್ತಿಸುತ್ತಿರ್ದರು ಮಹಾದೇವನ ॥ ೩೭

ಜಯಜಯ ಗಿರೀಶ ಜಯಜಯ ಕೃಷ್ಣಗಳತೇಜ ।
ಜಯ ರುದ್ರದೋರ್ದಂಡ ಜಯ ಸುಚಿದ್ಘನಪಿಂಡ ।
ಜಯಜಯ ಜಗದ್ಗುರುವೆ ಜಯಜಯ ಪರಾತ್ಪರವೆ ಜಯ ಸರ್ವಭವನೆ ಶಿವನೆ ॥
ಜಯ ಮೃಡ ಮಹಾರಕ್ಷ ಜಯ ಹರಲಲಾಟಾಕ್ಷ ।
ಜಯ ಶಕ್ತಿನಿಜರೂಪ ಜಗು ದೇಶಿಕಾಲಾಪ ।
ಜಯ ಪಂಚಕೃತ್ಯಸಂಸ್ತುತ್ಯ ಯೆಂದಂ ಚೋಳರಾಯ ನೈರ್ಮಲ್ಯಕಾಯ ॥ ೫೦

ಅನಿತಕ್ಕೆ ನವರತ್ನಖಚಿತಪುಷ್ಪಕವೆಂಟು ।
ಕನಕಮಯಕೋಟಿಸೂರ್ಯಪ್ರಕಾಶಂಗಳಿಂ ।
ಘನಮಾರ್ಗದಿಂದಿೞಿದು ಬಂದೊಡವೞೊಳಗೆಯೋರೊರ್ವರಂ ಕುಳ್ಳಿರಿಸುತೆ ॥
ವಿನುತದಿಕ್ಪಾಲಕರ ಮಕುಟಂಗಳೊ ಕದ್ರು ।
ವಿನ ಮಕ್ಕಳಷ್ಟಕುಲಭೋಗಿಗಳ ತಲೆರನ್ನ ।
ಮ...ಶಿತವಲ್ಲೆಂಬ ಬೆಳಗಿಂದುಘೀಎನಲು ನೆಗೆದುವಾಗಸವಟ್ಟೆಗೆ ॥ ೫೧

ದೇವದುಂದುಭಿ ಮೊೞಗೆ ಗಿರಿಜೆಯ ಪಯೋಧರಂ ।
ತಾವ್ರೊಡನೆ ತೊಱೆಯೆ ತದಪಾಂಗದೊಳ್ ಮಿಂಚೆ ಕುಸು ।
ಮಾವಳಿಯ ವೃಷ್ಟಿಗಳ್ ಕಱೆಯೆ ಮುನ್ನೆಲ್ಲರರಿದೆನೆ ಬೆಳೆದ ಫಲದೊಟ್ಟಲು ॥
ತೀವಿ ಮಣಿರಥದೊಳಗವಶ್ಯದಿಂದಾರಂಭ ।
ದಾವಿಭುವೆನಿಪ್ಪ ಶಿವನಾಲಯಕೆ ಕೊಂಡುಯ್ವ ।
ಭಾವದಿಂ ಸರ್ವಲೋಕಂ ನಮಿಸೆ ಪುಷ್ಪಕಂ ಬಂದುವಾಕೈಲಾಸಕೆ ॥ ೫೨

ಬಂದು ನಂದೀಶ್ವರನ ಬಾಗಿಲೊಳು ಧರ್ಮವತಿ ।
ಯಿಂದಲೇೞ್ತಂದವರು ಪುಷ್ಪಕಂಗಳನಿೞಿದು ।
ಮುಂದೈದೆ ಸಿಂಹಾಸನಾಸೀನನಾದ ಸರ್ವೇಶ್ವರನ ಸಭೆಯ ಪೊಕ್ಕು ॥
ನಿಂದೆಂಟು ಶಿಷ್ಟರಂ ತೆಗೆದು ಬಿಗಿಯಪ್ಪುತಾ ।
ನಂದಿಸುತ ನಂದೀಶ ಭೃಂಗಿರಿಟಿ ವೀರಗಣ ।
ವೃಂದಕ್ಕೆಯಮರಗುಂಡದ ಮಲ್ಲಿಕಾರ್ಜುನಂ ತೋಱಿ ಪೊಗೞುತ್ತಿರ್ದನು ॥ ೫೩

ಶಿತಿಕಂಠಭಕ್ತ ಶಂಕರನಶ್ವದಿಂ ಮಡಿದ ।
ಕತದಿಂದ ಸಂಪಾಯಿ ಪತಿವ್ರೋಹಿ ಮಿತವಚನ ।
ರತಿನಿಷ್ಠೆಯಿಂ ಮಡಿಯೆ ಪೞಿಗೆ ಪೞಿಯಾ ಮಂತ್ರಲಕ್ಷತಿರುಕೊಳವಿನಾಚಿ ॥
ನುತಚೋಳ ತಱಿದ ತಲೆ ಪಂಚಾಕ್ಷರಿಯನೊದಱೆ ।
ಮೃತವಾಗುವಮೃತವತಿಗೊಲಿದು ಬೇಡೆನಲಾಪ್ತ ।
ತತಿಯುೞಿದು ನನ್ನವನ ಬಯಸಿದಳು ನೋಡಿವರ ಗಣನಿಕರವೆಂದನಭವಂ ॥ ೫೪

ನೋಡಯ್ಯ ನಂದೀಶ ಧರ್ಮವತಿಯಾಣ್ಮನಂ ।
ನೋಡು ಭೃಂಗೀಶ ಪತಿವ್ರೋಹಿಯಂ ವೀರೇಶ ।
ನೋಡು ಸಂದಾಯಿಯಂ ಮಿತವಚನನಂ ಮಂತ್ರಲಕ್ಷನಂ ಶಂಕರನನು ॥
ನೋಡು ಗಣಪಸ್ಕಂಧ ವೃಷಮನ್ಯಗಳು ನೀವು ।
ನ್ನೋಡಿ ತಿರುಕೊಳನಿನಾಚಿಯನಮೃತವತಿಯ ಕೊಂ ।
ಡಾಡಿರೇ ಗಂಗೆ ಗೌರಿಯರೆಂದು ತೋಱಿ ವೈಭವದಿಂದೆ ಶಿವನೊಪ್ಪಿದಂ ॥ ೫೬

ಆಮೋಷಮುಖನಮಿತವೀರವೃಷಭಪ್ರಿಯಂ ।
ಶ್ರೀಮಿಥುನರಪ್ಪ ಕಿನ್ನರನಾಯಕರ್ ಕಟಕ ।
ರಾಮರುಱ ಪಾಡುತಿಧೆ ಸಿಂಹಮಧ್ಯದ ಕನ್ನೆಯರು ತೊೞ್ತುೞಂ ತೊನೆಯಲು ॥
ಚಾಮರವನಿಡೆ ವೃಶ್ಚಿಕಧ್ವಜಂ ಧನುವಿಡಿದು ।
ವಾಮಕರನಾಗಿ ಸೇವಿಸೆ ಕುಂಭ ಕುಚಮೀನ ।
ಕೋಮಲಾಕ್ಷಿಯರಪ್ಪ ಸಿದ್ಧವನಿತೆಯರು ಜಯವಿಡೆ ದಯಾರಾಶಿ ಮೆಱೆದಂ ॥ ೫೭

ಮೆಱೆವ ತಣ್ಣಗಿರ್ಗಲ್ಲ ಮಂಟಪದೊಳಮರ್ದಂಬ ।
ರೆಱೆಯ ಮೊದಲಾದವರ ಸಱಮಿಂಡಿಯರ್ಕಳಿಂ ।
ದುಱುವ ಸಂಭ್ರಮದೆ ಕುಳಿರ್ವಟ್ಟಣಾಗಿಯೊಡನೆ ಪಸನಿಂದು ಕೆಂಬರಲ ತಲೆಯು ॥
ಮಱಿವಾವಿನುಂಗುರದ ಕೈನೀಡೆ ಕಂಡಂಜು ।
ತಿರದೆ ಶಿವಯೆಂದು ಗಂಡನ ಪೆಸರೆನುತ್ತೆ ತಲೆ ।
ಯೆಱಗಿ ನಾಣ್ಚಿದ ಸತಿಯ ನೋಡಿ ನಸುನಗುವ ಗಂಗಾಧರಂ ಸಲಹುಗೆಮ್ಮಂ ॥ ೫೮

ಬಾಣಗುಣವಾರ್ಧಿವಿಧು ಸಂದ ಶಕವರ್ಷದಿಂ ।
ಮೇಣಮಲವತ್ಸರಂ ಶ್ರೀಮುಖಂ ಕಾರ್ತಿಕ ಧು ।
ರೀಣವಹ ಶುದ್ಧಸಪ್ತಮಿ ಶುಕ್ರವಾರವಾಶ್ರವಣನಕ್ಷತ್ರದಲ್ಲಿ ॥
† ಜಾಣನಾನಾಗಲಿಂಗಾಹ್ವಯಸುತಂ ಶಿವ ।
ಪ್ರಾಣಲಿಂಗಪ್ಪನಾತ್ಮಜ ಚೇರಮಾಂಕಗ ।
ಕ್ಷೀಣವೆನೆ ಮಲ್ಲಣಾರ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ ॥ ೫೯

ಶ್ರೀಮುಖಾಬ್ದದೊಳಿದು ಸಮಾಪ್ತಿಯಾಯಿತ್ತಿದಂ ।
ಪ್ರೇಮದಿಂದೋದಿದೊಡೆ ಭಾವಮುಂ ಪ್ರಾಜ್ಞರ ಮ ।
ಹಾಮನಸ್ಸಿಂಗೀವ ಧಾತುಲಕ್ಷಣಗಳಂಟೈಶ್ವರಂ ಬಹುಧಾನ್ಯದ ॥

---

† ಜಾಣಿನಿಂನಾಗಲಿಂಗಯ್ಯಗಳಸುತ ಶಿವ ।
ಪ್ರಾಣಿಗಂಗಪ್ಪವಣಾಗಂ ಚೇರಮಾಂಕಗ ।
ಕ್ಷೀಣವೆನೆ ಮಲ್ಲಣಾಚಾರ್ಯಂ ನಿರೂಪಿಸಿದ ಭಾವಚಿಂತಾರತ್ನಮಂ॥ ಎಂದು ಪಾಠಾಂತರ

ಸೋಮಗ್ರಧನರಾಜಿಯಾದಿವೈಭವಗಳಿಂ ಜನ |
ಸ್ತೋಮಕ್ಕೆ ತಾಂ ಶತಾಯುರ್ವೈಭಪುರುಷವಚ |
ಪ್ರಾಮಾಣ್ಯದಾಯುವಂ ಭುಕ್ತಿಯಂ ಮುಕ್ತಿಯಂ ಕುಡುವನಗಜಾರಮಣನು || ೬೧

ಶರಣರ ಕೃಪಾಮೃತದ ವರುಷದೊಳಗಿಳೆಯಲ್ಲಿ |
ಸುರಭಿಗಳ ಕಱೆಯಲಿ ಶಿವಪ್ರಸಾದೇಚ್ಛಾಕರ |
ಕರುಣದೆ ಸುಭಿಕ್ಷಂಗಳೊದವಲಿ ಸಮಸ್ತಜನಮಖಿಲಸುಖದಿಂ ಬಾೞಲಿ ||
ವರನೃಪರು ಧರ್ಮಶಿವಭಕ್ತಿಯಿಂದಾಳಲು |
ರ್ವರೆಯಲ್ಲಿ ಭಾವಚಿಂತಾರತ್ನ ರವಿಚಂದ್ರ |
ರಿರುವ ವರೆಗೆಲ್ಲ ಮಾಹೇಶ್ವರರು ಲಾಲಿಸಲಿ ಪಾಲಿಸಲಿ ಕೊಂಡಾಡಲಿ || ೬೨

ಪಾಹಿ ಮಹಿಮಾಗ್ರಗಣ್ಯ ಪಾಹಿ ಭವಗುಣಲೂನ |
ಪಾಹಿ ಜಯ ಜಿತಕಾಮ ಪಾಹಿ ಗಿರಿಜಾರಾಮ |
ಪಾಹಿ ಸಿದ್ಧನರಾಶಿ ಪಾಹಿ ಸತ್ಕೃತಕಾಶಿ ಪಾಹಿ ದೇವಾ ಸುಭಾವ ||
ಪಾಹಿ ನಿರ್ಮಲಕಾಯ ಪಾಹಿ ನಿಗಮಾಜ್ಞೇಯ |
ಪಾಹಿ ಪಂಚಾಕ್ಷರೀರೂಪ ಜಯ ನಿಷ್ಪಾಪ |
ಪಾಹಿ ಯೆಮ್ಮಮರಗುಂಡದ ಮಲ್ಲಿನಾಥ ಶಿವಮಸ್ತು ಶುಭಮಸ್ತು ಸತತಂ || ೬೩

ಮನುಸಂಭವಾಗ್ರದಶನೀಪರಾಜಿನ ಚೋಳ |
ಕನದಲಘುಚರಮಹಾಸಿದ್ಧಿಮುಖಕಮಲಾಭಿ |
ಜನಪುಂಡರೀಕ ವಾಮಾಧೋರ್ಧ್ವದೋದ್ಭೂತಮಹನೀಯಮಾನಸ್ಥಿತ ||
ಘನಭಾರಶತಕೋಟಿಕೋಟಿತೇಜೋವಿರೋ |
ಚನ ಭೂವರಾನಂತಸನ್ನಯಸುವಿಶ್ವ ತುಂಡ |
‡ಜನಿತೋಸ್ರಮಾಲಿಯೆನಿಪಮರಗುಂಡದ ಮಲ್ಲಿನಾಥ ರಕ್ಷಿಪುದೆಮ್ಮನು || ೬೪

ಇದು ಸಕಲಭಕ್ತಪದಪಂಕೇಜರೇಣುಮ |
ಸ್ತದ ಮಲ್ಲಣಾರ್ಯನಾಚೇರಮಾಂಕಂಗೆ ಬೆಸ |
ಸಿದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವೆಮಳಕರ್ಣ ||
ಹೃದಯಮಸ್ತಕವದನಸರ್ವಾಂಗಸೌಖ್ಯಕಾ |
ಸ್ಪದವಖಿಳಸುಜನರ್ಗೆ ಪಂಚಾಕ್ಷರಿಯ ಮಹ |
ತ್ವದ ಬೋಧೆಯಿಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದು || ೬೫

ಒಂಬತ್ತನೆಯ ಸಂಧಿ ಮುಗಿದುದು

ಭಾವಚಿಂತಾರತ್ನಕೃತಿ ಪೂರ್ತಿಯಾಯಿತು.

‡ಜನಿಕೋಶಪ್ರಮಾಲಿ, ಎಂದು ಪಾಠಾಂತರಂ